ಯಕ್ಷಗಾನ ಸೌರಭ

ಲೇಖಕ:

ಮಲ್ಪೆ ಶಂಕರನಾರಾಯಣ ಸಾಮಗ ಹರಿದಾಸ

೧೯೬೧

ಪ್ರಕಾಶಕರು:

ಗ್ರಾಮಸೇವಾ ಪ್ರತಿಷ್ಠಾನ

ಮಣಿಪಾಲ : : ದ. ಕನ್ನಡ

ಯಕ್ಷಗಾನ ಸೌರಭ

ಲೇಖಕ: Author

ಮಲ್ಪೆ ಶಂಕರನಾರಾಯಣ ಸಾಮಗ ಹರಿದಾಸ

Malpe Shankar Narayana Samuga

೧೯೬೧

ಪ್ರಕಾಶಕರು:

ಗ್ರಾಮಸೇವಾ ಪ್ರತಿಷ್ಠಾನ

ಮಣಿಪಾಲ : : ದ. ಕನ್ನಡ

೧೯೬೧

ಬೆಲೆ: ರೂ. ೧–೫೦

ಮುದ್ರಕರು:

ಮಣಿಪಾಲ ಪವರ್ ಪ್ರೆಸ್,
ಮಣಿಪಾಲ

ಶ್ರೀ ಎನ್. ಭೀಮ ಭಟ್ಟ,

ಸಾಹಿತ್ಯಶಿರೋಮಣಿ,

ಕನ್ಯಾನ, ದ. ಕ.

ಧರ್ಮ ಹಾಗೂ ಭಗವದ್ಭಕ್ತಿಗಳ ಸಂಬಂಧವನ್ನು ನಿರೂಪಿಸಿ, ಇವುಗಳೇ ನಮ್ಮ ಸಂಸ್ಕೃತಿಯ ತಿರುಳು ಎಂದು ಪ್ರತಿಪಾದಿಸಿ, ಈ ಉತ್ಕೃಷ್ಟ ಸಂಸ್ಕೃತಿಯ ಅಸ್ತಿತ್ವಕ್ಕೂ ಪ್ರಸಾರಕ್ಕೂ ದೇಗುಲಗಳಿಂದಾಗುವ ಪ್ರಯೋಜನವನ್ನು ವಿವರಿಸಿ, ಯಕ್ಷಗಾನ ಕಲೆಯ ಮೂಲಕ ನೀತಿಬೋಧೆ ಮಾಡಿ, ಜನಜೀವನವನ್ನು ಮೇಲೆತ್ತುವ ಸತ್ಕಾರ್ಯದಲ್ಲಿ ಈ ಕ್ಷೇತ್ರವೆಷ್ಟು ಕೃತಕೃತ್ಯವಾಗಿದೆ ಎಂದು ತಿಳಿಸಿ, ಪ್ರಕೃತ ಮೇಳದವರು ಆಡುತ್ತಿರುವ ಪ್ರಸಂಗಗಳಿಂದಾಗುವ ನೀತಿಬೋಧೆಯನ್ನೂ ರಸವತ್ತಾಗಿ ಇಲ್ಲಿ ನಿರೂಪಿಸಲಾಗಿದೆ. ಪ್ರಸಂಗಗಳಿಂದಾಗುವ ನೀತಿ ಬೋಧಾಂಶವನ್ನು ಮೊದಲಾಗಿ ನಿರೂಪಿಸಿ, ಅದನ್ನು ಆ ಪ್ರಸಂಗದ ಕಥೆ ಹೇಗೆ ಪ್ರತಿಪಾದಿಸುತ್ತಿದೆ ಎಂಬುದನ್ನು ಶ್ರೀ ಹರಿದಾಸ ಶಂಕರ ನಾರಾಯಣ ಸಾಮಗರು ಇಲ್ಲಿ ತಿಳಿಸಿದ್ದಾರೆ. ಕಥೆಯೊಂದಿಗೆ ನೀತಿಯೂ ಗ್ರಾಹ್ಯವಾಗುವಂತೆ ಮಾಡಲು ಇದು ಯುಕ್ತ ಪ್ರಯತ್ನವಾಗಿದೆ. ಒಂದು ಆದರ್ಶ ಕೈಪಿಡಿ ಎಂದರೂ ಸಲ್ಲುವುದು. ವಿದ್ಯಾರ್ಥಿಗಳಿಗೆ ಶ್ರೀ ಸಾಮಗರ ಭಾಷಾಪ್ರೌಢಿಮೆ ಜೀರ್ಣಿಸಲು ತುಸು ಕಷ್ಟವೆನಿಸಿದರೂ, ನೀತಿಬೋಧೆ ಕಥಾವಸ್ತುಗಳಿಂದಾಗಿ ಬಹಳ ಪ್ರಯೋಜನವಾಗಬಹುದಾದುದರಿಂದ ಈ ಕ್ಷೇತ್ರದಲ್ಲಿ ಈ ಕೃತಿಯನ್ನು ಬಳಸಿದಲ್ಲಿ ಯಕ್ಷಗಾನದ ಸತ್ಪರಿಣಾಮವನ್ನೂ ಅಂದವನ್ನೂ ಸಂಸ್ಕೃತಿಯ ತಿರುಳನ್ನೂ ಸುಲಭವಾಗಿ ಮಕ್ಕಳ ಹೃದಯದಲ್ಲಿ ಹುದುಗಿಸಿ, ತದ್ದ್ವಾರಾ ಜನಜೀವನವನ್ನು ಮೇಲೆತ್ತಬಹುದು. ಅಂಥ ಕೃತಿಗಳು ಇನ್ನಷ್ಟು ಹೆಚ್ಚಿದಲ್ಲಿ ನೀತಿವಂತರಾಗಿ ಬಾಳುವ ಬಯಕೆಯುಳ್ಳ ಜನರಿಗೊಂದು ಉತ್ತಮ ನಿದರ್ಶನ ದೊರೆತಂತಾಗಬಹುದು. ಶ್ರೀ ಸಾಮಗರಿಂದ ಇಂಥ ಕೃತಿಗಳು ಇನ್ನಷ್ಟು ಹೆಚ್ಚಿಸಲ್ಪಡಲೆಂದು ಹಾರೈಸುವುದರೊಂದಿಗೆ ಯಕ್ಷಗಾನ ಕಲೆಯ ಬಾವುಟವು ಮೇಲೇರಲೆಂದು ಕೋರುತ್ತೇವೆ.

(ಸಹಿ) ಎನ್. ಭೀಮ ಭಟ್ಟ

ಒಂದು ಅಭಿಪ್ರಾಯ

ಕಲೆಯ ಮೂಲ ಧರ್ಮದಲ್ಲಿ. ಧರ್ಮಪ್ರಸಾರವೇ ನಾಟಕ ಕಲೆಯ ಮೂಲ ಸ್ಫೂರ್ತಿ. ಗ್ರೀಕ್ ನಾಟಕ ಡಯೊನೈಸಸ್ ದೇವರ ವೇದಿಕೆಯ ಹತ್ತಿರ ಆರಂಭ ವಾಯಿತು. ಭಾರತೀಯ ನಾಟಕವೂ ಮೊದಲಾದುದು ಪುರಾಣ ಪುಣ್ಯಕಥೆಗಳನ್ನು ಕಣ್ಣಿಗೆ ಕಟ್ಟುವಂತೆ ತೋರಿಸುವ ಯತ್ನದಲ್ಲಿ. ಧರ್ಮಪ್ರಸಾರಕ್ಕೂ ನಾಟಕ ಕಲೆಗೂ ಇರುವ ಈ ಹೊಕ್ಕಳು ಬಳ್ಳಿ ಬೇರೆಲ್ಲಾ ಕಡೆಗಳಲ್ಲಿಯೂ ಕಡಿದಿದ್ದರೂ ಯಕ್ಷಗಾನದ ಮಟ್ಟಿಗೆ ಉಳಿದಿದೆ. ಇಂದೂ ದೇವಸ್ಥಾನಗಳು ಮೇಳಗಳನ್ನು ನಡೆಸುತ್ತಿವೆ. ಸಾಹಿತ್ಯ, ಸಂಗೀತ, ನೃತ್ಯ, ವೇಷಭೂಷಣ, ಅಭಿನಯಗಳ ಸಮಾವೇಶದಿಂದ ಯಕ್ಷಗಾನದ ಕಲೆ ಭಕ್ತಿ ಪ್ರಚೋದನೆಯನ್ನೂ ಧರ್ಮಪ್ರಸಾರವನ್ನೂ ಪುರಾಣ ಕತೆಗಳ ರಸಮಯ ಸನ್ನಿವೇಶಗಳ ಮೂಲಕ ಅತ್ಯಂತ ಪರಿಣಾಮಕಾರಿಯಾಗಿ ಮಾಡುತ್ತಿದೆ. ಯಕ್ಷಗಾನದ ಆಟವನ್ನು ಇರುಳೆಲ್ಲಾ ನೋಡಿದವರ ಮನಸ್ಸಿನಲ್ಲಿ ರಸಾನುಭವದ ಆನಂದದ ಜೊತೆಗೆ ಮಹಾವ್ಯಕ್ತಿಗಳ ಆದರ್ಶ, ಧರ್ಮಸೂಕ್ಷ್ಮಗಳ ಆವಿಷ್ಕರಣ ಇವುಗಳಿಂದಾಗುವ ಜ್ಞಾನ ವೃದ್ಧಿಯೂ ಆಗುತ್ತದೆ.

ಉತ್ತಮ ಹರಿದಾಸರೂ ಅರ್ಥಗಾರರೂ ನಟರೂ ಆದ ಮಲ್ಪೆಯ ಶ್ರೀ ಶಂಕರ ನಾರಾಯಣ ಸಾಮಗರು ತಮ್ಮ ಈ ಲೇಖನದಲ್ಲಿ ಯಕ್ಷಗಾನ ಕಲೆಯ ಧರ್ಮವಿವಕ್ಷಾ ಮುಖವನ್ನು ಅತ್ಯುತ್ತಮವಾಗಿ ಚಿತ್ರಿಸಿದ್ದಾರೆ. ಧರ್ಮ, ಭಕ್ತಿ, ಸತ್ಯ, ವಿದ್ಯೆ, ಗುರು, ದೈವ, ಅರ್ಥ, ಕಾಮ, ಕೋಪ, ಅಹಂಕಾರ ಮುಂತಾದ ಮುಖ್ಯ ಶಬ್ದಗಳ ಅರ್ಥವನ್ನೂ ಅವರು ವಿವರಿಸಿರುವ ರೀತಿ ಅವರ ಧರ್ಮಪ್ರಜ್ಞೆ ಎಷ್ಟು ಶೀಘ್ರವಾದುದೆಂದು ತೋರಿಸುತ್ತದೆ. ಯಕ್ಷಗಾನದ ಲಕ್ಷ್ಯ ಧರ್ಮಪ್ರಸಾರವೆಂಬುದನ್ನು ಅವರು ಪ್ರಸ್ತಾಪಿಸಿ ನಿದರ್ಶನಕ್ಕೆ ಐವತ್ತು ಆಟಗಳನ್ನು ಚರ್ಚಿಸಿದ್ದಾರೆ. 'ಪಾಪೀ ಪಾಪೇನ ಹನ್ಯತೇ' ಎಂಬ ದುರಂತ ಸತ್ಯವನ್ನು ಎಷ್ಟೋ ಗುಣಸಂಪನ್ನರಾದ ರಾವಣ ದುರ್ಯೋಧನರ ಮತ್ತು ಅವರ ಬೆಂಬಲಿಗರ ಪ್ರಸಂಗಗಳಿಂದ ಉದಾಹರಿಸಿ ದೃಢಪಡಿಸಿದ್ದಾರೆ. ರುಕ್ಮಿಣಿ ಪ್ರಮೀಳಾ ಇವರ ಪ್ರಸಂಗಗಳಲ್ಲಿ ಸ್ತ್ರೀಯ ಸ್ಥಾನ ಗೌರವವನ್ನು ಸುಂದರವಾಗಿ ಪ್ರತಿಪಾದಿಸಿದ್ದಾರೆ. ದ್ರೌಪದೀ ವಸ್ತ್ರಾಪಹರಣ ಪ್ರಸಂಗದಲ್ಲಿ ಧರ್ಮದ ಸ್ವರೂಪ ಕೆಲವು ಕಠಿಣ ಸಂದರ್ಭಗಳಲ್ಲಿ ದುಜ್ಞೇಯವಾಗುವುದೆಂಬುದನ್ನೂ ಸೂಚಿಸಿದ್ದಾರೆ. ಒಟ್ಟಾರೆ ಅವರು ಮನಮುಟ್ಟುವಂತೆ ಚಿತ್ರಿಸಿ ಅನುಕರಣಕ್ಕೆ ಎತ್ತಿ ಹಿಡಿದಿರುವುದು ಭಗವದ್ಭಕ್ತಿ, ಪರೋಪಕಾರ ಮತ್ತು ಉತ್ಸಾಹಶೀಲತೆ. ಆದುದರಿಂದ ಈ ಲೇಖನ ನಮ್ಮ ಜನಕ್ಕೆ ಧರ್ಮದರ್ಪಣ, ನೀತಿಚಿಂತಾಮಣಿಯಾಗಬಲ್ಲದು.

ಈ ಲೇಖನದ ಒಂದೇ ಕೊರತೆ-ಇದನ್ನು ಕೊರತೆಯೆಂದು ಕರೆಯಬಹುದಾದರೆ-ಶ್ರೀ ಸಾಮಗರ ಭಾಷೆಯ ಪ್ರೌಢಿಮೆ. ಶೈಲಿ ಸರಳವಾಗಿದ್ದಿದ್ದರೆ ಜನಸಾಮಾನ್ಯಕ್ಕೆ

ಉಪಕಾರವಾಗುತ್ತಿತ್ತು. ಈಗಾದರೋ ಈ ಲೇಖನ ಪಂಡಿತರಂಜಕ ಮಾತ್ರವಾಗಿದೆ. ಆದರೂ ವಿಚಾರ ವಿಮರ್ಶನಕ್ಕೂ ರಸಪುಂಜಕತೆಗೂ ಒಮ್ಮೆಗೇ ಅನುಕೂಲಿಸುವ ಮತ್ತು ಸಮಗ್ರತೆಯನ್ನೂ ಸಂಕ್ಷಿಪ್ತತೆಯನ್ನೂ ಒಮ್ಮೆಗೇ ಸಾಧಿಸಲು ನೆರವು ಮಾಡಿಕೊಟ್ಟಿರುವ ಅಲಂಕಾರವೂ ಪರಿಣಾಮಕಾರಿಯೂ ಆದ ಶ್ರೀ ಸಾಮುಗರ ಸಂಸ್ಕೃತ ಭೂಯಿಷ್ಠ ಶೈಲಿ ರಸಿಕರಿಗೆ ಹೃದ್ಯವಾಗಿದೆ. ಹೀಗೆಯೇ ಶ್ರೀ ಸಾಮುಗರು ಕಲಾದೃಷ್ಟಿಯಿಂದ ಆಟಗಳ ರಸಮಯ ಸನ್ನಿವೇಶಗಳನ್ನು ವಿಮರ್ಶಿಸುವ 'ಐವತ್ತು ಯಕ್ಷಗಾನ ಆಟಗಳು' ಎಂಬ ಇನ್ನೊಂದು ಸುದೀರ್ಘ ಸುಂದರ ಗ್ರಂಥವನ್ನು ಬರೆದು ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ತಮ್ಮ ಶ್ರೇಷ್ಠ ಸೇವೆಯನ್ನು ಸಲ್ಲಿಸಲಿ ಎಂದು ಅವರಲ್ಲಿ ಕೋರುತ್ತೇನೆ.

ಕೆ. ನರಸಿಂಹ ಮೂರ್ತಿ

ಶ್ರೀ ಸಾಮುಗರು ಸಂಗ್ರಹಿಸದ ಯಕ್ಷಗಾನ ಪ್ರಸಂಗಸಾರವನ್ನು ನೋಡಿದೆ. ಆಕರ್ಷಕ ಶೈಲಿಯಲ್ಲಿ ಬರೆದಿದ್ದಾರೆ. ಯಕ್ಷಗಾನ ಪ್ರಸಂಗಗಳ ಅವರ ಧಾಟಿಯ ಅರ್ಥವರ್ಣನೆಯು ಮನಮೋಹಕವಾಗಿದೆ ಮತ್ತು ಅತ್ಯಪೂರ್ವವಾಗಿದೆ. ಆದುದರಿಂದ ಅವರ ಪ್ರಸಿದ್ಧ ವ್ಯಾಖ್ಯಾನಗಳಾದ ಹರಿಶ್ಚಂದ್ರ, ದಕ್ಷ ಮುಂತಾದ ಪಾತ್ರಗಳ ವ್ಯಾವರ್ಣನ ನಿರೂಪಣದ ಬಗ್ಗೆ ಕೆಲವಾದರೂ ಪ್ರಸಂಗಗಳಿಗೆ ಅರ್ಥವಚನಗಳನ್ನು ಬರೆದು ಪ್ರಕಟಿಸಿದರೆ ಅಮೂಲ್ಯವಾದ ಅವರ ಮಾದರಿ "ಅರ್ಥವು" ಶಾಶ್ವತವಾಗುವುದೆಂದು ಅಪೇಕ್ಷಿಸಿ ಅದು ಬೇಗನೆ ಪ್ರಕಟವಾಗುವಂತೆಯೂ ಪ್ರಚಾರವಾಗಿ ಪ್ರತಿಯೊಬ್ಬನೂ ನೋಡುವಂತೆಯೂ ಆಗಲೆಂದು ಆಶಿಸುತ್ತೇನೆ. ಈ ಸಾರಸಂಗ್ರಹದ ಮತ್ತು ಇತರ ಅವರ ವಾಕ್ಯಸರಣಿಯು ಯಮಕ ಅನುಪ್ರಾಸಗಳಿಂದ ಸರಪಣಿಯಂತೆ ಉದ್ದಕಂಡರೂ ರಸ, ಭಾವ, ಅರ್ಥ, ಔಚಿತ್ಯಗಳಿಗೆ ಅನುಗುಣವಾಗಿ ಮೀರದೆ ಹೃದ್ಯವಾಗಿ ಉದಾತ್ತ ಶೈಲಿಯು ಅಚ್ಛೋತ್ತಿ ಧಾರೆಯಂತೆ ಬರುವುದರಿಂದ ನಿರರ್ಗಳ ರಭಸದ ಆ ಭಾಷಾಂಶವನ್ನು ಅಳಿಯಗೊಡುವುದಕ್ಕೆ ನಾನು ಸರ್ವಥಾ ಸಮ್ಮತಿಸಲಾರೆ. ತಿಳಿಯದವನಿಗೂ ಕೇಳುತ್ತಾ ಕೇಳುತ್ತಾ ಸಂಸ್ಕಾರವಾಗುವುದು. ಇತರ ಭಾಷೆಗಳಲ್ಲಿ ಪ್ರೌಢ ಲೇಖನಗಳನ್ನು ಅಳಿಸುವರೆ? ಜಟಿಲವೆಂದು ಬಿಡದೆ ಮಹಾರಣ್ಯವು ಸರ್ವನಿಧಿಯಾಗಿರುವಂತೆ ದುರ್ಗಮವಾದರೂ ಉಪಾಯದಿಂದ ಓದಿ ಸರ್ವರೂ ಉಪಯೋಗ ಹೊಂದಬೇಕೆಂದು ನನ್ನ ಹೆಬ್ಬಯಕೆ.

ಈಶ್ವರ ಶಾಸ್ತ್ರಿ,
ಪೋಸ್ಟ್ ಕಲ್ಮಡ್ಕ, ಪುತ್ತೂರು

ನಮ್ಮ ಮಾತು

ಪುರಾಣಗ್ರಂಥಗಳು ಭಾರತೀಯ ತತ್ತ್ವಪರಂಪರೆಯ ಖನಿಯಿದ್ದಂತೆ; ನಮ್ಮ ಸಂಸ್ಕೃತಿಯ ಪುಟಪಾಕವಿದ್ದಂತೆ. ಅವನ್ನು ಉಳಿಸುವುದು, ಬೆಳೆಸುವುದು ವಿವೇಕ. ಏಕೆಂದರೆ ನಾವು ಏನಾಗಿದ್ದೆವು, ಏನಾಗಬೇಕು ಎನ್ನುವ ಕಲ್ಪನೆಯನ್ನು ನಮ್ಮ ಜನಾಂಗ ಇಂಥ ಗ್ರಂಥಗಳಿಂದ ಮಾತ್ರ ಪಡೆವುದು ಸಾಧ್ಯ. ಪತ್ತೇದಾರಿ ಕಾದಂಬರಿಗಳಿಂದ, ಸಿನೇಮಾ ಹಾಡುಗಳಿಂದ ರಾಷ್ಟ್ರದ ಸಂಸ್ಕೃತಿಯನ್ನು ರೂಪಿಸಬರುವುದಿಲ್ಲ.

ಯಕ್ಷಗಾನಗಳು ಈ ಹಿಂದೆ ಇಂಥ ಕೆಲಸಕ್ಕಾಗಿಯೆ ನಿರ್ಮಾಣಗೊಂಡವು. ಸಂಸ್ಕೃತ ಬರದ ಜನಕ್ಕೆ ಕನ್ನಡದಲ್ಲಿ ನಮ್ಮ ಪುರಾಣಗಳ ಕತೆಗಳನ್ನು ತಿಳಿಸುವುದಕ್ಕಾಗಿ ಹಳ್ಳಿಗಳಲ್ಲಿ ಗಾನಕೂಟಗಳು ಮಹತ್ವದ ಪಾತ್ರವನ್ನೆ ವಹಿಸಿದವು.

ಮುಂದೆ ಇದು ಅಶಿಕ್ಷಿತ ಜನರ ಕೈಯ್ಯಲ್ಲಿ ಸ್ವಲ್ಪಮಟ್ಟಿಗೆ ವಿರೂಪಗೊಂಡದ್ದುಂಟು ಅಂಥಲ್ಲಿ ಯಕ್ಷಗಾನದ ಇತಿಮಿತಿಗಳ ಬಗೆಗೆ, ಪ್ರಸಂಗಗಳ ಬಗೆಗೆ ಒಂದು ನಿರ್ದಿಷ್ಟ ಮಾರ್ಗದರ್ಶನ ಮಾಡುವ ಪುಸ್ತಕಗಳ ಆವಶ್ಯಕತೆ ಉಂಟಾಯಿತು. ಪುರಾಣದ ಕತೆಗಳನ್ನು ಸಮರ್ಪಕವಾಗಿ ನಿರೂಪಿಸುವ ಇಂಥ ಪುಸ್ತಕ ಈ ದಿಸೆಯಲ್ಲಿ ಹೆಚ್ಚು ಉಪಯುಕ್ತವಾಗಿದೆ.

ಕೆಲವರಿಗೆ ಇದರ ಭಾಷೆ-ಶೈಲಿಗಳಲ್ಲಿ ಹೊಸತನದ ಕೊರತೆ ಕಾಣಬಹುದು. ಆದರೆ ಇದು ಹೊಸಕನ್ನಡದ ಕಾದಂಬರಿಯೇನೂ ಅಲ್ಲ. ಇದು ಯಕ್ಷಗಾನದ ಕುರಿತಾದ ಗ್ರಂಥ. ಆ ಪರಂಪರೆಗೆ ಬೇಕಾದ ಭಾಷೆ ಇಲ್ಲಿದೆ. ಯಕ್ಷಗಾನಾಭ್ಯಾಸಿಗಳಿಗೆ ಇದು ತುಂಬ ಉಪಕಾರಿಯಾಗಬಲ್ಲುದು ಎನ್ನುವುದರಲ್ಲಿ ಸಂಶಯವಿಲ್ಲ.

ಗೀತಾಂಜಲಿ,
೧೮—೧೨—೧೯೬೧

ಟಿ. ಎ. ಪೈ

ಬಿನ್ನಹ

ಇತ್ತೀಚೆಗೆ, ೧೦-೧೫ ವರ್ಷಗಳಿಂದ ನಮ್ಮ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಸ್ವತಂತ್ರ ಕಲೆಯಾದ ಯಕ್ಷಗಾನವು ಹೆಚ್ಚು ಹೆಚ್ಚಿನ ಜನಾಕರ್ಷಣೆಯನ್ನು ಪಡೆಯುತ್ತ ಬಂದಿದೆ ಎಂಬುದು ನಮ್ಮೊ ನಾಡಿನವರಿಗೆ ಸಾಕ್ಷಾತ್ ಗೋಚರವಿದೆ. ನನ್ನ ಸ್ವತಃ ಅನುಭವದ ಆಧಾರದಿಂದ, ನಾನು ತಿಳಿದುಕೊಂಡಂತೆ ಆದರ ಕಾರಣ ಹೀಗಿದೆ:— ಯಕ್ಷಗಾನವು ತನ್ನ ಸಾಹಜಿಕ ಮುಖ್ಯ ಸ್ವರೂಪದಲ್ಲಿಯೇ ಅದು ಉದ್ಬೋಧಕ ಕಲೆ. ಅದರಲ್ಲಿ ಅರ್ಥಹೇಳುವವನ ವಿಚಾರಪ್ರಬೋಧನಾ ಪಾಂಡಿತ್ಯದಿಂದ ಶ್ರೋತೃವರ್ಗದ ಬುದ್ಧಿಯ ಮೇಲಾಗುವ ಪರಿಣಾಮದಿಂದ ಈ ಕಲೆಗೆ ಪ್ರಭಾವಸಂವರ್ಧನ, ತಥಾಪಿ ಜನಾಕರ್ಷಣ; ಇದು ಕೇವಲ ಯಕ್ಷಗಾನದ 'ತಾಳಮದ್ದಲೆ'ಗೆ ಮಾತ್ರ ಅನ್ವಯಿಸುವ ವಿಚಾರವಲ್ಲ; 'ಆಟ'ಗಳಿಗೂ ಅನ್ವಯಿಸುವ ವಿಚಾರವೂ ಹೌದು. ಇತ್ತೀಚೆಗೆ ಯಕ್ಷಗಾನ 'ಮೇಳ'ಗಳಲ್ಲಿ ಇಂಥ ವಿಚಾರಪ್ರಬೋಧನಾಶಕ್ತಿಯುಕ್ತವಾದ ಕಲಾವ್ಯವಸಾಯಗಾರರೇ ಹೆಚ್ಚುತ್ತಾ ಬಂದಿರುವುದರಿಂದ, ಅದರ ಸಾಹಿತ್ಯಪ್ರಾಧಾನ್ಯತೆಯಿಂದ ಅದು ಹೆಚ್ಚು ಹೆಚ್ಚಾಗಿ ಜನಾಕರ್ಷಣೆ ಪಡೆಯುತ್ತಾ ಬಂದಿದೆ. ಅದರಲ್ಲಿರುವ ವೇಷ, ನರ್ತನ ಇತ್ಯಾದಿ ಇತರ ಅಂಗಗಳು (ಆಹಾರ್ಯ ಆಂಗಿಕಾದಿ ಅಭಿನಯಗಳು) ಆ ವಿಚಾರ ಬೋಧೆಗೆ ಸಹಕಾರೀ ತಂತ್ರಗಳಾಗಿವೆ. ಅಂತು, ಜ್ಞಾನಪ್ರಸಾರರೀತ್ಯಾ ಜನತೆಗೆ ಉಪಕಾರವನ್ನು ಮಾಡುವ ನಮ್ಮ ದೇಶೀಯವಾದ ಪುಣ್ಯ ಕಲೆ ಇದು.

ಯಕ್ಷಗಾನ ಕಲೆಯ ವಿಷಯದಲ್ಲಿ ಇದೇ ಅಭಿಪ್ರಾಯವನ್ನು, ಅರ್ಥಾತ್, ಇದು ಸದ್ಬೋಧೆಯನ್ನು ನೀಡಿ ಲೋಕೋಪಕಾರ ಮಾಡುತ್ತಿರುವ ಪುಣ್ಯ ಕಲೆ ಎಂಬ ಅಭಿಪ್ರಾಯವನ್ನು ಶ್ರೀ ಟಿ. ಎ. ಪೈಗಳು ಇಟ್ಟುಕೊಂಡಿದ್ದಾರೆ ಎಂದು ಮೂರು ವರ್ಷಗಳ ಹಿಂದೆ ಕಲ್ಯಾಣಪುರ-ಪುತ್ತೂರಲ್ಲಿ ನಡೆದ ಒಂದು ಯಕ್ಷಗಾನ ಸಮಾರಂಭದ ಸಂದರ್ಭದಲ್ಲಿ ಅವರು ಅಲ್ಲಿಯ ತಮ್ಮ ಅಧ್ಯಕ್ಷ ಪೀಠದ ಮೇಲಿಂದ ನೀಡಿದ ಅಪ್ಪಣೆಯಿಂದ ತಿಳಿದು ಬಂತು. ಅಂದಿನಿಂದ ಇಂಥದ್ದೊಂದು ಯಕ್ಷಗಾನ ಪ್ರಸಂಗಗಳ ಬೋಧಾಂಶವನ್ನು ಬರೆದು ಅವರ ಸನ್ನಿಧಿಗೆ ಸಲ್ಲಿಸಬೇಕೆಂಬ ಬಲಿಷ್ಠ ಆಕಾಂಕ್ಷೆ ನನ್ನನ್ನು ಕಾಡಿತು. ಆದರೆ ಹಲವಾರು ಮಹಾವಿಚಾರಗಳನ್ನು ತಲೆಯಲ್ಲಿ ಸಾಕಿಕೊಂಡು, ಜನಹಿತಸಾಧನಾರ್ಥ ಕಾರ್ಯಬಾಹುಳ್ಯದಿಂದ ಕೂಡಿದ ಅವರಂಥ ಬಿಡುವಿಲ್ಲದ ಭಾರವಾಹೀ ಮಹನೀಯರ ಲಕ್ಷ್ಯವನ್ನು ನನ್ನೀ ಅಲ್ಪ ಕೃತಿಯ ದಿಶೆಗೆ ಹೇಗೆ ಸೆಳೆಯಲಿ ಎಂಬ ಸಂಕೋಚವು ನನ್ನನ್ನು ಬಾಧಿಸುತ್ತಿತ್ತು. ಆದರೂ, ಪುಣ್ಯಕೃತಿಗೆ ಪ್ರೋತ್ಸಾಹನೀಡುವ ಅವರ ಧಾರ್ಮಿಕ ಗುಣದ ಮೇಲಿನ ವಿಶ್ವಾಸದಿಂದ ಈ ಕೃತಿಯನ್ನು ಬರೆದು ಅವರ ಸನ್ನಿಧಿಯಲ್ಲಿ ಇಟ್ಟೆ; ನನ್ನ ವಿಶ್ವಾಸ ಬಂಜೆಯಾಗಲಿಲ್ಲ. ಅವರು ನನ್ನೀ ಪ್ರಬಂಧ ರಚನೆಗೆ ಶುಭವನ್ನು ಹಾರೈಸಿದ್ದಲ್ಲದೆ, ತಮ್ಮ ವರ್ಚಸ್ವೀ ಸಂಚಾಲಕತ್ವದಲ್ಲಿ ನಡೆಯುತ್ತಿರುವ "ಗ್ರಾಮಸೇವಾ ಪ್ರತಿಷ್ಠಾನ, ಮಣಿಪಾಲ" ಇದಕ್ಕೆ ನನ್ನೀ ಪ್ರಬಂಧವನ್ನು ಹೊಂದಿಸಿ

ಕೊಂಡು ನನಗೆ ಬಲಿಷ್ಠ ಆಧಾರವನ್ನು ನೀಡಿದರು; ಮಹೋಪಕಾರವನ್ನೂ ಮಾಡಿದರು. ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಈ ನನ್ನ ಪ್ರಬಂಧ ರಚನೆಗೆ ನನ್ನ ಸಾಹಿತ್ಯಜ್ಞಾನವು ಸಾಕಷ್ಟು ಇಲ್ಲ; ಈ ಇನ್ನೊಂದು ಭಯವು ನನ್ನನ್ನು ಬಾಧಿಸುತ್ತಿತ್ತು. ಆದರೆ ನನ್ನ ಸುದೈವದಿಂದ ಈ ಸಂದರ್ಭದಲ್ಲೇ ನನ್ನ ಮಿತ್ರರೂ ಯಕ್ಷಗಾನ ಕಲೆಯಲ್ಲಿ ವಿಶೇಷ ಅಭಿರುಚಿ-ಆಸಕ್ತಿಯಿದ್ದು ಅದರ ಪ್ರಕೃತ ಸ್ವರೂಪದ ಗುಣದೋಷಗಳನ್ನು ವಿಮರ್ಶೆಮಾಡಬಲ್ಲ ಪಾಂಡಿತ್ಯ ಬಲವುಳ್ಳವರೂ ನಮ್ಮಂಥಾ ಕಲಾವ್ಯವಸಾಯಿಗಳಿಗೆ ಸಮುಚಿತ ಸಲಹೆ ನೀಡಲು ಸಮರ್ಥರೂ ಆಗಿರುವ ಶ್ರೀ ಕನ್ನಾನ ಭೀಮ ಭಟ್ಟ, ಸಾಹಿತ್ಯಶಿರೋಮಣಿ—ಇವರು ನನ್ನೀ ಕೃತಿಯನ್ನು ತಿದ್ದಿ, ಕಳೆಗೂಡಿಸಿಕೊಟ್ಟು ಉಪಕಾರ ಮಾಡಿದರು. ಅವರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳು.

ಕತೆ-ಕಾದಂಬರಿಗಳ ಪುಸ್ತಕಗಳೇ ಹೆಚ್ಚಾಗಿ ಪ್ರಕಟಗೊಂಡು ಗ್ರಾಹಕರನ್ನು ಆಕರ್ಷಿಸುತ್ತಿರುವ ಈ ಕಾಲದಲ್ಲಿ, ಇಂಥ ವಿಚಾರಬೋಧಕ ಪುಸ್ತಕಗಳ ಪ್ರಕಟಣೆಯು ವೃಥಾ ಶ್ರಮವೇ ಸರಿಯೋ ಏನೋ ಎಂಬ ಒಂದು ಸಂದೇಹ ವಿಚಾರವು ಆಗಾಗ್ಗ ನನ್ನಲ್ಲಿ ನಿರುಲ್ಲಾಸದ ನೋವನ್ನು ಕೊಡುತ್ತಿತ್ತು. ಆದರೆ ಆ ನೋವಿನಿಂದ ನಾನು ನರಳಿ ಹಿಂದುಳಿಯದಂತೆ ಅಭಿಮಾನಪೂರ್ವಕ ಶ್ರೀ ಟಿ. ಸತೀಶ ಪೈಗಳವರು ಹಾಗೂ ಇತರ ನನ್ನ ಸನ್ಮಿತ್ರರೂ ನನಗೆ ಉತ್ತೇಜನ ಕೊಟ್ಟು, ಈ ಪುಸ್ತಕದ ಪ್ರಕಟಣೆಗೆ ಕಾರಣರಾದವರು. ಅವರನ್ನೂ ಸ್ಮರಿಸುತ್ತೇನೆ—ವಂದಿಸುತ್ತೇನೆ.

ಅಯಾಚಿತವಾಗಿ, ಅಯೋಚಿತವಾಗಿ, ನನಗೆ ಈ ಸಂದರ್ಭದಲ್ಲಿ ಸಂಪ್ರಾಪ್ತವಾದ ಸುದೈವಾಯತ್ತವಾದ ಒಂದು ಲಾಭವು ನನಗೆ ಅವಶ್ಯ ಸ್ಮರಣೀಯವು; ಅದೆಂದರೆ, ನಮ್ಮ ನಾಡಿನ ಪ್ರಸಿದ್ಧ ಸಾಹಿತಿಗಳಲ್ಲೊಬ್ಬರೆನಿಸಿದ ಶ್ರೀ ಕು. ಶಿ. ಹರಿದಾಸ ಭಟ್ಟರ ಕೃಪಾಶೀರ್ವಾದ ಇದಕ್ಕೆ ದೊರೆತುದು. ಅವರು 'ನಾಭ್ಯರ್ಥಿತಃ ಪರಹಿತೇ ವಿಹಿತಾಭಿಯೋಗ'ರಾಗಿ, ತಮ್ಮ ಸ್ವಯಂ ಸಂತೋಷದಿಂದಲೇ ನನ್ನೀ ಕೃತಿಯನ್ನು ಕಂಡು ಯುಕ್ತವಿರುವ ತಿದ್ದುಪಾಟುಗಳನ್ನು ಮಾಡುವ ಕಷ್ಟ ವಹಿಸಿ, ಕೃಪೆಯಿಂದ ಹರಸಿದ್ದಾರೆ. ಅವರಿಗೆ ನನ್ನ ವಿನಯಪೂರ್ವಕದ ವಂದನೆಗಳು.

ಈ ನನ್ನ ಪ್ರಬಂಧವನ್ನು ತನ್ನಲ್ಲಿ ತರಿಸಿಕೊಂಡು, ಇದನ್ನು ನೋಡಿ, ಇದರ ವಿಚಾರದಲ್ಲಿ ತನ್ನ ಅಭಿಪ್ರಾಯವನ್ನು ಬರೆದುಕಳಿಸಿದ ಶ್ರೀ ಕೆ. ನರಸಿಂಹ ಮೂರ್ತಿ, M.A. ಯವರನ್ನೂ ನಾನು ಸ್ಮರಿಸುತ್ತೇನೆ. ಅಲ್ಲದೆ ಅವರು ಇನ್ನೂ ಐವತ್ತು "ಪ್ರಸಂಗ"ಗಳಿಗೆ ಹೀಗೆಯೇ ಬೋಧಾಂಶದ ಪ್ರಬಂಧಗಳನ್ನೋ, ಯಕ್ಷಗಾನ ಪ್ರಸಂಗ ವಿಷಯಕವಾದ ಇನ್ನಿತರ ವೈಚಾರಿಕ ಪ್ರಬಂಧಗಳನ್ನೋ ಬರೆಯಬೇಕೆಂದೂ, ಅದರಿಂದ ಆ ಕಲಾ ವಿಚಾರದಲ್ಲಿ ಕನ್ನಡ ಜನಕ್ಕೆ ಹೆಚ್ಚಿನ ಉಪಕಾರವಾಗುವುದೆಂದೂ ತಮ್ಮದೊಂದು ಹಿತಸೂಚನೆ ತಿಳಿಸಿದ್ದಾರೆ. ಅದನ್ನನುಸರಿಸುವ ನನ್ನ ಮುಂದಿನ ಪೌರುಷ ಪ್ರಕಟವಾಗಬೇಕಾದರೆ, ಈ ಪುಸ್ತಕದ ವಾಚಕರ ಪ್ರೋತ್ಸಾಹರೂಪೀ ಇಂದಿನ ದೈವಾನುಕೂಲ ಹೇಗಿದೆ ಎಂದು ನೋಡಿಕೊಳ್ಳಬೇಡವೇ?

ಮು। ಶ। ಸಾಮಗ ಹರಿದಾಸ

ನಿರೂಪಣೆ

ಭಗವದ್ಭಕ್ತಿಯೂ ಧಾರ್ಮಿಕತೆಯೂ ಪರಸ್ಪರ ಪ್ರಬಂಧಿತವಾದವುಗಳು. ದರ್ಶನ ಶಾಸ್ತ್ರಗಳ ಅನುಭವದಿಂದಲೂ ಜೈನ ಬೌದ್ಧಾದಿ ಇತರ ಮತ ವಿಷಯುಕ ತತ್ವಜ್ಞಾನ ಸಂಗ್ರಹದಿಂದಲೂ ಋಷಿ ಮುನಿ ಪ್ರಬೋಧಿತಗಳಾದ ಉಪನಿಷದ್ವಾಕ್ಯಾದಿ ಆಧ್ಯಾತ್ಮಿಕ ಜ್ಞಾನಸೂಕ್ತಿಗಳ ಪರಾಮರ್ಶೆಯಿಂದಲೂ ನಮಗೆ ಈ ವಿಚಾರದ ಯಥಾರ್ಥತೆಯು ಸುತರ್ಕ್ಯವಾಗಿ ಸಿಗುತ್ತದೆ. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂಬೀ ಶ್ರೀಕೃಷ್ಣಸೂಕ್ತಿಯಂತೂ ಧರ್ಮ ಮತ್ತು ಭಕ್ತಿಗಳಿಗಿರುವ ಅನ್ಯೋನ್ಯ ಬಂಧನವನ್ನು ಸ್ಪಷ್ಟ ನಿರ್ದೇಶಿಸುತ್ತದೆ. 'ಮೋಕ್ಷಸಾಧನಸಾಮಗ್ರ್ಯಾಂ ಭಕ್ತಿರೇವ ಗರೀಯಸೀ' ಎಂಬೀ ಆಪ್ತವಾಕ್ಯವು ನಮಗೆ ಗ್ರಾಹ್ಯವಾಗುವುದರ ಜತೆಯಲ್ಲೇ 'ಧರ್ಮಾದರ್ಥಶ್ಚ ಕಾಮಶ್ಚ ಧರ್ಮಾತ್ ಮೋಕ್ಷ ವೈ ಖಲು' ಎಂಬುದೂ ಗ್ರಾಹ್ಯವೇ. ಆದುದರಿಂದ ಭಗವದ್ಭಕ್ತಿಯಲ್ಲಿಯೇ ಧರ್ಮ, ಧರ್ಮದಲ್ಲಿಯೇ ಭಗವದ್ಭಕ್ತಿ ಎಂದು ವಿವೇಚಿಸಬಹುದಾಗುತ್ತದೆ.

ಭಗವದ್ಭಕ್ತಿ ಎಂದರೇನು? ಕಾಲ ಕರ್ಮಗಳಿಗೆ ಕಟ್ಟೊಡೆದ, ಜಗಜ್ಜೀವನವನ್ನನುಭವಿಸುತ್ತಿರುವ, ವ್ಯಕ್ತಪ್ರಪಂಚದ ಅಲ್ಪಚೇತನನಾಗಿರುವ ಜೀವಾತ್ಮನು ಕಾಲ ಕರ್ಮಾತೀತನಾದ ವ್ಯಕ್ತಪ್ರಪಂಚದ ಆಧಾರಸತ್ವನಾದ ಅವ್ಯಕ್ತಪ್ರಪಂಚದ ಪರಮಾತ್ಮನಲ್ಲಿ ಆಂತರಂಗಿಕ ಪ್ರೇಮದಿಂದ ಅಂಟಿಕೊಂಡಿರುವಿಕೆಯೇ ಭಗವದ್ಭಕ್ತಿಯು. 'ಮಾಹಾತ್ಮ್ಯಜ್ಞಾನಪೂರ್ವಕಸುದೃಢಸ್ನೇಹ' ಅಥವಾ 'ಸತತಾನುರಾಗ ಇತಿ ಭಕ್ತಿ' ಅಥವಾ 'ಭಕ್ತಿಸಾ ಪರಮಪ್ರೇಮಾ' ಇತ್ಯಾದಿಗಳಾದ ಆಚಾರ್ಯೋಪದೇಶ ವಾಕ್ಯಗಳಿಂದ ಭಕ್ತಿಯ ಸ್ವರೂಪವು ನಿರೂಪಿತವಾಗು

ತ್ತದೆ. ಅಂತು ವಿವಿಧ ವಿಚಿತ್ರ ವಿದ್ಯಮಾನಗಳಿಂದ ಕೂಡಿ ನಮ್ಮಲ್ಲಿ ವಿಸ್ಮಯಭಾವೋತ್ಪತ್ತಿಯನ್ನು ಮಾಡುವ ಈ ವ್ಯಕ್ತವಿಶ್ವಕ್ಕೆ ತದ್ವೈಚಿತ್ರ್ಯಕ್ಕೆ ಹೇತುವಾದ ಯಾವುದೋ ಒಂದು ಮರೆಯ ಮಹಾಸತ್ವ ಇದೆ ಎಂದು ಒಪ್ಪಿ ಆ ಮಹಾಸತ್ವದಲ್ಲಿ ಸಂಲಕ್ಷ್ಯಬದ್ಧವಾಗಿರುವ ಗೌರವಯುಕ್ತ ಪ್ರೇಮಭಾವವೇ ಭಗವದ್ಭಕ್ತಿಯು ಎಂದು ಸುಲಭವಾಗಿ ಹೇಳಬಹುದು.

ಈ ಭಕ್ತಿಭಾವವು ಅಥವಾ ಭಗವಲ್ಲಕ್ಷ್ಯವು ಉಂಟಾದಾಗ ತತ್ಪರಿಣಾಮವಾಗಿ ಮನುಷ್ಯನಿಗೆ ಸ್ವಕೀಯ ಸುಖೈಕ ಪಾಕ್ಷಪಾತಿಕ ಲಕ್ಷ್ಯವು ತನ್ನಷ್ಟಕ್ಕೆ ಕಳಚಿಹೋಗುತ್ತದೆ. ಅರ್ಥಾತ್ ಸ್ವಾರ್ಥೈಕ ಸುಖಸಾಧನಾ ಪ್ರವೃತ್ತಿಯು ಪ್ರಲಯವಾಗುವುದು. ಆದರೆ ಪ್ರಪಂಚಾವಸ್ಥೆಯಲ್ಲಿ ಪ್ರತಿಯೊಂದು ಪ್ರಾಣಿಗೂ ಕರ್ಮವೆಂಬುದು ಅನಿವಾರ್ಯ ತಾನೆ? 'ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್' ಎಂಬುದರ ಸತ್ಯವು ನಮ್ಮ ಸಾಕ್ಷಾದನುಭವದ್ದಷ್ಟೆ. ಹಾಗಾದರೆ ಭಗವಲ್ಲಕ್ಷ್ಯಸಂಪನ್ನನಾದ ಭಕ್ತನೂ ಈ ಪ್ರಪಂಚದಲ್ಲಿಯೇ ಇರುವವನಾದುದರಿಂದ ಸಹಜವಾಗಿಯೇ ಕರ್ಮ ಮಾಡುತ್ತಿರುತ್ತಾನೆ. ಆದರೆ ಭಕ್ತಿಯ ಪರಿಣಾಮವಾಗಿ ಅಂಥ ಭಕ್ತನ ಸ್ವಾರ್ಥೈಕಲಕ್ಷ್ಯವು ನಿರಸನವಾಗಿರುವುದರಿಂದ ಅಂಥವನಿಗೆ ಸಾರ್ವತ್ರಿಕ ಹಿತಲಕ್ಷ್ಯವು ಸಹಜವಾಗಿಯೇ ಹುಟ್ಟುತ್ತದೆ. ಇಂಥ ಸಾರ್ವತ್ರಿಕ ಹಿತಲಕ್ಷ್ಯದ ಸದ್ಭಾವನಾಪೂರ್ವಕವಾದ ಕರ್ಮವ್ಯವಸ್ಥೆಯೇ 'ಧರ್ಮ'ವೆಂದು ರೂಪುಗೊಳ್ಳುತ್ತದೆ. 'ಧರ್ಮಸ್ಯ ಪ್ರಭುರಚ್ಯುತಃ' ಎಂಬೀ ಉಪದೇಶ ವಾಕ್ಯಕ್ಕೂ ಈ ತರ್ಕವು ಅನ್ವಯಿಸುತ್ತದೆ. ನಿಶ್ರೇಯಸ್ಸಿನ ಸಾಧನೆಗಾಗಿ ಆತ್ಮಸತ್ವಪ್ರಯೋಗಾತ್ ಪರತತ್ವಾಭಿಲಕ್ಷ್ಯ ಸಂಯೋಗವು ಭಗವದ್ಭಕ್ತಿ ಎಂದಾದರೆ ಆ ಪರತತ್ವ ಸಂಯೋಗಾವಸ್ಥೆಯಲ್ಲಿಯೂ ಕಾಯಾವಸ್ಥೆ ಇದ್ದೇ ತೀರುವುದರಿಂದ ಈ ಕಾಯಿಕ ಸ್ಥಿತಿಯು ಸಹಜ ನ್ಯಾಯವಾಗಿ ಕರ್ಮ ಮಾಡಿಕೊಂಡಿರಲಿಕ್ಕೇಬೇಕು. ಆದರೆ ಅಂತಃಕರಣದಲ್ಲಿ ಪರತತ್ವ ಲಕ್ಷ್ಯಾನುಬಂಧ ಇರುವುದರಿಂದ ಆ ದೆಶೆಯಲ್ಲಿ ಕರ್ಮವು ಕೇವಲ ಕಾಯಿಕ ಸುಖೋದ್ದೇಶಮಾತ್ರದ ವೈಯುಕ್ತಿಕ ವಿಚಾರದ್ದಾಗಿ

ರದೆ ಸಾರ್ವತ್ರಿಕ ಹಿತಸಾಧನೆಯ ವಿಶಾಲ ವ್ಯಾಪ್ತೋದ್ದೇಶದ್ದಾಗುವುದು. ಏತದ್ರೀತ್ಯಾ ಅದು ಅಭ್ಯುದಯ ಹೇತುವಾದ ಕರ್ಮವಾಗುವುದು. ನಿಶ್ರೇಯಸ—ಅಭ್ಯುದಯ ಎಂಬೀ ಎರಡೂ ಉದ್ದೇಶಗಳು ಕೂಡಿ ಒಂದೇ ಉದ್ಯೋಗವಾಗಿ ಪರಿಣಾಮಗೊಂಡದ್ದು 'ಧರ್ಮ'.

ಅಂತು ಭಗವದ್ಭಕ್ತಿ-ಧರ್ಮ ಇವೆರಡು ಪರಸ್ಪರ ಸಂಗಡವಾಗಿ ಸೇರಿಕೊಂಡಿವೆ ಎಂಬುದು ತರ್ಕಶುದ್ಧ ವಿಚಾರದಿಂದ ವಿವೇಚನೆಗೆ ಸಿಗುತ್ತದೆ.

ನಮ್ಮ ಭಾರತ ವರ್ಷದ ಸಂಸ್ಕೃತಿಯ ಮುಖ್ಯ ತಿರುಳೇ ಈ ಭಗವದ್ಭಕ್ತಿ ಸಮಾವೇಶಗೊಂಡ ಧರ್ಮವೇ ಆಗಿದೆ. ಇದಕ್ಕೆ ಇಲ್ಲಿಯ ದೇವಸ್ಥಾನ—ಬಸದಿ—ತೀರ್ಥಯಾತ್ರಾ—ಉತ್ಸವ-ಹಬ್ಬ ಹುಣ್ಣಿಮೆ ಸಂಪ್ರದಾಯಗಳೂ ನಿದರ್ಶನಗಳು. ಅಲ್ಲದೆ ಇಲ್ಲಿ ಈ ತನಕ ಆಗಿ ಹೋದ ಮಹಾಮಹಾ ಚಕ್ರವರ್ತಿಗಳ, ರಾಜರುಗಳ, ದಾರ್ಶನಿಕರ, ಅವತಾರ ಪುರುಷರ, ಆಚಾರ್ಯರುಗಳ, ಸಾಧುಸಂತರುಗಳ, ತಥಾ ವರ್ಚಸ್ವಿ ಚರಿತ್ರೆಯ ಘನ ವಿದ್ವಾಂಸರುಗಳ ನಿದರ್ಶನವೇ ಇದೆ. ಇಂಥ ಭಗವದ್ಭಕ್ತಿ ಮತ್ತು ಧರ್ಮ ಎಂಬುದರ ಅನುಭವವನ್ನೊಳಗೊಂಡಿರದ, ಬರೇ ಸ್ವಶರೀರ ಸ್ವಾಸ್ಥ್ಯಪ್ರಾಪ್ತಕವಾಗಿ ಸದ್ಯ ಸುಖಕ್ಕೆ ಮಾತ್ರ ಕಾರಣವಾಗಬಹುದಾದ, ಭಾವಸ್ಪರ್ಶ್ಯವಾಗದೆ 'ಬಾಹ್ಯ ಸಂಸ್ಪರ್ಶ ಭೋಗವಿಲಾಸ'ಕ್ಕೆ ಹೇತುವಾಗಬಹುದಾದ, ಅರ್ಥ ಕಾಮನೆಗಳನ್ನೇ ಮುಖ್ಯ ಧ್ಯೇಯಗಳನ್ನಾಗಿ ಸಾಧ್ಯ ಮಾಡಿಕೊಂಡಿರುವ ವಿದ್ಯೆಯೂ ಮನುಷ್ಯನ ಮೇಲ್ಮೆಯನ್ನುಂಟುಮಾಡುವುದಿಲ್ಲ. ಕಳೆದ ಎರಡು ಶತಕಗಳಿಂದ ನಮ್ಮಲ್ಲಿ ಅಂಥ ಅರ್ಥ ಕಾಮಧ್ಯೇಯ ಸಾಧನಾತಂತ್ರವಾಗಿರುವ, ಕೇವಲ ಸ್ವಸಂಸಾರ ಸುಖೈಕಲಕ್ಷ್ಯದಲ್ಲಿ ಮಿತಿಗೊಂಡ, ವಿದೇಶೀ ಸಂಸ್ಕೃತಿಯ ಅನುಸರಣೆಯಿಂದ ವ್ಯಾಪ್ತತೆಗೆ ಬಂದ ಈ ವಿದ್ಯೆಯು ನಮ್ಮನ್ನು ದುಸ್ವಾರ್ಥ ಮನೋವೃತ್ತಿಯ ದುರ್ದೆಶೆಗೆ ದೂಡಿಹಾಕಿ ಪ್ರಗತಿ ವಿರುದ್ಧವಾದ ಸ್ಥಿತಿಗೆ ಪ್ರಕರ್ಷಿಸಿತು ಎಂಬುದು ನಮ್ಮ ಸಾಕ್ಷಾದನುಭವದಲ್ಲಿದೆಯಷ್ಟೆ. ಆದುದರಿಂದ ಮನುಷ್ಯನನ್ನು ಬರೇ ಸ್ವಾರ್ಥದ ಮಿತಿಯೊಳಗೆ ಪ್ರಬಂಧಿತನನ್ನಾಗಿ

ಮಾಡಗೊಡದೆ ಸಾರ್ವತ್ರಿಕ ಸ್ವಾಸ್ಥ್ಯಸಾಧನೆಯಃ ಸುಲಕ್ಷ್ಯಾನುಶೀಲನನ್ನಾಗಿ ಮಾಡುವ, ವಿಶಾಲ ವಿಚಾರ ವ್ಯುತ್ಪತ್ತಿಯನ್ನುಂಟುಮಾಡುವ ವಿವೇಚನಾಧಾರವಾದ ಹಿನ್ನೆಲೆಯು ಸತ್ವಗುಣವೇ ನಿಜವಾದ ವಿದ್ಯೆಯು. 'ವಸ್ತುವಿವೇಕ ಏವ ವಿದ್ಯಾ' ಎಂಬ ಆಪ್ತವಾಕ್ಯವೂ ಇದೆ. 'Education is the manifestation of the soul which is in ourselves' ಎಂದು ಶ್ರೀ ವಿವೇಕಾನಂದರ ಸದುಪದೇಶವೂ ಇದೆ. ಮಳೆಯು ಪರಿಣಾಮದಿಂದ ಮಣ್ಣಿನಲ್ಲಿ ಜವುಗು ಅಥವಾ ಒಸರು ಹುಟ್ಟಿ ಸಸ್ಯಾದಿಗಳ ಸಂಜನನವಾಗುವಂತೆ ಇಂಥ ವಿದ್ಯೆಯು ಪರಿಣಾಮದಿಂದ ನಮ್ಮ ಅಂತಃಕರಣದಲ್ಲಿ ಸದ್ಗುಣವು ಹುಟ್ಟಿ ಸಾರ್ವತ್ರಿಕ ಹಿತ ಸಾಧನಾ ಸಂಲಕ್ಷ್ಯದ ಸದಾಚಾರ ಹುಟ್ಟುವುದು. ಇಂಥ ಸದಾಚಾರ ಪ್ರಭವಾತ್ಮಕವಾದ ಅಂತಃಕರಣದ ಗುಣವಿಶೇಷವೇ ನಮ್ಮ ಭಾರತ ವರ್ಷದ ಸಂಸ್ಕೃತಿಯ ಮುಖ್ಯ ಲಕ್ಷಣ. ಈ ಸಂಸ್ಕೃತಿಯೇ ಜನ ಪ್ರಗತಿಗಾಗುವ ಉತ್ಕೃಷ್ಟ ಸಂಸ್ಕೃತಿಯು.

ಈ ಉತ್ಕೃಷ್ಟಸಂಸ್ಕೃತಿಯ ಅಸ್ತಿತ್ವಕ್ಕೂ ಪ್ರಸಾರಣೆಗೂ ಅನುಕೂಲವಾಗುವ ಉಪಾಯಗಳಲ್ಲಿ ದೇವಸ್ಥಾನ ಮತ್ತು ತತ್ಸಂಬಂಧದ ಜಾತ್ರೆ, ಉತ್ಸವ ಇತ್ಯಾದಿಗಳು ಎಷ್ಟು ಮುಖ್ಯವೆಂಬುದು ವಿಚಾರವಾದಿಗಳೆಲ್ಲರಿಗೂ ವೇದ್ಯವಾಗುತ್ತದೆ. ವರ್ತಮಾನ ಕಾಲದಲ್ಲಿ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಕೆಲವು ಪ್ರಾಮುಖ್ಯ ದೇವಸ್ಥಾನಗಳಿಂದ ಈ ಸಂಸ್ಕೃತಿಯು ಹೇಗೆ ಪ್ರಸರಣಗೊಂಡು ಲೋಕಹಿತವು ಸಾಧಿಸಲ್ಪಡುತ್ತದೆ ಎಂಬುದು ಅಲ್ಲಿಯ ಜನಕ್ಕೆ ಪ್ರತ್ಯಕ್ಷಾನುಭವದಲ್ಲಿದೆ. ಅಂತಃಕರಣದಲ್ಲಿ ಭಕ್ತಿಭಾವವನ್ನು ಉದ್ದೀಪ್ತಗೊಳಿಸುವುದರ ಮೂಲಕ ಧರ್ಮಜಾಗೃತಿಯನ್ನು ಹುಟ್ಟಿಸಿ ಸಾರ್ವಜನಿಕ ಹಿತ ಸಾಧನೆಯಲ್ಲಿ ರೂಪು ತಳೆದ ಒಂದು ಉತ್ಕೃಷ್ಟ ಸಂಸ್ಕೃತಿಯನ್ನು ಪ್ರಸಾರಗೊಳಿಸಲಾಗುತ್ತದೆ ಎಂಬುದಕ್ಕೆ ಆ ದೇವಸ್ಥಾನಗಳಲ್ಲಿ ವರ್ಷಂಪ್ರತಿ ನಡೆಯುತ್ತಿರುವ ಧರ್ಮಸಮ್ಮೇಳನ, ದೀಪೋತ್ಸವ, ನವರಾತ್ರಿ, ಶಿವರಾತ್ರಿ ಇತ್ಯಾದಿ ಉತ್ಸವಗಳು, ಸ್ಥಳೀಯ ಜಾತ್ರೆ, ನಡಾವಳಿ, ಕೋಲ, ಉಪನ್ಯಾಸ, ಸಂಗೀತ, ಪುರಾಣ ವಾಚನ, ಹರಿಕಥೇತ್ಯಾದಿ

ಗಳು, ದಿನಂಪ್ರತಿಯ ಪೂಜಾ, ವಾದ ವಿವಾದಗಳಿಂದಲೋ ಇತರ ಕಾರಣಗಳಿಂದಲೋ ಜನಗಳಲ್ಲಿ ಉಂಟಾಗಿರಬಹುದಾದ ಕಲಹ ಕಚ್ಚಾಟಗಳ ಮೂಲಕವಾದ ವೈಷಮ್ಯದ ನಿರಸನಕ್ಕಾಗುವ ವಿಚಾರಣಾ ಮತ್ತು ನ್ಯಾಯ ತೀರ್ಮಾನ ಪದ್ಧತಿ, ಅನ್ನದಾನ, ವಿದ್ಯಾದಾನ ಇಂಥಿಂಥವುಗಳೆಲ್ಲ ದೃಷ್ಟಾಂತಗಳು ಮತ್ತು ಸಾರ್ವಜನಿಕರ ಇಹ ಪರಗಳ ನಿತ್ಯ ನಿಃಶ್ರೇಯಸ್ಸನ್ನು ಸಾಧಿಸುವ, ಬಡವ-ಬಲ್ಲಿದ, ಬ್ರಾಹ್ಮಣ-ಹೊಲೆಯ, ಬಾಲ—ವೃದ್ಧ, ಸ್ತ್ರೀ—ಪುರುಷ ಎಂಬೀ ನಾನಾ ತೆರನಾದ ಲಿಂಗ ವಯೋ ಜಾತಿ ಗೋತ್ರಾದಿ ಕಾರಣಾತ್ ಗಣ್ಯವಾಗುವ ಭಿನ್ನ ಭೇದವಿಲ್ಲದೆ ಸಮಸ್ತರಿಗೂ ಜ್ಞಾನಪ್ರಸಾರ ಮಾಡುವುದರ ಮೂಲಕ ಜನರಲ್ಲಿ ಭಗವದ್ಭಕ್ತಿತಃ ಧರ್ಮ ಜಾಗೃತಿಯನ್ನು ಹುಟ್ಟಿಸುವ ಸುಸಂಸ್ಕೃತಿ ಪ್ರಸಾರಣಾತ್ಮಕವಾದ ಆ ದೇವಸ್ಥಾನದ ಕಾರ್ಯ ಸುವಿಧಾನಗಳಲ್ಲಿ ಅಲ್ಲಿಯ 'ಯಕ್ಷಗಾನ ಮೇಳ'ವೂ ಮುಖ್ಯವೆಂದು ಗಣಿಸಲ್ಪಟ್ಟಿದೆ. ಯಕ್ಷಗಾನ ಮೇಳಗಳು ತಮ್ಮ ಕಲಾವ್ಯವಸಾಯದ ಮೂಲಕ ಜನರಲ್ಲಿ ದೈವಿಕ ಭಾವನೆಯನ್ನುಂಟುಮಾಡಿ ಧರ್ಮ ಜಾಗೃತಿಯನ್ನು ತರಿಸುತ್ತಾವಾದುದರಿಂದ ಆ ಮೇಳಗಳ ಆಟವು ಒಂದು ಪುಣ್ಯಕಾರ್ಯಕ್ರಮವೆಂದು ಜನಗಳಲ್ಲಿ ವಿಶ್ವಾಸವೂ ಇದೆ. ಸಾಹಿತ್ಯ ಸಂಗೀತಗಳ ಸಯುಕ್ತಿಕ ಮಿಶ್ರಣವಿರುವುದರಿಂದ ಕಲಾಭಿರುಚಿಯುಳ್ಳವರಿಗೆ ಈ ಆಟವು ರಸಪ್ರದಾಯಕ ವರ್ಚಸ್ವೀ ಕಲಾ ಕಾರ್ಯಕ್ರಮವೆಂದು ಗೌರವ ಲಕ್ಷ್ಯದಿಂದ ಗ್ರಾಹ್ಯವಾಗುತ್ತದೆ.

ಯಾವುದೇ ಕಲೆಯಿರಲಿ, ಕಲಾಸಂಸ್ಥೆಯಿರಲಿ, ಪರಿವರ್ತನಶೀಲವಾದ ಕಾಲಕ್ಕೆ ಅನುಗುಣವಾಗಿ ತಾನೂ ಸಮುಚಿತ ಪರಿವರ್ತಿತ ರೂಪವನ್ನು ಪಡೆದೇ ತೀರುತ್ತದೆ. ಈ ನ್ಯಾಯದಿಂದ ನಮ್ಮ ಯಕ್ಷಗಾನ ಮೇಳಗಳ ರೂಪಸ್ಥಿತಿಯೂ ಆ ಮೇಳಗಳ ಆಟ, ಅಂದರೆ ಕಲಾವ್ಯವಸಾಯದ ಸಂಪ್ರದಾಯವೂ, ಅದರ ಪೂರ್ವ ಪದ್ಧತಿಗಿಂತ ಸ್ವಲ್ಪ ಭಿನ್ನ ಪದ್ಧತಿಗೆ ಬದಲಾಯಿಸಿದೆ. ಇಂಥ ಬದಲಾವಣೆಯು ಕಲಾಶಾಸ್ತ್ರ ದೃಷ್ಟಿಯಿಂದ ವಿಮರ್ಶಿಸುವ ವಿಶೇಷಜ್ಞರ ಅಭಿಪ್ರಾಯದಿಂದ ತಪ್ಪಾದರೂ ಕೇವಲ ಶಾಸ್ತ್ರಮತಾವಲಂಬಿಗಳಾಗಿರದೆ ಪ್ರತ್ಯಕ್ಷ ಪರಿಣಾಮವನ್ನು ಆಧರಿಸಿ ಉದ್ಯೋಗಿಸುವ ಕಲಾವ್ಯವಸಾಯಗಾರರ

ಅಭಿಪ್ರಾಯದಿಂದ ಸರಿಯಾದದ್ದೆ. ಉದಾ: ಯಕ್ಷಗಾನಕ್ಕೆ ಪ್ರಕಾರ ನಿರ್ದೇಶನ ಮಾಡುವ ನಾಟ್ಯ ಅಥವಾ ನರ್ತನ ಶಾಸ್ತ್ರದಲ್ಲಿ ಹಿಮ್ಮೇಳ ವಾಗಿರುವ ಭಾಗವತ ಮತ್ತು ಮೃದಂಗಧಾರಿಗೆ ಆಧಾರವಾಗಿರುವ ಶ್ರುತಿಗೆ ತಂಬೂರ ಅಥವಾ ಪುಂಗಿಯೇ ಹೇಳಲ್ಪಟ್ಟಿದೆ ಆದರೆ ವರ್ತ ಮಾನ ಕಾಲದಲ್ಲಿ ಅಂಥ ತಂಬೂರ ಅಥವಾ ಪುಂಗಿ ಎಂಬ ವಾದ್ಯಗಳೇ ಅಪೂರ್ವವಾಗಿ [ಯಕ್ಷಗಾನ ಪ್ರಪಂಚದಲ್ಲಿ] ತತ್ರಾಪಿ ಆ ತಂಬೂರಾದಿ ವಾದ್ಯಗಳನ್ನು ಸಂಪಾದಿಸಿಕೊಂಡರೂ ಅವಕ್ಕೆ ಹೊಂದಿಕೆಯಾಗು ವಷ್ಟು ಸ್ವರ್ಯಸ್ಥಿತಿಯೇ ಆಧುನಿಕ ಜನದ ನಿತ್ರಾಣಿ ಕಂಠದಲ್ಲಿಲ್ಲದಿರು ವಾಗ ಕೇವಲ ಶಾಸ್ತ್ರಸಂಪ್ರದಾಯದ ಪುರಾತನ ಪದ್ಧತಿಯನ್ನು ಪಾಲಿ ಸಲಿಕ್ಕೇಬೇಕೆಂಬ ಆಗ್ರಹವು ಸಲ್ಲದು. ಅಂತು ವಾದ್ಯದಿಂದ ಪರಿ ಣಾಮವಾದ ಶ್ರುತ್ಯನುಭವ ಉಂಟಾದರೆ ಸಾಕು ಎಂಬ ಸಮಾಧಾನ ದಿಂದ ಈಗ ಶ್ರುತಿವಾದ್ಯಕ್ಕಾಗಿ ಹಾರ್ಮೋನಿಯಂ ರೂಢಿಯಾಗಿ ಬಿಟ್ಟಿದೆ. 'ಶಾಸ್ತ್ರಾತ್ ರೂಢಿರ್ಬಲೀಯಸೀ' ಹೀಗೆ ಇನ್ನೆಷ್ಟೋ ವಿಷಯಗಳಲ್ಲಿ ಈ ಯಕ್ಷಗಾನ ಮೇಳದ ಕಲಾವ್ಯವಸಾಯದ ಸ್ಥಿತಿ ಗತಿಗಳಲ್ಲಿ ಕಾಲ ಪರಿಸ್ಥಿತ್ಯನುಗುಣವಾದ ಪುರಾತನ ಪದ್ಧತಿಯಿಂದ ಭಿನ್ನವಾದ ನಾವೀನ್ಯಗಳು ಉಂಟಾಗಿವೆಯಾದರೂ ಜನಾಂತಃಕರಣ ದಲ್ಲಿ ಭಗವದ್ಭಕ್ತಿ ಪೂರ್ವಕವಾದ ಧಾರ್ಮಿಕ ಭಾವನೆಯನ್ನು ಮೂಡಿಸುವ ಉದ್ದೇಶ ಸಾಧನೆಯನ್ನು ಮಾತ್ರ ಬದಲಾಯಿಸದೆ ಈ ಮೇಳಗಳು ಲೋಕೋಪಕಾರಕ ಪುಣ್ಯಸಂಸ್ಥೆಗಳಾಗಿಯೇ ಉಳಿದಿವೆ.

ಇತ್ತೀಚೆಗೆ ಸಾಮಾನ್ಯ ಹತ್ತು ಹದಿನೈದು ವರ್ಷಗಳಿಂದ ಯಕ್ಷ ಗಾನಕಲೆಗೆ ವಿದ್ವಾಂಸರಿಂದ, ಪಂಡಿತರಿಂದ, ಸಾಹಿತಿಗಳಿಂದ ಹೆಚ್ಚು ಹೆಚ್ಚಾಗಿ ಗೌರವ ಪ್ರಶಸ್ತಿಯುಂಟಾಗುತ್ತ ಬರುತ್ತಿರುವುದು ತೋರಿ ಬರುತ್ತಿದೆಯಷ್ಟೆ. ಇದಕ್ಕೆ ಮುಖ್ಯವಾದುದೊಂದು ಕಾರಣವೆಂದರೆ ಈ ಕಲೆಯಲ್ಲಿರುವ ಸಾಹಿತ್ಯ ಪ್ರಾಧಾನ್ಯವೇ ಸರಿ. ಇನ್ನಿತರ ಕಲಾ ವ್ಯವಸಾಯಗಳಲ್ಲಿ ಅರ್ಥಾತ್ ನಾಟಕ, ಸಿನೆಮಾ ಮುಂತಾದುವು ಗಳಲ್ಲಿ ಇಲ್ಲದ, ಈ ಯಕ್ಷಗಾನದಲ್ಲಿ ಮಾತ್ರ ಇರುವ, ಇದರದ್ದೇ ಆಗಿರುವ ವಿಶಿಷ್ಟ ಗುಣವೆಂದರೆ ಇದರಲ್ಲಿ ಪ್ರಯೋಗಿಸಲ್ಪಡುವ

ಆಶುಭಾಷಣರೀತ್ಯಾ ಅರ್ಥ ಹೇಳುವ ಪದ್ಧತಿಯು. ನಾಟಕದ ರೀತ್ಯಾ ಮೊದಲೇ ಸಂಗ್ರಹೀತವಾಗಿ ನಿರ್ಣಯಿಸಲ್ಪಟ್ಟಿದ್ದ ಮಾತು ಗಳನ್ನು ಉಪಯೋಗಿಸುವ ಪದ್ಧತಿಯಾಗಲಿ, ಸಿನೆಮಾದ ರೀತ್ಯಾ ದೃಶ್ಯಾವಳಿಗಳನ್ನು ಉಪಯೋಗಿಸುವುದಾಗಲಿ ಈ ಯಕ್ಷಗಾನದಲ್ಲಿ ಇಲ್ಲ. ಅರ್ಥ ಹೇಳುವ ಚಾತುರ್ಯದಿಂದಲೇ ಕಥಾವಿಷಯದ ಸ್ವಾರಸ್ಯವನ್ನು ಹುಟ್ಟಿಸಿ ಜನಾಕರ್ಷಣೆಯನ್ನು ಮಾಡುವುದು ಯಕ್ಷ ಗಾನದ ವೈಶಿಷ್ಟ್ಯ. ಇಂಥ ವಾಚಿಕಾಭಿನಯಕ್ಕೆ ಪೋಷಕ ಮತ್ತು ಸಹಾಯಕವಾಗಿ ಆಹಾರ್ಯ [ವೇಷ ಭೂಷಣಾದಿಗಳು] ಮತ್ತು ಆಂಗಿಕ [ನರ್ತನ] ಎಂಬ ಅಭಿನಯಗಳೂ ತದಾಧಾರಕ್ಕಾಗಿಯೂ ನಿರ್ದೇಶನಕ್ಕಾಗಿಯೂ ಭಾಗವತನ ಹಾಡುಗಾರಿಕೆ ಮತ್ತು ಮೃದಂಗ ಚಂಡೆಗಳೆಂಬ ವಾದ್ಯಗಳೂ ಇವೆ. ವಾಚಿಕಾಭಿನಯದಿಂದ ಸಾಹಿತ್ಯ ವೂ ಆಂಗೀಕಾಹಾರ್ಯಾಭಿನಯಗಳಿಂದ ಸಂಗೀತವೂ ಪ್ರಯೋಗಿಸ ಲ್ಪಡುತ್ತಾ ಯಕ್ಷಗಾನ ಕಲಾಸರಸ್ವತಿಯು ತನ್ನ ಸಾಹಿತ್ಯ ಸಂಗೀತ ಗಳೆಂಬ ಸ್ತನದ್ವಯದಿಂದ ಬುದ್ಧಿ ಮನಗಳಿಗೆ ಆಪ್ಯಾಯಮಾನವಾದ ಪೀಯೂಷಪಾನ ಮಾಡಿಸಿ ಜನಕ್ಕೆ ರಸಗ್ರಹಣದ ಆನಂದನೀಡುತ್ತಾಳೆ.

ಈ ಯಕ್ಷಗಾನ ಮೇಳದವರು ಅಭಿನಯಿಸುವ ಆಟಗಳ ಪ್ರಸಂಗಗಳ ಬೋಧಾಂಶವನ್ನು ಲಕ್ಷಿಸಿದರೆ ಈ ಆಟಗಳಿಂದ ಹೇಗೆ ದೈವಭಕ್ತಿ ಧರ್ಮಪ್ರಜ್ಞೆಗಳ ಉತ್ಪತ್ತಿಗೆ ಹೇತುಭೂತವಾಗಿದ್ದು ಜನ ಜಾಗೃತಿಗೆ ಕಾರಣವಾದ ಸುಸಂಸ್ಕೃತಿ ಪ್ರಸಾರಣೆಯು ಲೋಕೋದ್ಧಾ ರದ ಪುಣ್ಯ ವ್ಯವಸಾಯವಾಗುತ್ತದೆ ಎಂದು ತಿಳಿಯಬಹುದಾಗುತ್ತದೆ. ಅದಕ್ಕಾಗಿ ಕೆಲವು ಪ್ರಸಂಗಗಳ ಬೋಧಾಂಶಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ನಿರೂಪಿಸುತ್ತೇವೆ.

೧ ಶ್ರೀರಾಮಪಾದುಕಾ ಪಟ್ಟಾಭಿಷೇಕ ಪ್ರಸಂಗ

ಮಾನುಷಿಕವಾದ ಬೌದ್ಧಿಕ ಸಂಕಲ್ಪಕ್ಕೆ ಸಿಗದೆ ಧನ ಜನ ಬಲ ಛಲೇತ್ಯಾದಿಗಳಿಂದ ಆಧ್ಯನ ಗಿರುವ ಯಾವನೊಬ್ಬ ಘನ ಪ್ರತಿಷ್ಠಾ ವಂತನ ಪಾರುಪತ್ಯದ ಹದಕ್ಕೆ ಹೋಗದೆ ಮಾನವೀಮಟ್ಟದ ಸಕಲ ವಿಧ ವ್ಯವಹಾರ ಚಮತ್ಕಾರಕ್ಕೆ ಮೀರಿ ತನ್ನದೇ ಆದ ಚಮತ್ಕಾರವನ್ನು

ತೋರಿ ತನ್ನ ಅಪ್ರತಿಹನ್ಯವಾದ ಪ್ರಭಾವವನ್ನು ಬೀರಿ ಈ ಪ್ರಪಂಚದ ಆಡಳಿತೆಯನ್ನು ಮಾಡುವ ಅತಿ ಬಲಾನ್ವಿತ ಅಧಿಕಾರವುಳ್ಳ 'ವಿಧಿ' ಅಥವಾ 'ದೈವ' ಎಂಬುದೊಂದಿದೆ. ಇದು ದಶರಥನ ರಾಮಪಟ್ಟಾಭಿಷೇಕ ಸಂಕಲ್ಪವು ನಿಷ್ಫಲವಾದ ಕಥೆಯಿಂದ ಉಂಟಾಗುವ ಬೋಧಾಂಶವು.

ಕೌಟುಂಬಿಕ ಜೀವನದಲ್ಲಿ ಸಹೋದರರು ಉದ್ಯೋಗ, ಅಧಿಕಾರ, ಆವಾಸ ಪ್ರದೇಶ, ಸ್ವಾಭಾವಿಕ ಯೋಗ್ಯತೆ ಇತ್ಯಾದಿಗಳಲ್ಲಿ ಪರಸ್ಪರ ಭಿನ್ನರಾಗಿದ್ದರೂ ಆ ಸಹೋದರರು ಪರಸ್ಪರ ವೈಷಮ್ಯ ಮನೋವೃತ್ತಿ ತಾಳದೆ ಅನ್ಯೋನ್ಯ ಪ್ರೇಮಪಾಶ ಪ್ರಬಂಧಿತರಾಗಿ ಪರಸ್ಪರ ಸೌಹಾರ್ದದಿಂದ ಒಕ್ಕೂಟದವರಾಗಿದ್ದರೆ ಅವರಿಗೂ ತತ್ಕುಟುಂಬಕ್ಕೂ ಅನ್ಯರಿಗೂ ಶ್ರೇಯಸ್ಸುಂಟಾಗುವುದು. ಇದು ಭರತನ ದೆಶೆಯಿಂದ ಶ್ರೀರಾಮಪಾದುಕಾ ಪಟ್ಟಾಭಿಷೇಕವಾದ ಕಥೆಯಿಂದ ಸಿಗುವ ಬೋಧಾಂಶವು.

೨ ಖರದೂಷಣವಧಾ ಪ್ರಸಂಗ

ನಿಸರ್ಗ ನಿಯಮಾನುಸಾರವಾಗಿ, ಹೆಣ್ಣಿಗಾಗಲಿ ಗಂಡಿಗಾಗಲಿ ಪ್ರಾಯ ಪ್ರೌಢಿಮೆಯ ದೆಸೆಯಲ್ಲಿ, ಪ್ರತಿಲಿಂಗಿಯ ರೂಪ ಯೌವನಾದಿ ಸೌಂದರ್ಯ ದರ್ಶನಾತ್ ಕಾಮ ಭೋಗಾಕಾಂಕ್ಷಾ ಬದ್ಧವಾದ ಮನೋವಿಕಾರ ಉತ್ಪತ್ತಿಯಾಗಬಹುದಾದರೂ, ಸಮಾಜ ಸ್ವಾಸ್ಥ್ಯಕ್ಕೆಂದು ದೇಶಕಾಲಾನುಗುಣವಾಗಿ ಧರ್ಮಜ್ಞರಿಂದ ನಿರ್ಣಯಿಸಲ್ಪಟ್ಟ ನೀತಿ ನಿಬಂಧನೆಗಳನ್ನು ನಿರ್ಲಕ್ಷಿಸಿ, ಸ್ವೈರಪ್ರವೃತ್ತಿ ಪ್ರಪೀಡಿತಾವಸ್ಥೆಯಿಂದ ಅನ್ಯಾಯ—ಅಶ್ಲೀಲ ಮಾರ್ಗದಿಂದ ಮುಂಬರಿದರೆ, ಅಂಥ ಜನಕ್ಕೆ ಅದರಿಂದ ಮಾನ ಹಾನಿಯೋ, ಸ್ಥಾನ ಹಾನಿಯೋ, ನೋವೋ, ಸಾವೋ ಸಂಭವಿಸಿ, ಇಷ್ಟಕ್ಕೆ ವಿರುದ್ಧವಾಗಿ ಅನಿಷ್ಟವೇ ಫಲ ಪ್ರಾಪ್ತಿಯು. ಇದು ಶ್ರೀರಾಮನಿಂದಾದ ಶೂರ್ಪನಖ ಮಾನಭೇದನದ ಕಥೆಯಿಂದ ಸಿಗುವ ಬೋಧಾಂಶವು.

ಅಶುಭ ಸಾಧನಾತ್ಮಕವಾದ ದುರ್ವ್ಯವಹಾರದಲ್ಲಿರುವ ದುಷ್ಟರಿಗೆ ನೀಡುವ ಸಹಾಯವು ಪರಿಣಾಮದಲ್ಲಿ ನಿರರ್ಥಕವಾಗುವುದಲ್ಲದೆ

ಸಹಾಯ ಕರ್ತೃವಿನ ಸ್ಥಾನ, ಮಾನ, ಪ್ರಾಣಗಳ ಸ್ವವಿನಾಶದವರೆಗೂ ಅನಿಷ್ಟವನ್ನುಂಟುಮಾಡುವುದು. ಇದು, ಶೂರ್ಪನಖಿಯ ಸಹಾಯಕ್ಕಾಗಿ ಉದ್ಯೋಗಿಸಿದ ಖರದೂಷಣಾದಿಗಳಿಗೆ ಶ್ರೀರಾಮನಿಂದಾದ ಮರಣದ ಕಥೆಯಿಂದ ಸಿಗುವ ಬೋಧಾಂಶವು.

೩ ಸೀತಾಪಹಾರ ಪ್ರಸಂಗ

ಸ್ಥೂಲಾವಲೋಕನ ಮಾತ್ರಕ್ಕೆ ಸುಂದರವಾಗಿ ತೋರಿದುದು ಸ್ವಹಿತಕ್ಕೆಂದು ಪರಿಗ್ರಾಹ್ಯವು ಸರಿಯಾಗಲಿಕ್ಕಿಲ್ಲ. ಕಣ್ಣಿನ ಮೇಲ್ನೋಟಕ್ಕೆ ಮಾತ್ರ ಕಾಂಚನವಾಗಿ ಕಾಣಿಸಿಕೊಂಡದ್ದನ್ನು ಕಾಮಿಸಿದರೆ, ಕಡೆಗೆ ಕಷ್ಟಕ್ಕೆ ಗುರಿಯಾಗಿ, ದುರ್ದೆಶೆಯ ದುರ್ಮಡುವಿನಲ್ಲಿ ಬಿದ್ದು ದುಃಖಿಸಬೇಕಾದ ದುಸ್ಸಂದರ್ಭವು ಸಂಭವಿಸಬಹುದು. ಇದು, ಕಾಪಟ್ಯದ ಕಾಂಚನ ಮೃಗಕ್ಕಾಗಿ ಸಾಧಿಸಿದ ರಾಮನಿಗೆ, ತತ್ಪರಿಣಾಮದಿಂದ ಸೀತೆಯನ್ನು ಕಳೆದುಕೊಂಡು ದುಃಖಿಸಬೇಕಾದ ದುರ್ದೆಶೆ ಪ್ರಾಪ್ತವಾದ ಕಥೆಯಿಂದ ಸಿಗುವ ಬೋಧಾಂಶವು.

೪ ವಾಲಿ ವಧಾ ಪ್ರಸಂಗ

ತಾನು ಬಲ್ಲಿದ, ಬಲಶಾಲಿ ಇದ್ದೇನೆ ಎಂಬ ಬಿಂಕದಿಂದ ಬಡಿಯ ಬಡವರನ್ನು ಬಾಧಿಸಿ ಬೀಳ್ಗೊಳಿಸಿ, ಆ ಬಡವರ ಭೋಗ್ಯ ಸಂಪತ್ತನ್ನು ಸ್ವಸಾಮರ್ಥ್ಯದಿಂದ ಸೂರೆಮಾಡಿ ಮೆರೆವ ದರ್ಪಿಷ್ಟ ದುಷ್ಟನಿಗೆ ಸದ್ಯದಲ್ಲಿ ಜಯವಿದ್ದಹಾಗೆ ತೋರಿದರೂ, ಕೊನೆಗೊಂದು ಸಂದರ್ಭದಲ್ಲಿ ಆತನು, ದೈವತಂತ್ರ ನಿಯೋಜಿತವಾಗಿ ಮರೆಯಿಂದ ಬರುವ ಗುಟ್ಟಿನ ಕೆಟ್ಟ ಪೆಟ್ಟಿಗೆ ಸಿಕ್ಕಿಬಿದ್ದು, ಅನಿರೀಕ್ಷಿತ ಅಧಃಪತನವನ್ನನುಭವಿಸಿ ಪಶ್ಚಾತ್ತಾಪ ಪರಿತಾಪಗಳಿಗೆ ಬಲಿಯಾಗಿಯೇ ಬಿಡುವನು. ಇದು, ಶ್ರೀರಾಮನ ಮರೆಯ ಬಾಣದಿಂದ ವಾಲಿಗೆ ಸಂಭವಿಸಿದ ವಧೆಯ ಕಥೆಯಿಂದ ಸಿಗುವ ಬೋಧಾಂಶವು.

೫ ಚೂಡಾಮಣಿ (ಉಂಗುರ ಸಂಧಿ) ಪ್ರಸಂಗ

ಸ್ವಕೀಯ ಸಂಪತ್ತು ಸ್ವಾಧೀನತೆಯಿಂದ ತಪ್ಪಿಹೋಗಿ, ಅದು

ಅನ್ಯಾಯವಾಗಿ ಅನ್ಯತ್ರ ಸೂರೆಹೋಗಿ ತತ್ಫಲದಿಂದ ಸಂಕಷ್ಟ ಸಂಭವಿಸಿದರೆ ಬರೇ ತನ್ನ ದೈನ್ಯತೆಯನ್ನು ದೂರುತ್ತಾ ದುಃಖಪಡುತ್ತಾ, ದೈವವಾದಾವಲಂಬನ ನ್ಯಾಯದಿಂದಲೇ ಕಾಲಕ್ಷೇಪ ಮಾಡುತ್ತಿರುವುದು ಸರಿಯಲ್ಲ. ಬರೇ ದೈವಶರಣುತ್ವ ನ್ಯಾಯದಿಂದ ನಿಸ್ತೇಜನಾಗಿರುವುದು ಕಾಪುರುಷ ಲಕ್ಷಣವು. ಆದರೆ ಯಥಾಸಾಧ್ಯದ ಸಂದರ್ಭೋಚಿತ ಸಹಾಯವನ್ನಾದರೂ ಪಡೆದು, ಗತ ಸಂಪತ್ತಿನ ಪುನಪ್ರಾ೯ಪ್ತಿಗಾಗಿ ಪ್ರಯತ್ನಪಡುತ್ತಾ ಪೌರುಷವಂತನಾದ ಧೀರ ಉದ್ಯೋಗಿಯಾಗಿರಬೇಕಾದುದೇ ನ್ಯಾಯ ಶೀಲಕ್ಕೆ ಸರಿಯಾದ ನಡತೆಯು. ಯಾಕೆಂದರೆ ಉದ್ಯೋಗಶೀಲನಾದ ಪುರುಷಸಿಂಹನಿಗೆ ಸಂಕಷ್ಟ ಸಮುತ್ತೀರ್ಣಕ್ಕಾಗುವ ಸೌಭಾಗ್ಯಲಕ್ಷ್ಮಿಯು ಸಿದ್ಧಿಸುವಳು. ಇದು ಶ್ರೀರಾಮನು ಆಂಜನೇಯನಿಂದ ಸೀತಾನ್ವೇಷಣ ಮಾಡಿಸಿದ ಕಥೆಯಿಂದ ದೊರೆಯುವ ಬೋಧಾಂಶವು.

ಪರೋಪಕಾರ—ಇದು ಹರಿಭಕ್ತಿಯ ಅಭಿವ್ಯಕ್ತ ಆಚಾರ; ಪರೋಪಕಾರ—ಇದು ಧರ್ಮಜ್ಞ-ಪ್ರಾಜ್ಞ-ಸುಜ್ಞ-ಸುಜನರ ಆವಶ್ಯಕ ಧರ್ಮವ್ಯವಹಾರ; ಪರೋಪಕಾರ-ಇದು ನಿಶ್ರೇಯ ಅಭ್ಯುದಯಗಳ ಸಾಧನೆಯ ಪುಣ್ಯಾಚಾರ; ಪರೋಪಕಾರ—ಇದು ಪ್ರಪಂಚ ಜೀವನದಲ್ಲಿ ಸ್ವಾಸ್ಥ್ಯ ಸಂಸ್ಥಾಪನೆಯ ಯುಕ್ತಿಸಾರ; ಪರೋಪಕಾರ—'ಇದು ಪರಮಾತ್ಮಾನುಗ್ರಹವನ್ನು ಸೆಳೆದು ತರುವ ಸೂತ್ರಾಧಾರ; ಮತ್ತು ಈ ಪರೋಪಕಾರ—ಇದು ವಿದ್ವಾಂಸರ ವಿದ್ಯೆಗೂ ಧನಾಢ್ಯರ ಧನಕ್ಕೂ ಬಲಾಢ್ಯರ ಬಲಕ್ಕೂ ಪಂಡಿತರ ಪಾಂಡಿತ್ಯಕ್ಕೂ ಪ್ರಾಜ್ಞರ ಬುದ್ಧಿಮತ್ತತೆಗೂ, ಮನುಷ್ಯಮಾತ್ರನ ವಿವೇಕಕ್ಕೂ ಸಾಫಲ್ಯ ಸಿದ್ಧಿಯ ಕರ್ಮಚಮತ್ಕಾರ ಎಂಬುದು ಆಂಜನೇಯನಿಂದ ನಿರ್ವಹಿಸಲ್ಪಟ್ಟ ಸೀತಾನ್ವೇಷಣದ ಉದ್ಯೋಗದ ಕಥೆಯಿಂದ ಸಿಗುವ ಬೋಧಾಂಶವು.

ಸುವಿಚಾರತಃ ಸಂಕಲ್ಪಿತವಾದ ಸದುದ್ದೇಶದ ಸಾಧನೆಯಲ್ಲಿ ದೈವಾಯತ್ತವಾಗಿ ಮಧ್ಯೆ ಮಧ್ಯೆ ಸಂಭವಿಸಬಹುದಾದ ಸಕಲ ವಿಧ ವಿಘ್ನವಿಡ್ಡೂರಾದಿಗಳಿಂದ ನೈರಾಶ್ಯ ಜನಿತ ನಿಸ್ತೇಜತೆ ಉಂಟಾಗದಂತೆ, ಸ್ಥೈರ್ಯ ಧೈರ್ಯಗಳನ್ನು ಚೆನ್ನಾಗಿ ಇರಿಸಿಕೊಂಡು, ಉಲ್ಲಾಸ

ಬಿಡದೆ, ಉತ್ಸಾಹಗೆಡದೆ, ಆ ವಿಘ್ನವಿಡ್ಡೂರಾದಿಗಳನ್ನು ಸ್ವಪೌರುಷ ದಿಂದ ಹಾರಹೊಡೆದು, ಮುಂಬರಿಯುವ ಧೀರನಿಗೆ ಕೊನೆಗೆ ಕಾರ್ಯ ಸಿದ್ಧಿಯು ಜಯು ಉಂಟಾಗುವುದು ನಿಶ್ಚಯವು. ಇದು, ಹನು ಮಂತನು ಸೀತಾಸಂದರ್ಶನವನ್ನು ಪಡೆದು, ಶ್ರೀ ರಾಮ ಮುದ್ರಿಕೆ ಯನ್ನು ಆಕೆಗೆ ಇತ್ತು, ಪ್ರತಿಯಾಗಿ ಆಕೆಯಿಂದ ಚೂಡಾಮಣಿ ಯನ್ನು ಪಡೆದ ಕಥೆಯಿಂದ ಸಿಗುವ ಬೋಧಾಂಶ.

ಸುವಿವೇಚನಾ ಸಂಪನ್ನನಾದ ಭೃತ್ಯನು, ಸ್ವಾಮಿಯಿಂದ ಆಜ್ಞಪ್ತ ವಾದುದಷ್ಟನ್ನೇ ಅಲ್ಲದೆ, ಸ್ವಾಮಿಗೆ ಹಿತವಿಚಾರವನ್ನು ಸ್ವಬುದ್ಧಿ ಬಲ ದಿಂದ ವಿವೇಚಿಸಿ, ಸೇವಾಕಾರ್ಯ ಚಾತುರ್ಯವನ್ನು ಪೂರೈಸಬೇಕಾಗು ತ್ತದೆ. ಇದು, ಹನುಮಂತನಿಂದ ನಡೆಸಲ್ಪಟ್ಟ ವನಭಂಗ, ಜಂಬುಮಾಲಿ ಅಕ್ಷಯಕುಮಾರಾದಿ ಸಂಹನನ, ರಾವಣ ಸಮಕ್ಷಮ ಸಂಭಾಷಣ, ಲಂಕಾದಹನ–ಎಂಬೀ ಸನ್ನಿವೇಶಾನ್ವಿತ ಕಥೆಯಿಂದ ಸಿಗುವ ಬೋಧಾಂಶವು.

೬ ಸೇತು ಬಂಧನ (ವಿಭೀಷಣ ನೀತಿ) ಪ್ರಸಂಗ

ಯಾವನೊಬ್ಬನು ಸ್ವಜನನಾಗಿದ್ದರೂ ಅವನು ಧರ್ಮಬಾಹಿರ ನಾಗಿದ್ದರೆ, ಅವನೊಡನಿರುವ ಸ್ವಜನಾಭಿಮಾನಪೂರ್ವಕವಾದ ಸ್ನೇಹಸಾಂಗತ್ಯಗಳನ್ನು ಸಂತ್ಯಜಿಸಿ, ಯಾವನೊಬ್ಬನು ಪರಕೀಯ ನಾಗಿದ್ದರೂ ಅವನು ಧರ್ಮಸಂಪನ್ನನಾಗಿದ್ದರೆ, ಅವನೊಡನೆ ಅಭಿ ಮಾನ ಪೂರ್ವಕವಾದ ಸ್ನೇಹಸಾಂಗತ್ಯಗಳನ್ನು ಸಂಬಂಧಿಸಿಕೊಂಡಿರು ವುದೇ ಉಚಿತವು; ಶ್ರೇಯಸ್ಕರವು. ಇದು ವಿಭೀಷಣನು ತನ್ನಣ್ಣನಾದ ರಾವಣನನ್ನು ತ್ಯಜಿಸಿ, ಶ್ರೀ ರಾಮನ ಶರಣಾಗತನಾದ ಕಥೆಯಿಂದಾ ಗುವ ಬೋಧೆಯು. ದೇಹಬಲವನ್ನು ಸಹಕಾರಿತ್ವದಲ್ಲಿ ಪ್ರಯೋಗಿಸಿ, ದೃಢ ವಿಶ್ವಾಸ-ಸ್ಥಿರೋಲ್ಲಾಸ–ಅಕ್ಷಯೋತ್ಸಾಹ–ಸದುದ್ದೇಶ ಸಂಯು ಕ್ತತೆ-ಧರ್ಮಶ್ರದ್ಧೆ ಇತ್ಯಾದಿಗಳಾದ ಅಂತಃಶಕ್ತಿ ಸಂಪೂರಿತವಾದ ಆತ್ಮಬಲವನ್ನು ಪ್ರಯೋಗಿಸಿ ಪ್ರಯತ್ನ ಮಾಡಿದರೆ, ನೀರಿನ ಸಮುದ್ರ ಕ್ಕಾದರೂ ಕಲ್ಲಿನ ಸೇತುವೆಯನ್ನು ಕಟ್ಟುವಷ್ಟು ಘನಕಾರ್ಯವೂ ಸಾಧ್ಯವಾಗುತ್ತದೆ. ಇದು ಶ್ರೀರಾಮನು ವಾನರಸೇನೆಯ ಸಹಾಯ

ದಿಂದ ಸಮುದ್ರಕ್ಕೆ ಸೇತುಬಂಧನ ಮಾಡಿದ ಕಥೆಯಿಂದ ಜನಕ್ಕೆ ಸಿಗುವ ಬೋಧಾಂಶವು.

೭ ಅಂಗದ ಸಂಧಾನ ಪ್ರಸಂಗ

ಶೈಕ್ಷಣಿಕ ಸಂಪ್ರದಾಯಾನುಸರಣೆಯಿಂದ, ಗುರುಕುಲಾವಾಸ ದೀಕ್ಷಾಪದ್ಧತಿಯಿಂದ ವಿದ್ಯಾವ್ಯಾಸಂಗ ಮಾಡಿ, ಜ್ಞಾನ ಸಂಗ್ರಹ ಮಾಡಿ ಕೊಂಡಿರುವ ಪಂಡಿತನೆಂಬ ಪ್ರತಿಷ್ಠೆ ಇಲ್ಲದಿದ್ದರೂ ಯಾವನೊಬ್ಬನು ದೈವಿಕ ಭಾವನೆ ಧಾರ್ಮಿಕ ಭಾವನೆಗಳಿಂದ ಪರಿಶುದ್ಧಾಂತಃಕರಣ ದಿಂದೊಡಗೂಡಿದ ಸಹಜ ಸಂಸ್ಕಾರವುಳ್ಳವನಾಗಿದ್ದರೆ, ಅಂಥವನು ತನ್ನ ಆತ್ಮ ಸಂಸ್ಕೃತಿಯ ಬಲಪ್ರಯೋಗದಿಂದ ಮಾಡುವ ವಾದದಿಂದ ನ್ಯಾಯವನ್ನು ಮಂಡಿಸಿ, ಪಾಂಡಿತ್ಯ ಬಲಪ್ರಯೋಗಾತ್ ಮಂಡಿ ಸಲ್ಪಡುವ ಪ್ರತಿಪಕ್ಷದವರ ಅನ್ಯಾಯವಾದವನ್ನು ಖಂಡಿಸಿ, ನ್ಯಾಯ ವಿರುದ್ಧತೆಯಲ್ಲಿ ಪ್ರಯೋಗಿಸಲ್ಪಡುವ ಪಾಂಡಿತ್ಯವುಳ್ಳ ಪ್ರತಿವಾದವನ್ನು ಪ್ರತಿಭಟಿಸಿ, ವಾದಿಪ್ರತಿವಾದಿಗಳಲ್ಲಿ ನಡೆಯುವ ಪರಸ್ಪರ ವಿರುದ್ಧವಾದ ಘರ್ಷಣಾತ್ಮಕವಾದ ವಾಗ್ಯುದ್ಧದಲ್ಲಿ ಗೆಲ್ಲಬಲ್ಲವನಾಗುತ್ತಾನೆ. ಇದು, ಶ್ರೀ ರಾಮನಿಂದ ಸಂಧಾನಕ್ಕೆಂದು ಕಳುಹಿಸಲ್ಪಟ್ಟ ಅಂಗದ ಕುಮಾರನು, ಪ್ರತಿಷ್ಠೆಯುಳ್ಳ ಪಂಡಿತನೂ ಗೌರವಯುಕ್ತ ಪ್ರಧಾ ನಿಯೂ ಆಗಿದ್ದ ಪ್ರಹಸ್ತನೆಂಬವನಲ್ಲಿ ವಾಗ್ಯುದ್ಧವನ್ನು ಹೂಡಿ, ಆ ವಾದರಂಗದಲ್ಲಿ ಮೆರೆದುಬಂದನೆಂಬ ಕಥೆಯಿಂದ ಸಿಗುವ ಬೋ ಧಾಂಶವು.

೮. ಅತಿಕಾಯ ಕಾಳಗ ಪ್ರಸಂಗ

ಶುಭೋಪಯೋಗದ ಕರ್ಮವು ಪುಣ್ಯವೆಂದೂ ಅಶುಭೋಪ ಯೋಗದ ಕರ್ಮವು ಪಾಪವೆಂದೂ ಹೇಳಲ್ಪಡುತ್ತದೆ. ಶ್ರೇಯಸ್ಸಾ ಧನಾತ್ಮಕವಾದ ಈ ಜೀವಾತ್ಮನ ಔದ್ಯೋಗಿಕ ನಿಯಮಾನುಸಾರ ವಾಗಿ ಪುಣ್ಯವೇ ಅವಶ್ಯಗ್ರಾಹ್ಯವೆಂದೂ ಪಾಪವೇ ಸರ್ವಥಾ ತ್ಯಾಜ್ಯ ವೆಂದೂ ತಿಳಿಯಲ್ಪಡುತ್ತದೆ. ಕರ್ಮದ ಬಾಹ್ಯಸ್ವರೂಪವಷ್ಟನ್ನೇ ಸ್ಥೂಲದೃಷ್ಟಿಯಿಂದ ಕಂಡು, ತತ್ಕರ್ಮವನ್ನು ಪುಣ್ಯವೆಂದೋ ಪಾಪ ವೆಂದೋ ನಿರ್ಣಯಿಸಲಾಗದು. ಕಾಮ—ಸಂಕಲ್ಪ—ಕ್ರಿಯೆಗಳು

ಎಂಬ ಈ ಮೂರೂ ಕೂಡಿ ಒಂದು ಕರ್ಮವು: ಆದುದರಿಂದ ಬರೇ ಆಂಗಿಕ ಚೇಷ್ಟಾರೂಪವಾದ ಕ್ರಿಯಾವಸ್ಥಾ ಮಾತ್ರವಾಗಿರುವ ಕರ್ಮದ ಬಾಹ್ಯ ಸ್ವರೂಪವೇ, ತತ್ಕರ್ಮದ ಪುಣ್ಯ ಅಥವಾ ಪಾಪ ಎಂಬ ಯೋಗ್ಯತಾ ನಿರ್ಣಯಕ್ಕೆ ನಿದರ್ಶಕವಲ್ಲ. ಕಾಮನಾ ಎಂಬ ಮಾನಸಿಕ ವೃತ್ತಿಯನ್ನೂ, ಸಂಕಲ್ಪ ಎಂಬ ಬೌದ್ಧಿಕ ವೃತ್ತಿಯನ್ನೂ ವಿಚಾರಿಸಿ, ಕ್ರಿಯಾ ಎಂಬ ಆಂಗಿಕ ಚೇಷ್ಟೆಯಿಂದ ಅಭಿವ್ಯಕ್ತವಾಗುವ ತತ್ಕರ್ಮವನ್ನು ಪುಣ್ಯವೆಂದೋ ಪಾಪವೆಂದೋ ವಿವೇಚಿಸಬೇಕಾದುದು ಕರ್ಮ ವಿಮರ್ಶೆಯ ಸರಿಯಾದ ರೀತಿಯು. ಇದು ರಾವಣ ಪುತ್ರನಾದ ಅತಿಕಾಯನೆಂಬವನು, ತನ್ನ ಪುತ್ರತ್ವದ ನ್ಯಾಯಾನುಸರಣೆಯಿಂದ ತನ್ನ ತಂದೆಯ ಸಮರೋದ್ಯೋಗದಲ್ಲಿ ಸಂಯುಕ್ತನಾಗಿ, ಶ್ರೀರಾಮನಿಗೆ ವಿರುದ್ಧವಾಗಿ ಯುದ್ಧಮಾಡಿದುದರಿಂದ ಅವನೂ ಒಬ್ಬ ಪಾಪಿಯೇ ಎಂದು ಸ್ಥೂಲದೃಷ್ಟಿಗೆ ತೋರಿದರೂ ಅವನ ಅಂತರಂಗದಲ್ಲಿ ಅಂಟಿಕೊಂಡಿದ್ದ ಪಾಪ ಪ್ರಕ್ಷಾಳನಾರ್ಥದ ಪ್ರಕಾಮನೆ—ರಾಮ ಪಕ್ಷ ಪ್ರಹಾರ ಪರಿಣಾಮದಿಂದ ತನಗುಂಟಾಗುವ ಮರಣದ ದ್ವಾರಾ ಪ್ರಪಂಚ ಬಂಧನ ವಿಚ್ಛೇದನದಿಂದ ತನಗೆ ಮುಕ್ತಿ ಸಿಗಬೇಕೆಂಬ ಸ್ಥಿರ ಸಂಕಲ್ಪ—ಈ ವಿಚಾರಗಳನ್ನು ತಿಳಿದು, ಶ್ರೀರಾಮನು ಅವನನ್ನೂ ಒಬ್ಬ ಪುಣ್ಯಾತ್ಮನೆಂದೇ ಗೌರವಿಸಿ, ಲಕ್ಷ್ಮಣನ ಮೂಲಕ ಅವನ ಆತ್ಮಾಭಿಲಾಷೆಯಂತೆ ಮರಣವನ್ನಿತ್ತು, ಮಹಾಮುಕ್ತಿಯನ್ನನುಗ್ರಹಿಸಿದನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೯ ಇಂದ್ರಜಿತು ಕಾಳಗ ಪ್ರಸಂಗ

ತನ್ನ ದೇಶ, ತನ್ನ ಮನೆ, ತನ್ನ ಜನ ಎಂಬೀ ಬೇರೆ ಬೇರೆ ತೆರೆನಾದ ಸ್ವಕೀಯ ಭಾವಪೂರ್ವಕವಾದ ಅಭಿಮಾನವೆಂಬುದೇನೋ ಉತ್ತಮ ಗುಣವೇ ಸರಿ. ಆದರೆ ಈ ಅಭಿಮಾನಪೂರ್ವಕವಾದ ಕ್ರಿಯೆಯು ಮಾತ್ರ ಸತ್ಕರ್ಮಾನುಷ್ಠಾನ ಪದ್ಧತಿಯಲ್ಲಿ ಇರುವಂತೆ, ಅರ್ಥಾತ್ ಕಪಟ—ಮೋಸ—ವಂಚನೇತ್ಯಾದಿ ದುರ್ನೀತಿರಾಹಿತ್ಯದಿಂದ, ಧಾರ್ಮಿಕೋದ್ಯೋಗ ನಿರ್ವಹಣೆಯಲ್ಲಿರುವಂತೆ ವ್ಯವಸ್ಥೆ

ಇಟ್ಟುಕೊಳ್ಳಬೇಕಾದುದು ವಿವೇಕಿಗಳಿಗೆ ನ್ಯಾಯವು. ಯಾವ ಒಂದು ವ್ಯವಹಾರವು ಸ್ವಜನಾಭಿಮಾನವೆಂಬ ಸದ್ಗುಣ ಪೂರ್ವಕ ಪ್ರವೃತ್ತ ವಿದ್ದರೂ ಅದು ಪರಪೀಡಕವಾದ ದುಸ್ಸ್ವಾರ್ಥದ ಸಾಧನೆಯಾಗಿದ್ದರೆ, ಅಂಥ ವ್ಯವಹಾರವು ಶ್ರೇಯಃಕಾಂಕ್ಷಿಗಳಾದ ವಿಚಾರವಾದೀ ವಿದ್ವಾಂಸರುಗಳಿಂದ ಸರ್ವಥಾ ಸಂತ್ಯಾಜ್ಯವು. ಯಾಕೆಂದರೆ, ಪರವಂಚನಾವೃತ್ತಿಯು ಪಾಪ ಕರ್ಮವು ಸ್ವಜನಾಭಿಮಾನ ಗುಣೋದ್ಭೂತವಾಗಿದ್ದರೂ ಅದು ಅಧರ್ಮವೇ ಸರಿ. ಅಧರ್ಮ ಸಾಧನೆಯು ಫಲಪ್ರಾಪ್ತಿಯಾಗಿ ಸ್ವಾನುಭವಕ್ಕೆ ಸಂಕ್ಲೇಶ, ಸಕಲ ಸೌಭಾಗ್ಯಗಳ ನಾಶ, ಕೊನೆಗೆ ಸ್ವವಿನಾಶ, ಜತೆಯಲ್ಲಿ ಅಪಯಶ. ಇವು, ರಾವಣನ ಮಗನಾದ ಇಂದ್ರಜಿತು ಎಂಬವನು ಶ್ರೀರಾಮನ ವಿರೋಧಸಾಧನೆಯಲ್ಲಿ ಪಿತೃಸೇವಾ ಎಂಬ ನ್ಯಾಯವನ್ನು ಪಾಲಿಸುತ್ತಿದ್ದರೂ ಕಪಟ ತಂತ್ರ ಪ್ರಯೋಗದ ಕೆಡುನಡತೆಯು ಅಧರ್ಮವನ್ನವಲಂಬಿಸಿದುದರ ಫಲವಾಗಿ ಸ್ವನಾಶವನ್ನೇ ಸಾಧಿಸಿಕೊಂಡನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೧೦. ಮಹಿರಾವಣ ಕಾಳಗ ಪ್ರಸಂಗ

ಸಂಪತ್ತಿನಲ್ಲಿಯೂ ವಿಪತ್ತಿನಲ್ಲಿಯೂ ಸಮಾನ ಸ್ನೇಹದಿಂದ ವರ್ತಿಸುತ್ತಾ, ಸುಹೃತ್ಪೂರ್ವಕವಾದ ಸಹಾಯವನ್ನು ನೀಡಬೇಕಾದುದು ನಿಜವಾದ ಮಿತ್ರನ ನ್ಯಾಯವೇನೋ ಸರಿ. ಆದರೆ ದುರ್ಜನ ಮೈತ್ರಿಯು ಸರ್ವಥಾ ಸಲ್ಲದು. ಪಾಪಿಮಿತ್ರನ ಪಾಪಾಚಾರದಲ್ಲಿ ಸಹಕಾರ–ಸಹಾಯಗಳನ್ನು ನೀಡುವವನು, ತತ್ಪರಿಣಾಮದಿಂದ ತಾನೂ ಪಾಪಭಾಗಿಯಾಗಿ ಪಾಪದ ಫಲವಾದ ಪರಿತಾಪನ್ನು ಪಡಬೇಕಾಗುವುದು. 'ದುಷ್ಟಂ ದೂರೇಣ ವರ್ಜಯೇತ್' ಎಂಬಂತೆ ದುರ್ಜನರನ್ನು ದೂರ ಇರಿಸಿ, ಅವರ ಹಂಗನ್ನು ತಿರಸ್ಕರಿಸಿ ಇರುವುದೇ ಬಾಳಿನ ಭದ್ರತೆಯ ನ್ಯಾಯಗಳಲ್ಲಿ ಮುಖ್ಯ. ಹಾಗಲ್ಲದೆ ಹೋದಲ್ಲಿ, ಬಹು ಬಗೆಯ ಭಂಗ ಭವಣೆಗಳನ್ನನುಭವಿಸ ಬೇಕಾಗಿಬಂದೀತು. ಇದು ದುರ್ಜನನಾದ ರಾವಣನಿಗೆ ಮೈರಾವಣನು ಮೈತ್ರೀನ್ಯಾಯಾನುಸಾರವಾಗಿ ಸಹಾಯಮಾಡಲೋಸುಗ, ಶ್ರೀರಾಮ ವಿರೋಧಾರ್ಥ ತನ್ನ ಕಪಟ

ಕೃತಿಚಾತುರ್ಯವನ್ನು ಮೆರೆಸಿ, ತತ್ಫಲವಾಗಿ ಕೊನೆಗೆ ಹನುಮಂತನಿಂದ, ಧನ, ಜನ, ಸ್ಥಾನಮಾನಾದ್ಯಖಿಲವೈಭವದಿಂದ ಅಪಕರ್ಷಿತನಾಗಿ ಪೆಟ್ಟುತಿಂದು, ಬಲು ನೊಂದು, ಅತ್ತು, ಸತ್ತನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೧೧. ಕುಂಭಕರ್ಣ ಕಾಳಗ ಪ್ರಸಂಗ

ಆಹಾರ, ನಿದ್ರಾ, ಭಯ, ಮೈಥುನಗಳೆಂಬ ದೈಹಿಕ ಸ್ಥಿತಿಸ್ವಾಸ್ಥ್ಯ ಸಾಧನೆಗಳಲ್ಲಿ, ಯಾವ ವಿಲಾಸ ಯೋಜನೆಗಳನ್ನು ಎಷ್ಟು ಮಾಡಿಕೊಂಡಿದ್ದರೇನು? ಯಾವುದೋ ಒಂದು ರೀತಿಯಿಂದ ನಮ್ಮನ್ನು ಕಬಳಿಸಲಿಕ್ಕೆಂದು ಕಡು ದರ್ಪದಿಂದ ಮುಂಬರಿದು ಮುಖವೆತ್ತಿ ಬರುವ ಮರಣ ದೇವತೆಯ ಬಲಿಷ್ಠವಾದ ಬಲು ಕಳೆದ ಬಾಯೊಳಗೆ ಬಲಿಯಾಗಲಿಕ್ಕೇಬೇಕು. ಇಂಥ ಮರಣದ ಬಾಯಿಗೆ ತುತ್ತಾಗುವಾಗ, ಮನ ಮುರುಟದೆ, ಉತ್ಸಾಹ ಸುರುಟದೆ, ಉಲ್ಲಾಸ ಕರಟದೆ, ದೈನ್ಯತೆಯನ್ನು ಹೊರದೂಡಿ ಧೈರ್ಯವನ್ನು ಮೈಗೂಡಿ, ಸಂತೋಷವನ್ನು ಸಂಸ್ಥಾಪನೆ ಮಾಡಿಕೊಂಡಿರ ಬೇಕೆಂಬುದು ಸರಿಯೆ. ಆದರೆ ಇಂಥ ಹರ್ಷಚಿತ್ತದಿಂದ: ಧೀರ ಮರಣವನ್ನನುಭವಿಸುವವನಿಗಾದರೂ ತಾನು ದುಸ್ಸಾಧನಾತ್ಮಕವಾದ ದುರ್ವ್ಯವಹಾರದಲ್ಲಿ, ಧರ್ಮಬಾಹಿರ ದೆಶೆಯಲ್ಲಿ ಮರಣ ಪಡೆಯುವಂತಾದರೆ ಪಶ್ಚಾತ್ತಾಪದ ದುರ್ವೇದನೆಯಿಂದ ದುಃಖ ಪಡಬೇಕಾಗುವುದು. ಇದು, ರಾವಣನ ತಮ್ಮನಾದ ಕುಂಭಕರ್ಣನು, ರಾವಣನ ಅತ್ಯಾಗ್ರಹದಿಂದ ತನ್ನ ನಿದ್ರಾಸುಖವನ್ನು ತ್ಯಜಿಸುವಂತಾಗಿ, ಅವನಿಗಾಗಿ ಶ್ರೀರಾಮನ ವಿರುದ್ಧ ರಣವನ್ನೆಸಗಿ ಮರಣ ಪಡೆದನು ಎಂಬ ಕಥೆಯಿಂದ ಸಿಗುವ ಬೋಧಾಂಶವು.

೧೨ ರಾವಣವಧಾ ಪ್ರಸಂಗ

ಕರ್ಮವು ಪರಿಣಾಮವುಳ್ಳದ್ದು. ಸತ್ಕರ್ಮಕ್ಕೆ ಸತ್ಪರಿಣಾಮವೂ ದುಷ್ಕರ್ಮಕ್ಕೆ ದುಷ್ಪರಿಣಾಮವೂ ಇದ್ದೇ ತೀರಬೇಕು. ಕರ್ಮದ ಅಶುಭಪರಿಣಾಮದಿಂದ ಸ್ವಾನುಭವಕ್ಕೆ ಸಂಪ್ರಾಪ್ತಿಸುವ ಸಂಕ್ಲೇಶಾದಿಗಳನ್ನು ಯಾರೂ ಅಪೇಕ್ಷಿಸುವುದಿಲ್ಲ. ಆದುದರಿಂದ ತನ್ನಿಂದ ಅಶುಭ

ಪರಿಣಾಮದ ಕರ್ಮವು ಅರ್ಥಾತ್ ದುಷ್ಕರ್ಮವು ಆಚರಿಸಲ್ಪಡದಂತೆ ಮೊದಲೇ ಸುವಿವೇಚನಾ ಸಂಪನ್ನನಾಗಿರಬೇಕಾದುದು ಪ್ರತಿಯೊಬ್ಬ ಶುಭೇಚ್ಛುವಿನ ಪ್ರಧಾನ ಮತ್ತು ಪ್ರಾಥಮಿಕ ನ್ಯಾಯವು. ಕರ್ಮವು ಆಚರಿಸಲ್ಪಟ್ಟ ಮೇಲೆ 'ಅವಶ್ಯಂ ಅನುಭೋಕ್ತವ್ಯಂ ಶುಭಾಶುಭ ಕರ್ಮಫಲಂ' 'ಮಾಡಿದ್ದುಣ್ಣೊ ಮಹಾರಾಯ' ಎಂಬ ರೂಢಿಯ ಗಾದೆಯು ಈ ಕರ್ಮಪ್ರಪಂಚದೊಳಗಿನ ಪ್ರತಿಯೊಬ್ಬವಿಚಾರಶೀಲನ ಸರ್ವಾತ್ಮನಾ ಸಂಲಕ್ಷ್ಯಸ್ಥಿತವಾದ ಸತ್ಯ ವಿಚಾರವು. ಸ್ವಸುಖಸಾಧನಾರ್ಥದ ಸ್ವಾರ್ಥಲಾಲಸೆಯಿಂದ ಅನ್ಯ ಕ್ಷೇತ್ರದಾರಾದಿ ಭೋಗ್ಯವಸ್ತುವಿನ ಅಪಹಾರ ಮಾಡುವ ದುಷ್ಕರ್ಮ ಪ್ರವೃತ್ತನು ರಾಷ್ಟ್ರ, ಕೋಶ, ಸೇನಾ ಎಂಬಿತ್ಯಾದಿ ಯಾವ ಲೌಕಿಕ ಸಂಪದ್ಬಲವುಳ್ಳವನಾದರೂ ವಿದ್ಯೆ, ಬುದ್ಧಿ, ಶಾಸ್ತ್ರಜ್ಞಾನ, ಸಾಹಿತ್ಯ ಎಂಬಿತ್ಯಾದಿ ವಿಷಯಗಳಲ್ಲಿ ಯಾವುದರಲ್ಲಿ ಎಷ್ಟು ಆಢ್ಯತೆ ಉಳ್ಳವನಾದರೂ ಕುಲ, ಅನುಜ, ತನುಜ, ಮಿತ್ರ, ಬಾಂಧವಾದಿ ಪರಿವಾರ ಇತ್ಯಾದಿ ಸ್ಥಿತಿಗಳಲ್ಲಿ ಅತಿಘನ ಪದವಿ ಪಡೆದ ಪ್ರಸಿದ್ಧನಾದರೂ ಮಲೆವ ಮಂಡೆ ಹತ್ತು, ಬೀಸುವ ಬಾಹು ಇಪ್ಪತ್ತು ಎಂದೆನಿಸಿಕೊಂಬಷ್ಟು ದೇಹಬಲ ಹಾಗೂ ಸಾವಿರ ವರ್ಷ ಸೆರೆಯಲ್ಲಿದ್ದು ನಿರಶನವ್ರತ ಮಾಡಿಯೂ ನಿರುತ್ಸಾಹ ತಾಳದಷ್ಟು ಮಾನಸಿಕ ಬಲ—ಇವುಗಳನ್ನು ಪಡೆದವನಾದರೂ ದುಷ್ಕರ್ಮ ಪ್ರವೃತ್ತನು. ತನ್ನ ದುಷ್ಕರ್ಮದ ಪರಿಣಾಮರೂಪೀ ದುರ್ದೈವದಿಂದ ಸಕಲ ಸಂಪತ್ಸಂಹೃತನಾಗಿ ಸಂಕ್ಲೇಶಪಾಶಬದ್ಧ ದುಸ್ಥಿತಿಗೆ ಸೆಳೆಯಲ್ಪಟ್ಟು ದುಃಸಹನೀಯ, ದುಃಖದಾಯಕ, ದುರ್ದಶಾ, ದುಷ್ಕೂಪದಲ್ಲಿ ಧುಮುಕಿ ಬಿದ್ದು, ಸರ್ವನಾಶವನ್ನು ಪಡೆಯುವನು. ಇದು ರಾವಣನೆಂಬವನು ಸಾಮ್ರಾಜ್ಯ, ಸಂಪತ್ತು, ವಿದ್ವತ್ತು, ಬುದ್ಧಿ, ಕೌಶಲ್ಯ, ಸಾಹಿತ್ಯ ಸಂಗೀತಾದಿ ಕಲಾಪ್ರಾವೀಣ್ಯ, ಶಾರೀರಿಕ, ಮಾನಸಿಕ ಬಲಾಢ್ಯತೆಗಳು, ಪುತ್ರ, ಮಿತ್ರ, ಕಳತ್ರ, ಬಂಧುಜನ ಪರಿವಾರ ಸಂಯುಕ್ತತಾ ಮೊದಲಾದ ಅನೇಕಾನೇಕ ಪ್ರಶಂಸಾರ್ಹ ಪದವಿಗಳಲ್ಲಿ ಪ್ರತಿಷ್ಠಾವಂತನಾದ ಪ್ರಖ್ಯಾತ ಪುರುಷನಾದರೂ ಪರಪತ್ನಿ ಅರ್ಥಾತ್ ಸೀತಾದೇವಿಯನ್ನು ಅಪಹರಣ ಮಾಡಿದ ತನ್ನ ದುಷ್ಕರ್ಮದ ಫಲರೂಪವಾದ ದುರ್ದೈವದಿಂದ ಶ್ರೀರಾಮ ವಿರುದ್ಧ ಯುದ್ಧೋದ್ಯೋಗ

ದಲ್ಲಿ ಎಲ್ಲವನ್ನು ಕಳೆದುಕೊಂಡು ಸೋಲಿನಿಂದ ಸಂತ್ರಸ್ತನಾಗಿ ಸತ್ತನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೧೩ ಕುಶ ಲವಕಾಳಗ ಪ್ರಸಂಗ

ಪ್ರಜಾಪ್ರೇಮಕ್ಕೆ ಪಾತ್ರನಾಗಿರಬೇಕಾದುದೇ ಪ್ರಜಾಪಾಲಕನಾಗಿರುವ ಪ್ರಭುವಿಗೆ ಪ್ರಾಮುಖ್ಯ ವಿಚಾರವು. ಪ್ರಜಾಹಿತಕ್ಕಾಗಿ ರಾಜನು ಸ್ವಸುಖಭೋಗ್ಯವಾದ ಯಾವುದೊಂದು ತನ್ನ ಆತ್ಯಂತಿಕ ಅನುರಾಗಾರ್ಹ ವಸ್ತುವನ್ನಾದರೂ ಸಂತ್ಯಜಿಸಲಿಕ್ಕೆ ಸದಾ ಸಿದ್ಧನಿರಬೇಕು. ಇದು ಶ್ರೀರಾಮನು ಒಬ್ಬ ಅಗಸನಿಂದ ಅಪವಾದವೊಂದನ್ನು ಅವಗಾಹಿಸಿ ತನ್ನ ಅತ್ಯಂತ ಅನುರಾಗಕ್ಕೆ ಪಾತ್ರಳೂ ಗರ್ಭಿಣಿಯೂ ಆಗಿದ್ದ ಸೀತಾದೇವಿಯನ್ನು ತ್ಯಜಿಸಿ ಆಕೆಯನ್ನು ವನಾಂತರಕ್ಕೆ ಕಳುಹಿಸಿ ಪ್ರಜಾಜನಪ್ರೇಮದ ಬಲದಿಂದ ಪತ್ನಿವಿಯೋಗ ದುಃಖ ಸಹಿಷ್ಣುವಾಗುವುದಕ್ಕೆ ಶಕ್ಯನಾದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

ಸ್ವೇಚ್ಛಾನುಸಾರವಾಗಿ ಸ್ವಪ್ರಯತ್ನದಿಂದ ನಾವು ಸಂಸಾರ ಸಂಬಂಧವನ್ನು ಸಂಚ್ಛೇದನ ಮಾಡಿದರೂ ಋಣಾನುಬಂಧವಿರುವಾಗ ದೈವಯೋಗದಿಂದ ಪುನಃ ಸಂಸಾರ ಸಂಬಂಧವು ಘಟಿಸಿಯೇ ತೀರುವುದು. ಇದು ಶ್ರೀರಾಮನು ಕೈಗೊಂಡ ಅಶ್ವಮೇಧದ ಪರಿಣಾಮವಾಗಿ ಅವನ ಪರೋಕ್ಷದಲ್ಲಿ ಹುಟ್ಟಿ ಬೆಳೆದಿದ್ದ ಕುಶ ಲವರೆಂಬ ಅವನ ಮಕ್ಕಳ ಪ್ರತ್ಯಕ್ಷ ಸಮೀಕ್ಷಾ ಸಂದರ್ಭವೊದಗಿ ಅವನಿಂದ ತ್ಯಜಿಸಲ್ಪಟ್ಟಿದ್ದ ಸೀತಾದೇವಿಯೂ ತತ್ಪುತ್ರರೂ ಅವನಿಂದ ಸ್ವೀಕರಿಸಲ್ಪಟ್ಟು ಯಥಾಪೂರ್ವ ಸಂಸಾರ ಸಂಬಂಧಿಯಾದನು ಎಂಬ ಕಥೆಯಿಂದ ಸಿಗುವ ಬೋಧಾಂಶವು.

೧೪ ರಾವಣೋತ್ಪತ್ತಿ, ಶೂರ್ಪನಖಾ ವಿವಾಹ ಪ್ರಸಂಗ

ಕಾಲವು ಉತ್ಕರ್ಷ, ಅಪಕರ್ಷಗಳೆಂಬ ಇಬ್ಬಗೆಯಿಂದ ಪ್ರಪಂಚದ ಪಾರುಪತ್ಯವನ್ನು ಮಾಡುತ್ತದೆ. ಆದುದರಿಂದ ತಪಸ್ವಿಗಳ ಆತ್ಮಶಕ್ತಿಪ್ರಭಾವದಿಂದ ಧರ್ಮಪ್ರಭಾವಿತವಾಗಿ ಶುಭಲಕ್ಷಣಸಂಯುಕ್ತ

ವಾದ ಉತ್ಕರ್ಷ ಕಾಲವು ಅನುಭವ್ಯವಾದರೂ ಅಂಥ ಸ್ವಾಸ್ಥ್ಯಸುಖ ಕಾರಣವಾದ ಸದ್ಧರ್ಮ ಸದಾಚಾರಿಗಳನ್ನು ಖಂಡಿಸುವ ಆತ್ಮಶಕ್ತಿ ಪ್ರಭಾವಾನ್ವಿತ ಋಷಿ ಮುನಿಗಳ ಲೋಕ ಶುಭ ಸದ್ವರ್ತನೆಗೆ ಸಂಕಷ್ಟವನ್ನು ಸಂಪ್ರಾಪ್ತಿಸುವ, ಮಹಿಯ ಮಾಂಗಲ್ಯಕ್ಕೆ ಮಾಲಿನ್ಯದ ಮುಚ್ಚಳವನ್ನಿಕ್ಕುವ ದುರ್ಜನರ ದುರಾಚಾರ ವರ್ಚಸ್ಸಿನಿಂದ ವಿಶಿಷ್ಟವಾದ ಅಪಕರ್ಷಕ ಕಾಲವೂ ಅನುಭವ್ಯವಾಗುವುದುಂಟು. ಇದು ಕೈಕಸಾದೇವಿಗೆ ದಶಮುಖಾದಿ ಪುತ್ರರುದಯವಾಗಿ ಬ್ರಾಹ್ಮಣಾದ್ಯರ ಜಪ ತಪ ನೇಮನಿಷ್ಠಾದಿಗಳಿಗೆ ತೊಡಕು ಉಂಟಾಗಿ ಸಾಧು ಸಂತರಿಗೆ ಸಂತ್ರಾಸ ಸಂಭವಿಸಿತು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

ಪ್ರಯತ್ನಕ್ಕೆ ಫಲವಿದ್ದೇ ಇದೆ. ಸುಧೀರನಾದವನ ಸಾಹಸಕ್ಕೆ ಸಕಾಲದಲ್ಲಿ ಸುಜಯ ಸಂಪ್ರಾಪ್ತಿ ಇದ್ದೇ ಇದೆ. ವಿಘ್ನ ವಿಡ್ವರಾದಿಗಳಿಂದ ನಿರಾಶೆ ತಾಳದೆ, ಸಂಕಷ್ಟ ಸಹಿಷ್ಣುತಾ ಗುಣವನ್ನಾಶ್ರಯಿಸಿ ಉತ್ಸಾಹ ಬಿಡದೆ, ಉಲ್ಲಾಸಗೆಡದೆ ಧೀರ ವ್ಯವಸಾಯಿಯಾಗಿರುವವನಿಗೆ ಕೊನೆಗೆ ಜಯಲಕ್ಷ್ಮಿ ಒಲಿದು ಆತನನ್ನು ಕೃತಾರ್ಥನನ್ನಾಗಿ ಮಾಡಿಯೇ ತೀರುವಳು. ಇದು ರಾವಣನು ಲಂಕಾರಾಷ್ಟ್ರಾಧಿಕಾರವನ್ನು ಪಡೆದನು ಮತ್ತು ದಿಗ್ವಿಜಯ ಯಾತ್ರೆಯಲ್ಲಿ ಜಯ ಪಡೆದನು ಎಂಬ ಕಥೆಯಿಂದ ಸಿಗುವ ಬೋಧಾಂಶವು.

೧೫ ಕಚ ದೇವಯಾನೆ ಪ್ರಸಂಗ

ಹೆಣ್ಣು ಗಂಡುಗಳೊಳಗೆ ಪ್ರಾಯ ಪ್ರೌಢಿಮಾವಸ್ಥೆಯಲ್ಲಿ ಪ್ರಣಯ ಹೇತುಕವಾದ ಪರಸ್ಪರಾಕರ್ಷಣೆಯಾಗುವುದು ನೈಸರ್ಗಿಕವಾದುದೇನೋ ಹೌದು. ಆದರೆ ಬುದ್ಧಿಜೀವಿಯಾಗಿರುವ ಮನುಷ್ಯನು ನೈಸರ್ಗಿಕವಾಗಿ ಪ್ರಾಪ್ತವಾದುದನ್ನು ನೀತಿಯ ನಿಯಮಕ್ಕೆ ಹೊಂದಿಸಿಟ್ಟುಕೊಳ್ಳಬೇಕಾದುದು ಅವನ ಬುದ್ಧಿಬಲಕ್ಕೆ ಅಥವಾ ವಿವೇಚನಾಶಕ್ತಿಗೆ ಮುಖ್ಯ ನ್ಯಾಯವು. ಪ್ರೇಮ, ಪ್ರೀತಿ, ಪ್ರಣಯ, ಕಾಮ ಇತ್ಯಾದಿಗಳಾದ ಆವೇಗಗಳನ್ನು ಅಥವಾ ಭಾವೋತ್ಪತ್ತಿಯ ಅವಸ್ಥೆಗಳನ್ನು ಬುದ್ಧಿಯ ವಿವೇಚನಾ ಸಾಮರ್ಥ್ಯ ಪ್ರಯೋಗಗಳಿಂದ ಕಾಲ ದೇಶ ಪಾತ್ರ ಪರಿಸ್ಥಿತ್ಯಾದಿ ಸಂದರ್ಭಗಳಿಗೆ ಸಮುಚಿತಗಳನ್ನಾಗಿ

ಸುವ್ಯವಸ್ಥೆ ಮಾಡಿಕೊಂಡರೆ ಮಾತ್ರ ಅವುಗಳಿಂದ ಸತ್ಪರಿಣಾಮವು; ಅದಲ್ಲದಿದ್ದರೆ ದುಷ್ಪರಿಣಾಮವು. ಅಂತಃಕರಣರೂಪೀ ರಾಜ್ಯದಲ್ಲಿ ಭಾವವು ರಾಜನಾದರೆ ಬುದ್ಧಿಯೇ ಮಂತ್ರಿಯು. ಮಂತ್ರಿಯ ಸುವಿಮರ್ಶನಾ ಪೂರ್ವಕವಾದ ಸಲಹೆಯನ್ನು ಸ್ವೀಕರಿಸದೆ ರಾಜನೊಬ್ಬನು ಸ್ವಮತ್ಯೈಕ ನ್ಯಾಯದಿಂದ ರಚಿಸುವ ಕಾಯಿದೆಯು ಪ್ರಜಾಕ್ಷೇಮವನ್ನು ಸಾಧಿಸುವುದು ಸಂದೇಹವಿಚಾರವೇ ಸರಿ. ಎಲ್ಲಾದರೂ ಸುದೈವವಶಾತ್ ಅಂಥ ರಾಜನ ಕಾಯಿದೆಯು ಪ್ರಜಾಹಿತವನ್ನು ಮಾಡಿದರೂ ಮಾಡಬಹುದು ಅಷ್ಟೆ. ಆದರೆ ಹಾಗೆ ಸಚಿವಾದ್ಯರ ಸಲಹೆಗೊಳ್ಳದೆ ರಾಜನು ರಾಜ್ಯ ನಿರ್ವಹಣೆ ಮಾಡುವುದು, ಪ್ರಜಾಹಿತವನ್ನು ಪ್ರತಿಷ್ಠೆ ಮಾಡುವುದು ಪ್ರಾಮುಖ್ಯ ಉದ್ದೇಶವಾಗಿರುವ ರಾಜನೀತಿಗೆ ಸರಿಯಲ್ಲ. ಹಾಗೆಯೇ ಭಾವಜನ್ಯವಾದ ಪ್ರೀತಿ, ಪ್ರಣಯಾದಿಗಳು ಬುದ್ಧಿಬಲದಿಂದ ವಿವೇಚಿಸಲ್ಪಟ್ಟು ಸಾಂದರ್ಭಿಕ ಸಮೌಚಿತ್ಯವನ್ನು ಪಡೆದು ಪ್ರಯೋಗವಾದರೆ ಮಾತ್ರ ಸತ್ಪರಿಣಾಮವಾಗಬಹುದು. ಇದಕ್ಕೆ ವಿಭಿನ್ನವಾಗಿ ಸಂದರ್ಭೌಚಿತ್ಯದ ಪರಿಗ್ರಹಣ ಇಲ್ಲದೆ ಅರ್ಥಾತ್ ಬೌದ್ಧಿಕ ಶಕ್ತಿಯ ಬೆಂಬಲವಿಲ್ಲದೆ ಕೇವಲ ಭಾವೋದ್ರೇಕ ಸ್ವೈರಪ್ರವೃತ್ತಿಯಿಂದ ಪ್ರೀತಿ, ಪ್ರಣಯಾದಿಗಳು ಪ್ರಯೋಗವಾದರೆ ಅದರಿಂದ ದುಷ್ಪರಿಣಾಮವಾಗುವುದು. ಈ ವಿಷಯವು ಶುಕ್ರಾಚಾರ್ಯರಲ್ಲಿ ವಿದ್ಯಾರ್ಥಿಯಾಗಿದ್ದ ಕಚನೆಂಬವನಲ್ಲಿ ಮೋಹವಿಟ್ಟು ಪ್ರಣಯವನ್ನು ತಾಳಿದ ಶುಕ್ರಪುತ್ರಿ ದೇವಯಾನೆಯು, ಕೊನೆಗೆ ಕಚದತ್ತ ಶಾಪಗ್ರಸ್ತಳಾಗಿ ದುಷ್ಪರಿಣಾಮವನ್ನನುಭವಿಸುವಂತಾಯಿತು ಎಂಬೀಕಥೆಯಿಂದ ಸಿಗುವ ಬೋಧಾಂಶವು.

ನೀಚಗುಣ ಸಂಯುಕ್ತರಾದವರ ಸಂಪರ್ಕದಿಂದ ಸ್ವಕೀಯ ಸ್ಥಿತಿಗೂ ನೈಚ್ಯತೆ ಪ್ರಾಪ್ತಿಸುತ್ತದೆ ಎಂಬುದು ಕಚನು ದೇವಯಾನೆಗೆ ಶಾಪವಿತ್ತುದಕ್ಕೆ ಪ್ರತಿಯಾಗಿ ತಾನೂ ಆಕೆಯಿಂದ ಶಪಿಸಲ್ಪಟ್ಟನು ಎಂಬ ಕಥೆಯಿಂದ ಸಿಗುವ ಬೋಧಾಂಶವು.

೧೬. ಶಾಕುಂತಳಾ ಪರಿಣಯ ಪ್ರಸಂಗ

ನಿರ್ವಂಚನೆಯ ಪರಿಶುದ್ಧ ಪ್ರೇಮದಿಂದ ಪರಸ್ಪರಾನುಸಂಬಂಧ

ವನ್ನು ಪಡೆದಿರುವ ನ್ಯಾಯಶೀಲವಾದ ಒಂದು ದಾಂಪತ್ಯಕ್ಕೂ, ಲೋಕದಲ್ಲಿ, ದುರದೃಷ್ಟವಶಾತ್ ಯಾವುದಾದರೊಂದು ಮರೆಯ ಮೋಸಗಾರಿಕೆಯ ಚಮತ್ಕಾರದಿಂದ ಪರಸ್ಪರ ವಿಯೋಗ—ವಿಸ್ಮೃತಿ ವೈಷಮ್ಯಾದಿಗಳು ಸಂಭವಿಸುವುದುಂಟು. ಇದು, ಮೃಗ ಬೇಟೆಗಾಗಿ ಬಂದಿದ್ದ ದುಷ್ಯಂತನೆಂಬ ಚಂದ್ರವಂಶೋದ್ಭವ ರಾಜನೊಬ್ಬನು, ಕಣ್ವಾಶ್ರಮದಲ್ಲಿ ಶಕುಂತಳಾ ಎಂಬಾಕೆಯನ್ನು ಕಂಡು, ಅವಳಲ್ಲಿ ಅನುರಕ್ತನಾಗಿ, ಕ್ರಮೇಣ ಅವಳನ್ನು ಗಾಂಧರ್ವ ಪದ್ಧತಿಯ ವಿವಾಹದಿಂದ ಕೂಡಿ, ಏತದ್ರೀತ್ಯಾ ಅವರಿಬ್ಬರಲ್ಲಿ ಪರಸ್ಪರ ಪ್ರೇಮಬದ್ಧವಾದ ದಾಂಪತ್ಯವು ಸಂಘಟಿಸಿದರೂ, ದುಷ್ಯಂತನು ಅವಳನ್ನಗಲಿ ಸ್ವಗೃಹಸ್ಥಿತನಾದಾಗ, ಮರೆಯ ದುರ್ದೈವ ಚಮತ್ಕಾರದಿಂದ ಅವಳಿಗೆ ಸಂಭವಿಸಿದ್ದ ದೂರ್ವಾಸ ಶಾಪದ ಫಲವಾಗಿ, ಆಕೆಯು ಕಣ್ವನಿಂದ ನ್ಯಾಯವಾಗಿ ಕಳುಹಲ್ಪಟ್ಟಂತೆ ಪತಿಗೃಹ ಪ್ರವೇಶಮಾಡಿದರೂ ತತ್ಪತಿಯಿಂದ ಸ್ವೀಕರಿಸಲ್ಪಡದೆ ತಿರಸ್ಕೃತಳಾದಳು ಎಂಬೀಕಥೆಯಿಂದ ಸಿಗುವ ಬೋಧಾಂಶವು.

ಯಾವ ಸತಿಯು ಪತಿಯಿಂದ ಪ್ರಾಪ್ತಿಸಬಹುದಾದ ಸಕಲ ವಿಧದ ಸಂಕಷ್ಟಗಳನ್ನು ಸಹಿಸಿಕೊಳ್ಳುತ್ತಾ ಪತಿ ವಿಷಯಕ ಕಿಂಚಿನ್ಮಾತ್ರದ ದ್ವೇಷವನ್ನಾಗಲಿ, ಪ್ರತೀಕಾರ ಭಾವವನ್ನಾಗಲಿ ತಾಳದೆ ಪತಿಪ್ರೇಮ ಪ್ರತಿಷ್ಠಾನ್ವಿತಾಂತಃಕರಣದಲ್ಲಿ ಪತಿಹಿತಚಿಂತನೆಯನ್ನೇ ಇಟ್ಟುಕೊಂಡು ಪತಿಯ ಸಹವಾಸ, ಸಂಪರ್ಕಾದಿಗಳಿಗೆ ಸಾಧ್ಯವಿಲ್ಲದಿರುವಾಗಲೂ ಪತಿವಶ್ಯತಾ ಸದ್ಭಾವನಾಪೂರ್ವಕವಾಗಿ ಪತಿಭಕ್ತಿಪರಾಯಣಳಾಗಿಯೆ ಇರುವಳೋ ಅಂಥ ಸಚ್ಛೀಲಳಾಗಿರುವ ಸಾಧ್ವಿಗೆ ದೇವರ ದಯೆಯಿಂದ ಅವಳ ದುಃಖಕಾರಕ ದುರ್ದೆಶೆಯೆಲ್ಲ ದೂರ ಹೋಗಿ ಪತಿವಿದೂರಾತ್ ಪ್ರಾಪ್ತವಾಗಿದ್ದ ಪರಿತಾಪವು ಪರಿಸಮಾಪ್ತಿಯಾಗಿ ಪತಿಸಂಯೋಗ ಶುಭಯೋಗಾಗಮನ ಉಂಟಾಗಿ ಸೌಭಾಗ್ಯವತಿಯಾಗುವ ಹರ್ಷಕಾಲವು ಬಂದೇತೀರುವುದು. ಇದು ದುಷ್ಯಂತನು ಅಭಿಜ್ಞಾನಕ್ಕಾಗಿ ಶಕುಂತಳೆಯೊಡನೆ ಇಟ್ಟಿದ್ದ ಉಂಗುರವೊಂದು, ಒಬ್ಬಾತ ಮೊಗವೀರನ ಮೂಲಕ ಮರಳಿ ದುಷ್ಯಂತನಿಗೆ ಕಾಣಸಿಗಲು

ಶಕುಂತಳಾಬದ್ಧವಿದ್ದ ದೂರ್ವಾಸ ಶಾಪ ಪ್ರಭಾವವು ಮುಗಿದು, ತತ್ಫಲವಾಗಿ ದುಷ್ಯಂತನಿಗೆ ಶಕುಂತಳೆಯು ಜ್ಞಾಪಕ ಉಂಟಾಗಿ, ಅವಳಲ್ಲಿ ಪೂರ್ವಾದಧಿಕತರ ಪ್ರೇಮ ಹುಟ್ಟಿ ಅವಳನ್ನು ತಿರಸ್ಕರಿಸಿದ್ದ ತನ್ನ ತಪ್ಪಿಗಾಗಿ ಪಶ್ಚಾತ್ತಾಪದಿಂದ ಪರಿತಪ್ತನಾಗಿ ಅವಳೊಡನೆ ಪುನಃ ಮಿಲನಕ್ಕಾಗಿ ಅತ್ಯಾಕಾಂಕ್ಷಾಬದ್ಧನಿರುತ್ತಾ ಕೊನೆಗೊಂದು ದಿನ ದುರ್ಜಯನೆಂಬ ದುಷ್ಟ ದೈತ್ಯನ ದಮನಾರ್ಥವಾಗಿ ಸಾಗುತ್ತಿದ್ದ ದೇವತೆಗಳ ಧುರೋದ್ಯೋಗದಲ್ಲಿ ತನ್ನ ಸಹಾಯ ಕರ್ಮವನ್ನು ಪೂರೈಸಿ, ಮನೆಗೆ ಮರಳುತ್ತಿರುವಾಗ ಮಧ್ಯೆ ಮರೀಚ್ಯಾಶ್ರಮದಲ್ಲಿ ನಿಜ ಸತಿಯನ್ನೂ ನಿಜ ಸುತನನ್ನೂ ಕಂಡು ಗತಾನಿಷ್ಟವಿಚಾರಗಳಿಗೆಲ್ಲ ಉಚಿತ ಪರಿಹಾರವನ್ನು ಮಾಡಿಕೊಂಡು ಅವರನ್ನು ಸ್ವೀಕರಿಸಿ ಕೊಂಡು ಹರ್ಷಗೊಳಿಸಿದನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೧೭ ಭೀಷ್ಮೋತ್ಪತ್ತಿ ಪ್ರಸಂಗ

ದೇಹಾನುಬಂಧಿಯಾಗಿರುವ ಜೀವಾತ್ಮನಿಗೆ ಕಾರ್ಯಚಲಾವಣೆಯ ಸ್ಥಿತಿಪ್ರಾಪ್ತಿಗೆ ತಲೆಯ ಯೋಚನೆಯೂ ಹೃದಯದ ಭಾವವೂ ಆಶ್ರಯಗಳು. ಹಾಗೆಯೇ ಸಮಾಜ ಜೀವಿಯಾದ ಮನುಷ್ಯನ ಶೈಶವ ದೆಶೆಯಿಂದ ಪ್ರಬುದ್ಧ ದೆಶೆಪ್ರಾಪ್ತಿಯ ಪೋಷಣೆಗೂ ಅಭಿವೃದ್ಧಿಗೂ ತಂದೆಯೂ ತಾಯಿಯೂ ಆಶ್ರಯಸ್ಥಾನರು. ತಲೆಯು ಯೋಚನೆ [ಆಲೋಚನೆ] ಯಿಂದಲೂ ಹೃದಯವು ಭಾವದಿಂದಲೂ ಶರೀರಸ್ಥ ಜೀವಾತ್ಮನ ಪ್ರವರ್ತನೆಗಳ ಪಾಲನೆ ಮಾಡುತ್ತವೆ. ಅದರಂತೆ ತಂದೆಯು ವಿಚಾರಪೂರ್ವಕ ಪ್ರೇಮದಿಂದಲೂ ತಾಯಿಯು ಪ್ರೇಮ ಪೂರ್ವಕ ವಿಚಾರದಿಂದಲೂ ಸಂಸಾರದಲ್ಲಿ ಮಕ್ಕಳ ಪಾಲನೆಯಾಗಿ ಅಭಿವೃದ್ಧಿಯ ವ್ಯವಸ್ಥೆ ನಡೆಯುತ್ತದೆ ಆದುದರಿಂದ ಅಂಥ ಪಾಲನ ಪೋಷಣಗಳಿಂದ ಪ್ರಗತಿ ಸುಗತಿಗಳಿಗೆ ಅಭಿವರ್ಧಿಸುವ ತಂದೆ ತಾಯಿಗಳಲ್ಲಿ ವಿಧೇಯತ್ವದಿಂದ ನಡೆದುಕೊಳ್ಳುತ್ತಾ ಅವರ ಹಿತಕ್ಕಾಗಿ, ಅವರ ಸೇವಾರ್ಥವಾಗಿ ಸ್ವಸುಖಭೋಗ್ಯ ಸಂಪತ್ತನ್ನು ಸಂತೋಷದಿಂದ ಸಂತ್ಯಜಿಸುವುದಕ್ಕೆ ಸಿದ್ಧನಾಗಿರುವಷ್ಟು ಪಿತೃಭಕ್ತಿಸಂಪನ್ನನಾಗಿ

ರಬೇಕಾದುದು ಸುವಿಚಾರಿಯಾದ ಸತ್ಪುತ್ರನ ಆವಶ್ಯಕವಾದ ಧಾರ್ಮಿಕ ಗುಣವು. [ಮಾತಾ ಚ ಪಿತಾ ಚ ಪಿತರೌ ಎಂಬ ಪಿತೃ ಶಬ್ದದ ನಿಷ್ಪತ್ತಿಯ ನ್ಯಾಯದಂತೆ ತಾಯಿಯೂ ತಂದೆಯೂ ಕೂಡಿ ಪಿತೃಶಬ್ದವಾಚ್ಯರಾಗುತ್ತಾರೆ. ಆದುದರಿಂದ ಪಿತೃಭಕ್ತಿಯಲ್ಲಿ ಮಾತೃ ಭಕ್ತಿಯು ಸಮಾವೇಶಗೊಂಡಿರುತ್ತದೆ] 'ಯಃ ಪ್ರೀಣಯೇತ್ಸುಚರಿತ್ರೈಃ ಪಿತರಂ ಸ ಪುತ್ರಃ' ಎಂಬ ನೀತ್ಯುಪದೇಶದಂತೆ ಪಿತೃಪ್ರೀತ್ಯರ್ಥವಾದ ಪುಣ್ಯಾಚರಿತೆಯಲ್ಲಿ ಪ್ರಯುಕ್ತನಾಗಿರಬೇಕಾದುದು ಪುತ್ರನ ಧಾರ್ಮಿಕ ನಿಯಮವು. ಇದು ಹಸ್ತಿನಾವತಿಯ ಶಂತನು ಮಹಾರಾಜನ ಮಗ ನಾದ ದೇವವ್ರತನು ಎಳವೆಯಲ್ಲಿ ತನ್ನ ತಾಯಿಯಾದ ಗಂಗಾದೇವಿ ಯಿಂದ ಪಾಲಿಸಲ್ಪಟ್ಟು ಕ್ರಮೇಣ ದೇವಗಣಮಾನ್ಯರಾದ ಮಹಾ ಪಂಡಿತರಿಂದ ಶಸ್ತ್ರ ಶಾಸ್ತ್ರಾದ್ಯಖಿಳ ಶಿಕ್ಷಣವನ್ನು ಪಡೆದು, ಪ್ರಾಯ ಪ್ರೌಢಿಮೆಯಲ್ಲಿ ತನ್ನ ತಂದೆಯ ಬಳಿಯಲ್ಲಿ ಯೌವರಾಜ್ಯಾಭಿಷಿಕ್ತ ನಾಗಿ ತತ್ಪದವಿ ಪ್ರಸಕ್ತತೆಯಿಂದ ಪಿತೃಹಿತಾರ್ಥದ ರಾಜಕಾರ್ಯ ಸೇವಾನಿರತನಾಗಿರುತ್ತಾ ತನ್ನ ತಂದೆಗೆ ಅನಿರೀಕ್ಷಿತವಾಗಿಯೂ ಅಕಾ ಲಿಕವಾಗಿಯೂ ಪ್ರಾಪ್ತವಾದ ಸ್ತ್ರೀಕಾಮನಾ ಸಂಕಷ್ಟವನ್ನು ತಿಳಿದು, ತತ್ಸಂಕಷ್ಟವನ್ನು ಪರಿಹರಿಸುವುದಕ್ಕಾಗಿ ತಂದೆಯಿಂದ ಕಾಮಿತಳಾಗಿ ದ್ದ ಯೋಜನಗಂಧಿ [ಸತ್ಯವತಿ] ಎಂಬಾಕೆಯನ್ನು ತಂದೆಗೆ ತಂದೊಪ್ಪಿ ಸುವ ಕಾರ್ಯವನ್ನು ತಾನೇ ನಿರ್ವಹಿಸಿ ಆ ಕಾರ್ಯದಲ್ಲಿ ಕೃತಾರ್ಥ ನಾಗುವುದಕ್ಕಾಗಿ ರಾಜ್ಯಪಾಲನಾಧಿಕಾರದ ತನ್ನ ಭಾವೀಭಾಗ್ಯವನ್ನು ಸ್ವಸಂತೋಷದಿಂದ ಸಂತ್ಯಜಿಸಿ ತನಗೆ ಸಂತಾನೋತ್ಪತ್ತಿಯಾಗದಂಥ ನಿರ್ಬಂಧ ಇರುವುದಕ್ಕಾಗಿ ಮರಣ ಪರ್ಯಂತ ಮದುವೆ ಮಾಡಿ ಕೊಳ್ಳಲಾಗದ ಕಠೋರ ನಿಯಮವುಳ್ಳ ಅಖಂಡ ಬ್ರಹ್ಮಚರ್ಯವ್ರತ ಗ್ರಹಣದ ಘೋರ ಪ್ರತಿಜ್ಞೆಯನ್ನು ಮಾಡಿಕೊಂಡು ಈ ಭೀಷಣ ಪ್ರತಿಜ್ಞಾ ಧಾರಣೆಯಿಂದ 'ಭೀಷ್ಮ'ನೆಂಬ ಅಭಿಧಾನವನ್ನು ಪಡೆದು ಪ್ರಶಂಸಿತನಾದನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೧೮ ಭೀಷ್ಮವಿಜಯ ಪ್ರಸಂಗ

ಶ್ರೇಯಸ್ಸಾಧನಾತ್ಮಕ ಸದುದ್ಯೋಗದಲ್ಲಿ ಸಾಗುತ್ತಿರುವವನಿಗೆ

ಪದೇಪದೇ ಪ್ರಬಲ ಪ್ರತಿಕೂಲ ಪ್ರಾಪ್ತಿಯಾಗುವುದುಂಟು. ಆದರೆ 'ನ್ಯಾಯ್ಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ' ಎಂಬ ಸೂಕ್ತಿಯಂತೆ ಸುವಿಚಾರ ಸಂಪನ್ನರಾಗಿರುವ ಸುಧೀರರು ಪ್ರಗತಿ ಮಾರ್ಗದಲ್ಲಿ ಪ್ರತಿಕೂಲವಾಯಿತೆಂದು ಪದ ವಿಚಾಲ್ಯದ ದುರವಸ್ಥೆಗೆ ಸಿಕ್ಕಿಬೀಳುವುದಿಲ್ಲ. ತಪ್ತ ಕಾಂಚನ ನ್ಯಾಯದಂತೆ ಅರ್ಥಾತ್ ಬಲಿಷ್ಠ ಬೆಂಕಿಯಿಂದ ಕಾಯಿಸಲ್ಪಟ್ಟ ಅಷ್ಟಷ್ಟಕ್ಕೆ ಭಂಗಾರವು ಅಷ್ಟಷ್ಟು ಬಣ್ಣದ ಹೆಚ್ಚುಗಾರಿಕೆಯನ್ನೇ ಪಡೆದು ಬೆಲೆಯು ಹೆಚ್ಚಳಕ್ಕೆ ಏರುವಂತೆ ಪ್ರತಿಕೂಲಗಳು ಉಂಟಾದ ಹಾಗೆಲ್ಲ ನ್ಯಾಯಶೀಲರಾದ ಧೀರರ ಸದುದ್ಯೋಗದಲ್ಲಿ ಮತ್ತಷ್ಟು ಕಸುಗೂಡಿ, ಕಳೆಯೇರಿ ಆ ಸದುದ್ಯೋಗ ಸಂಬದ್ಧ ಕಾರ್ಯವು ಸಮಧಿಕತರ ವೇಗವನ್ನು ಪಡೆದು ಪ್ರಬಲವಾಗಿ ಪ್ರವಹಿಸಿ ವಿಜಯ ನಿಲ್ದಾಣವನ್ನು ಬೇಗನೆ ತಲ್ಪುವುದು. ಇದು ಕಾಶಿದೇಶದ ಪ್ರತಾಪಸೇನನೆಂಬ ರಾಜನು ತತ್ಪುತ್ರಿಯರಾದ ಅಂಬೆ, ಅಂಬಿಕೆ ಮತ್ತು ಅಂಬಾಲಿಕೆ ಎಂಬವರನ್ನು ಪರಾಕ್ರಮ ಪ್ರದರ್ಶನವೇ ಫಣವಾಗಿರುವ ಸ್ವಯಂವರ ಪದ್ಧತಿಯ ವಿವಾಹಕ್ಕೆ ನಿಶ್ಚೈಸಿಕೊಂಡಿರುವಾಗ ಹಸ್ತಿನಾವತಿಯ ಭೀಷ್ಮನು ತತ್ಸಹೋದರನಿಗಾಗಿ ಅಲ್ಲಿಗೆ ಹೋಗಿ ಅಲ್ಲಿ ಕೂಡಿದ್ದ, ರಾಜಕುಗಳನ್ನು ಗೆಲಿದು ಆ ಕನ್ಯೆಯರನ್ನು ವಶಗೈದು ಮರಳಿ ಮನೆಗೆ ಬಂದು ವಿಚಾರ ನಡೆಸಿದುದರಿಂದ ಅಂಬೆಯೊಬ್ಬಳು ಸಾಲ್ವನೆಂಬವನಲ್ಲಿ ಅನುರಕ್ತಳಾಗಿದ್ದ ಅನ್ಯಥಾ ಮನಸ್ಕಳೆಂದು ತಿಳಿದುಬಂದುದರಿಂದ ಅವಳನ್ನು ಅವಳಿಚ್ಛೆಯಂತೆ ಸಾಲ್ವನೆಡೆಗೆ ಕಳುಹಿಸಿಕೊಟ್ಟರೂ ಆಕೆ ಸಾಲ್ವನಿಂದ ತಿರಸ್ಕರಿಸಲ್ಪಟ್ಟ ಕಾರಣದಿಂದ ಭೀಷ್ಮನಲ್ಲಿಗೆ ಮರಳಿ ಬಂದು, ಭೀಷ್ಮನೇ ತನ್ನನ್ನು ಮದುವೆಯಾಗುವಂತೆ ಆಗ್ರಹ ಮಾಡಿದರೂ ಭೀಷ್ಮನು ತನ್ನ ಬ್ರಹ್ಮಚರ್ಯಪಾಲನೆಯ ಪ್ರತಿಜ್ಞೆಯು ಭಂಗವಾಗಬಾರದೆಂಬ ನ್ಯಾಯಕ್ಕಾಗಿ ಆಕೆಯನ್ನು ತಿರಸ್ಕರಿಸಲು ಆಕೆ ಇವನ ಪ್ರತಿಜ್ಞಾಪಾಲನೆಯನ್ನು ಭಂಗಿಸುವ ಉದ್ದೇಶ ಸಾಧನೆಗಾಗಿ ಕಿರಾತನೊಬ್ಬನನ್ನು ಇವನೊಡನೆ ಹೋರಾಡುವುದಕ್ಕೆ ನಿಯೋಜಿಸಿ ಅದರಲ್ಲಿ ಕೃತಾರ್ಥಳಾಗದೆ, ಕೊನೆಗೆ ಪರಶುರಾಮಾಚಾರ್ಯರನ್ನೇ ತನ್ನ ಕಾರ್ಯ ಸಾಧನೆಯಲ್ಲಿ ನಿಯೋಜಿಸಿಕೊಂಡುದುದರಿಂದ ಕುರುಕ್ಷೇತ್ರವೆಂಬ ಬವರ ಭೂಮಿಯಲ್ಲಿ ಇಪ್ಪತ್ತೊಂದು

ದಿವಸಗಳ ಅಖಂಡ ಅವಧಿಯಲ್ಲಿ ಭೀಷ್ಮ ಪರಶುರಾಮರೊಳಗೆ ಪರಸ್ಪರ ವಿರುದ್ಧವಾದ ಘೋರ ಸಂಗ್ರಾಮ ನಡೆದು, ಕೊನೆಯಲ್ಲಿ ಪ್ರತಿಜ್ಞಾ ಭಂಗವಾಗಬಾರದೆಂಬ ಭೀಷ್ಮನ ಸದುದ್ದೇಶ ಪೂರಿತವಾದ ಸದುದ್ಯೋಗಕ್ಕೆ ಜಯ ದೊರೆತು ಆತನು ವಿಜಯಿಯಾಗಿ ಪರಶುರಾಮಾಚಾರ್ಯರ ಹರ್ಷ ಪೂರ್ವಕದ ಆಶೀರ್ವಾದಾನುಗ್ರಹವನ್ನು ಪಡೆದು ಮೊದಲಿನದ್ದಕ್ಕಿಂತಲೂ ಅಧಿಕತರ ಯಶಸ್ಸನ್ನು ಹೊಂದಿ ಪ್ರಸಿದ್ಧನಾದನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೧೯ ಗುರುಭಕ್ತಿ ಪ್ರಸಂಗ [ಏಕಲವ್ಯ]

ಜೀವನಿಗೆ ದೇವಭಕ್ತಿಯು ಹೇಗೆ ಆವಶ್ಯಕವೋ ಹಾಗೆಯೇ ಗುರುಭಕ್ತಿಯೂ ಆವಶ್ಯಕವು. ಮಹತ್ವದಿಂದ ಆಕರ್ಷಿಸಲ್ಪಡದಿದ್ದರೆ ಅಲ್ಪಕ್ಕೆ ಸ್ವಸ್ಥತೆ ಇಲ್ಲವಾಗುವುದು ಎಂಬುದು ಲೌಕಿಕ ವಿಜ್ಞಾನಾನುಭವದಿಂದ ನಮಗೆ ಪ್ರತ್ಯಕ್ಷವಾಗಿ ತಿಳಿಯುತ್ತದೆ. ಆದುದರಿಂದ ಮಹತ್ವವನ್ನು ಆಶ್ರಯಿಸಿಕೊಂಡೇ ಅಲ್ಪವು ತನ್ನ ಅಭಿವೃದ್ಧಿಯನ್ನು ಸಾಧಿಸಬೇಕಾಗುತ್ತದೆ. ಲೋಕವ್ಯವಹಾರಬದ್ಧನಾದ ಜೀವನೂ ತನಗಿಂತ ಬೃಹತ್ತರ ಯೋಗ್ಯತಾ ಸಂಪನ್ನನಾದ ಮತ್ತೊಬ್ಬ ಜೀವಾತ್ಮನಿಂದ ಆಕರ್ಷಿಸಲ್ಪಟ್ಟು ತನ್ನ ಸ್ವಾಸ್ಥ್ಯ ಶುಭವನ್ನನುಭವಿಸಿ ತನ್ನ ಮೇಲ್ಮೆಯನ್ನು ಸಾಧಿಸಿಕೊಳ್ಳಬೇಕಾಗುತ್ತದೆ. ಬೃಹತ್ತರ ಯೋಗ್ಯತಾವಾನನಿರುತ್ತಾ ಅನ್ಯರನ್ನು ಉದ್ಧರಿಸುವ ಆತ್ಮವರ್ಚಸ್ಸುಳ್ಳ ಮಹಾನ್ ಪುರುಷನೇ ಗುರುವು. ಅವನಿಂದ ಆಕರ್ಷಿಸಲ್ಪಟ್ಟು ಅನುಗೃಹೀತನಾಗುವುದಕ್ಕೆ ಸಾಧನೋಪಾಯವೇ ಆತನಲ್ಲಿ ಭಕ್ತಿಯನ್ನಿಟ್ಟುಕೊಂಡಿರುವುದು. ಆ ಭಕ್ತಿಯೇ ಗುರುಭಕ್ತಿಯು. ಏವಂಚ, ಗುರುಭಕ್ತಿಯು ಆತ್ಮೋದ್ಧಾರದ ಮುಖ್ಯ ನ್ಯಾಯವು; ನ್ಯಾಯವಾದ ಉಪಾಯವು. 'ಗು' ಶಬ್ದಸ್ತ್ವಂಧಕಾರೇ ಸ್ಯಾತ್ 'ರು' ಶಬ್ದಸ್ತನ್ನಿರೋಧಕಃ। ಅಂಧಕಾರನಿರೋಧಿತ್ವಾತ್ ಗುರುರಿತ್ಯಭಿಧೀಯತೇ — ಎಂಬ ಸೂಕ್ತಿಯಂತೆ ಆಶ್ರಯಿಗಳ ಅಜ್ಞಾನಾಂಧಕಾರವನ್ನು ಅಪಹರಿಸಿ ಅವರ ಆತ್ಮೋನ್ನತಿಗೆ ಆವಶ್ಯಕವಾದ ಜ್ಞಾನಜ್ಯೋತಿಯನ್ನನುಗ್ರಹಿಸಬಲ್ಲ ಆತ್ಮಸತ್ತ್ವಾತಿಶಯ ಸಂಪನ್ನನೇ ಗುರುವು. ಜನಕ, ಉಪನಯನ

ಸಂಸ್ಕಾರ ಕರ್ತಾ, ವಿದ್ಯಾದಾತಾ, ಅನ್ನದಾತಾ ಮತ್ತು ಭಯತ್ರಾತಾ ಎಂಬೀ ಐದು ಬೇರೆಬೇರೆ ಪ್ರಕಾರದಿಂದ ಗಣಿಸಲ್ಪಡುವ ಪಿತರುಗಳಲ್ಲಿ ವಿದ್ಯಾದಾತನಾದ ಗುರುರೂಪದ ಪಿತನೇ ಮುಖ್ಯನು. ಯಾಕೆಂದರೆ ಜನಕೇತ್ಯಾದಿ ಪಿತರುಗಳು ಐಹಿಕ ಸ್ಥಿತಿಸಂಬಂಧ ಮಾತ್ರದವರಾದರೆ ವಿದ್ಯಾದಾತನಾದ ಗುರುವು ಜ್ಞಾನಪ್ರದಾತೃತ್ವದ ಮಹಾನುಗ್ರಹದಿಂದ ಇಹ ಪರಗಳೆರಡಕ್ಕೂ ಸಂಬಂಧಿಸಿದವನು ಈ ವಿಚಾರದಿಂದ ಗುರುವಿನಲ್ಲಿ ಮಹಾತ್ಮ್ಯ ಜ್ಞಾನಪೂರ್ವಕವಾದ ಸುದೃಢ ಶ್ರದ್ಧಾಸಹಿತ ಸುಪ್ರೇಮವನ್ನು ಅಂತಃಕರಣದಲ್ಲಿ ಸಂಸ್ಥಾಪಿಸಿಕೊಂಡು ಸ್ವಾತ್ಮಶಕ್ತಿ ಪ್ರಯೋಗತಃ ಸತ್ಸಾಧನೆಯನ್ನು ಮಾಡಬೇಕಾದುದೇ ಗುರುಭಕ್ತಿ ಸಂಪನ್ನನಾಗಿರಬೇಕಾದವನ ನ್ಯಾಯುವು. ಇಂಥ ಗುರುಭಕ್ತಿ ಸಂಪನ್ನನಿಗೆ ಗುರುವು ಸ್ವೋದ್ದೇಶದಿಂದ ಅನುಗ್ರಹಿಸದಿದ್ದರೂ ಗುರ್ವನುಗ್ರಹವು ತಾನಾಗಿಯೇ ಉಂಟಾಗಿ ಶುಭಸಿದ್ಧಿಯಾಗುವುದು. ಇದು ಏಕಲವ್ಯನೆಂಬ ಬೇಡನೊಬ್ಬನು ದ್ರೋಣಾಚಾರ್ಯನೆಂಬ ವಿದ್ಯಾ ಗುರುವನ್ನು ಸಾಕ್ಷಾತ್ತಾಗಿ ಆಶ್ರಯಿಸಿ ಅವರ ಬಳಿಯಲ್ಲಿಯೇ ವಿದ್ಯಾಭ್ಯಾಸ ಮಾಡಲಾರದವನಾಗಿದ್ದರೂ ಆತನು ತನ್ನ ವನಾಂತರದ ಗುಹಾಗೃಹದಲ್ಲಿಯೇ ಉಳಿದುಕೊಂಡು ಅಲ್ಲಿ ದ್ರೋಣಾಚಾರ್ಯರ ಪ್ರತಿಮೆಯೊಂದನ್ನು ನಿರ್ಮಿಸಿಟ್ಟುಕೊಂಡು ಆ ಪ್ರತಿಮೆಯನ್ನು ಅರ್ಚಿಸಿ, ಆರಾಧಿಸುವ ಉಪಾಯಾಧಾರದಿಂದ ವಾಸ್ತವ ದ್ರೋಣಾಚಾರ್ಯರ ಶ್ರದ್ಧಾಯುಕ್ತ ಸಾಕ್ಷಾದ್ಭಕ್ತನಾದ ಮತ್ತು ತತ್ಫಲವಾಗಿ ಮಹಾ ವಿದ್ವಾಂಸನಾದ ಅರ್ಜುನನೊಡನೆ ಕಾರಣಾಂತರದಿಂದ ಪ್ರತಿಸ್ಪರ್ಧೆಯಿಂದ ಹೋರಾಡಿ ಆ ಹೋರಾಟದಲ್ಲಿ ಸಾಕ್ಷಾತ್ ದ್ರೋಣರಿಂದಲೇ ಶಿಕ್ಷಣ ಪಡೆದು ಅಪ್ರತಿಮನೆನಿಸಿದ್ದ ಆ ಅರ್ಜುನನಿಗಿಂತಲೂ ತಾನೇ ಅಧಿಕತರ ವಿದ್ವಾಂಸನೆಂಬುದನ್ನು ತನ್ನ ಜಯಲಾಭದಿಂದ ಪ್ರದರ್ಶಿಸಿ ತನ್ನ ಗುರುಭಕ್ತಿಯ ಮೇಲಿನ ಭರವಸೆಯಿಂದ ತನ್ನ ಬಲಗೈಯ ಹೆಬ್ಬೆರಳನ್ನು ಯಾಚಿಸಿದ ಆ ದ್ರೋಣರಿಗೆ ಅದನ್ನು ಭಕ್ತಿಯಿಂದ ಕತ್ತರಿಸಿಕೊಟ್ಟು ಸ್ಥಾಯಿ ಸತ್ಕೀರ್ತಿಯನ್ನು ಸಂಪಾದಿಸಿಕೊಂಡನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೨೦ ಬಕವಧಾ ಪ್ರಸಂಗ

ಕೋಟಿಗಟ್ಟಳೆ ಗ್ರಂಥಗಳಿಂದ ಉಕ್ತವಾಗಿರಬಹುದಾದ ಅನೇಕ ತೆರನಾದ ಆಚಾರ ಧರ್ಮಗಳ ಸಮುಚ್ಚಯಾರ್ಥ ನಿರೂಪಣೆಯ ಸಂಕ್ಷಿಪ್ತ ಸೂತ್ರವನ್ನು 'ಪರೋಪಕಾರಃ ಪುಣ್ಯಾಯ ಪಾಪಾಯ ಪರ ಪೀಡನಂ' ಎಂಬ ಅರ್ಧ ಶ್ಲೋಕ ಪ್ರಬಂಧದಿಂದ ಹೇಳಿ ಮುಗಿಸಲಿಕ್ಕಾಗುತ್ತದೆ. ಸ್ವಲಾಭವನ್ನುದ್ದೇಶಿಸಿ ಮಾಡುವ ಪರೋಪಕಾರವು ಯಾಥಾರ್ಥತೆಯಲ್ಲಿ ಧರ್ಮ ನ್ಯಾಯ ಸಾಧುತ್ವದ ಪರೋಪಕಾರವೇ ಅಲ್ಲ. ಅದೊಂದು ಬಗೆಯ ಸ್ವಾರ್ಥ ಜೀವನ ಸಾಧನಾತ್ಮಕವಾದ ಲೋಕ ವ್ಯಾಪಾರವು. ಅಂದರೆ ಪರೋಪಕಾರಾರ್ಥದ ಸತ್ಕರ್ಮದಲ್ಲಿ ತಾನಾಗಿಯೇ ಸಂಭವಿಸಬಹುದಾದ ಅನಭಿಲಷಣೀಯವಾವ ನ್ಯಾಯವತ್ತಾದ ಸ್ವಲಾಭವನ್ನು ತಿರಸ್ಕರಿಸಬೇಕೆಂದು ತಾತ್ಪರ್ಯವಲ್ಲ. ಆದರೆ ಪ್ರತ್ಯುಪಕಾರತಃ ಸಂಪಾದ್ಯವಾಗುವ ಸ್ವಲಾಭವನ್ನೇ ಉದ್ದೇಶಿಸಿ ಮಾಡುವ ಉಪಕಾರವು ಧರ್ಮಸಾಧುವೆಂದು ಮಾನ್ಯವಾಗದು. ತನ್ನ ಉಪಕೃತಿಗೆ ಪ್ರತಿಯಾಗಿ ತನಗೆ ಅಪಕಾರವಾಗುವ ಸಂಭವವಿದ್ದರೂ ಪರಾವರ್ತಿತನಾಗದೆ ಕರ್ತವ್ಯನಿಷ್ಠಾ ಸ್ವಭಾವದಿಂದ ಪರೋಪಕಾರ ಮಾಡಬೇಕಾದುದು ಧರ್ಮಸಾಧುತ್ವವು. ಆವಶ್ಯಕವಾದಲ್ಲಿ ಅನ್ಯರಿಂದ ಅಭ್ಯರ್ಥಿತವಾಗುವ ತನಕ ಕಾದು ಕುಳಿತುಕೊಳ್ಳದೆ ಸ್ವಯಂಸ್ಫೂರ್ತಿಯಿಂದ ಪರ ಹಿತ ವಿಹಿತಾಭಿಯೋಗರಾಗಿ ಉಪಕಾರಮಾಡಬೇಕಾದುದು ಸದ್ಧರ್ಮ ವಿಚಾರವು. ಈ ವಿಷಯವು ವಾರಣಾವತಿಗೆ ಹೋಗಿದ್ದ ಪಾಂಡವರು ಅವರ ವಿರೋಧ ಸಾಧನೆಯ ಸುಯೋಧನಾದ್ಯರ ದುಷ್ಟತಂತ್ರ ಪ್ರಯೋಗವಾಗಿ ನಿರ್ಮಿತವಾಗಿದ್ದ ಜತುಗೃಹವೊಂದರಲ್ಲಿ ಬೆಂಕಿಗೆ ಬಲಿಯಾಗಿ ಭಸ್ಮೀಭೂತರಾಗಬೇಕಾಗಿದ್ದ ದುರವಸ್ಥೆಯಿಂದ ಆಪ್ತ ಜನರ ಗುಪ್ತ ಸಹಾಯದಿಂದ ಪಾರಾಗಿ ಕತ್ತಲೆಯ ಕಾನನವೊಂದನ್ನು ಸೇರಿ ಅಲ್ಲಿ ಇವರನ್ನು ಬಡಿದು ಹಿಡಿದು ಭಕ್ಷಿಸುವುದಕ್ಕಾಗಿ ಬಂದು ಬಾಧಿಸಿದ ಬಲು ದೈತ್ಯನಾದ ಹಿಡಿಂಬ ರಾಕ್ಷಸನನ್ನು ಪಾಂಡವರೊಳಗಿನ ಭೀಮನು ಕೊಂದು ಮತ್ತಾ ಭೀಮನಲ್ಲಿ ಪ್ರಣಯ ಪೀಡಿತಳಾಗಿ ಬಂದ ಹಿಂಡಿಂಬಾ ಎಂಬಾಕೆಯನ್ನು ಆತನು ಶ್ರೀಬಾದರಾಯಣರ ಆಜ್ಞಾನುಸಾರವಾಗಿ ಸುರತ ಸುಖದಿಂದ ಸಂತೃಪ್ತಿ ಪಡಿಸಿ

ಸ್ವಲ್ಪ ಕಾಲಾನಂತರ ಪಾಂಡವರೂ ಕುಂತೀದೇವಿಯೂ ಏಕಚಕ್ರ ವೆಂಬ ಹಳ್ಳಿಯನ್ನು ಸೇರಿ ಬ್ರಾಹ್ಮಣ ವೇಷ ಧರಿಸಿ ಭಿಕ್ಷಾವೃತ್ತಿಯಿಂದ ಕಾಲ ಕಳೆಯುತ್ತಿರುವಾಗ ಆ ಗ್ರಾಮಸ್ಥರನ್ನು ಬಾಧಿಸಿ ಪ್ರತಿದಿನ ಕ್ಕೊಂದೊಂದು ಮನೆಯಿಂದ ಬಾರಿ ಅಶನವನ್ನು ಬಲಾತ್ಕಾರದಿಂದ ಪಡೆಯುತ್ತಿದ್ದ ಬಕನೆಂಬ ಒಬ್ಬ ನರ ಭಕ್ಷಕ ರಾಕ್ಷಸನನ್ನು ಭೀಮನು ಕೊಂದು, ತದ್ಗ್ರಾಮೀಣ ಸಜ್ಜನಕ್ಕೆ ಮಹದುಪಕಾರವನ್ನು ಮಾಡಿದನು ಎಂಬ ಕಥೆಯಿಂದ ಸಿಗುವ ಬೋಧಾಂಶವು.

೨೧ ದ್ರೌಪದೀ ಸ್ವಯಂವರ ಪ್ರಸಂಗ

'ಮಿಡಿ ಪಣ್ಣಾಗುವುದು; ಎಳಗರು ಎತ್ತಾಗುವುದು; ಕಾಲಾನುಕಾಲಕ್ಕೆ ಬಡವನು ಬಲ್ಲಿದನಾಗುವನು' ಎಂಬಿತ್ಯಾದಿಗಳಾದ ಆಶಾವಾದ ಪ್ರಬೋಧಕವಾದ ಕವಿಸೂಕ್ತಿಯಂತೆ ಈ ಲೋಕದಲ್ಲಿ ದುರ್ದೈವದ ದಬ್ಬಾಳಿಕೆಯಿಂದ ದುರ್ದೆಶೆಗಿಳಿದುಹೋದ ದೀನ ಜೀವಿಯು ಕಾಲಕ್ರಮೇಣ ಸುದೈವಾನುಗ್ರಹದ ಸಂಪ್ರಾಪ್ತಿಗೊಂಡು ದೈನ್ಯತೆಯ ದುಷ್ಕೂಪದಿಂದ ಉದ್ಧೃತನಾಗಿ ಮೇಲೆದ್ದು ಮೆರೆಯುವ ಸ್ಥಿತಿಯುಂಟಾಗುತ್ತದೆ. ಇಂಥ ಭವಿಷ್ಯದ್ಭಾಗ್ಯದ ಬರೋಣದಲ್ಲಿ ಬಲಿಷ್ಠ ಭರವಸೆಯನ್ನಿಟ್ಟುಕೊಂಡು ಈ ಆಶಾವಾದವನ್ನಾಶ್ರಯಿಸಿ ಪ್ರಾಪ್ತವಿದ್ದ ಸಂತ್ರಾಸದ ಸ್ಥಿತಿಯಲ್ಲಿ ಸಹನೆಯಿಂದಿರುತ್ತಾ ಉಲ್ಲಾಸಾನ್ವಿತವಾಗಿರುವುದು ವಿಚಾರವಾದಿಗೆ ವಿಹಿತವು. ಕಷ್ಟ ಬಂತೆಂದು ಕಳವಳಿಸದೆ ಉಲ್ಲಾಸವನ್ನು ಉಳಿಸಿಕೊಳ್ಳುವ ವಸಂತಪುತ್ರನಿಗೆ ಈ ಪ್ರಪಂಚ ಜೀವನ ಕ್ಷೇತ್ರದಲ್ಲಿ ಆನಂದರಸ್ಯ ಫಲಪ್ರಾಪ್ತಿಯಾದೀತೇ ವಿನಹ ಕಷ್ಟ ಬಂತೆಂದು ಕಳವಳಪಟ್ಟು ಉಲ್ಲಾಸ ಅಳಿಸಿಕೊಳ್ಳುವ ಶಿಶಿರಪುತ್ರನಿಗೆ ಆ ಫಲ ಸಿಗದು. ಬೇಸಗೆಯ ಬಿಸಿಯಿಂದ ಬರಡಾಗಿ ಹೋದ ಬಂಜರು ಭೂಮಿಯಲ್ಲಿ ಬಿದ್ದುಹೋದೆನಲ್ಲ ಎಂಬ ಬೇಸರವನ್ನು ಅಂತುಕೊಳ್ಳದೆ, ಯಾವುದೊಂದು ಬೀಜವು ತಾನು ಕಸು ಅಳಿಯದೆ ಉಲ್ಲಾಸದಿಂದಲೇ ಉಳಿದುಕೊಳ್ಳುವುದೋ ಆ ಬೀಜವು ಮುಂದೆ ಬರುವ ಮಳೆಗಾಲವೆಂಬ ಸುದೈವ ಸಂಯೋಗದಲ್ಲಿ ಮೈತುಂಬಿ ಮೊಳಕೆಯೊಡೆದು ಸಸಿಯಾಗಿಯೇ ತೀರುವುದು. ಆದುದರಿಂದ

ದೈವಾನುಕೂಲದ ಭವಿಷ್ಯದಾಗಮನವನ್ನು ವಿಶ್ವಸಿಸಿ ವರ್ತಮಾನದಲ್ಲಿ ಉಲ್ಲಾಸಾನ್ವಿತ ಪೌರುಷದಲ್ಲಿರೋಣ ಎಂಬ ವಿಚಾರವೇ ಮುಖ್ಯವು. ಇದು ಏಕಚಕ್ರದಲ್ಲಿ ಪ್ರಚ್ಛನ್ನ ವೇಷಧಾರಿಗಳಾಗಿ ಬಡತನದಲ್ಲಿರುತ್ತಿದ್ದ ಪಾಂಡವರು ಪಾಂಚಾಲನಗರದಲ್ಲಿ ನಿಶ್ಚಿತವಾಗಿದ್ದ ದ್ರುಪದರಾಜನ ಪುತ್ರಿಯು ವಿವಾಹ ಸಮಾಚಾರವನ್ನು ಸಂಗ್ರಹಿಸಿ ಆ ಪ್ರಯುಕ್ತವಾಗಿ ಅಲ್ಲಿಗೆ ಹೋಗುತ್ತಿದ್ದ ಮಂದಿಗಳೊಡನೆ ಕಲೆತು ತಾವು ಸಾಗುತ್ತಿರುವಾಗ ಒಬ್ಬ ಗಂಧರ್ವರಾಜನು ಮಾರ್ಗನಿರೋಧವನ್ನು ಮಾಡಿದ್ದಕ್ಕೆ ಆ ಪಾಂಡವರೊಳಗಿನ ಅರ್ಜುನನು ಆತನಿಗೆ ಉಚಿತ ಶಾಸ್ತಿಯನ್ನು ಮಾಡಿ ತತ್ಪರಿಣಾಮದಿಂದ ದ್ವೇಷಿಯಾಗಿದ್ದ ಆ ಗಂಧರ್ವನನ್ನು ಮಿತ್ರನನ್ನಾಗಿ ಪರಿವರ್ತಿಸಿಕೊಂಡು ಅವನಿಂದ ಅನೇಕ ಬಹುಮಾನಗಳನ್ನು ಪಡೆದು ಉಪಚರಿಸಲ್ಪಟ್ಟು ತದನಂತರ ವಿವಾಹಮಂದಿರದಲ್ಲಿ ವಧೂಪ್ರಾಪ್ತ್ಯರ್ಥವಾದ ಪಣವಾಗಿ ವ್ಯವಸ್ಥಿತವಿದ್ದ ಮತ್ಸ್ಯಯಂತ್ರವನ್ನು ಅರ್ಜುನನು ಭೇದಿಸಿ, ಆ ವೇಳೆಯಲ್ಲಿ ಸಂಗ್ರಹೀತ ವಧೂಸಹಿತನಾದ ಅರ್ಜುನನ ನಿಜ ಸ್ವರೂಪ ಪ್ರಕಟವಾಗದಿದ್ದ ನಿಮಿತ್ತದಿಂದ ಸಭೆಯಲ್ಲುಂಟಾದ ಗಲಭೆಯನ್ನು ಭೀಮನು ನಿಲ್ಲಿಸಿ ದ್ರುಪದ ರಾಜನು ಮಾಡಿದ ಪತ್ತೆಯು ಸಾಧನೆಯಿಂದ ಕ್ರಮೇಣ ಆ ಪಾಂಡವರು ಪ್ರಕಟವಾಗಿ ಕುಂತಿದೇವಿಯು ಅರ್ಜುನನಿಗಿತ್ತ ಆಶೀರ್ವಾದವು ನಿರರ್ಥಕವಾಗಬಾರದೆಂಬ ನ್ಯಾಯ ಪಾಲನೆಗಾಗಿ ಶ್ರೀವೇದವ್ಯಾಸ ಶ್ರೀಕೃಷ್ಣಾದಿಗಳ ಧರ್ಮವಿಮರ್ಶಾಪೂರ್ವಕವಾದ ಸಮ್ಮತಿ ಪಡೆದು ಪಾಂಡವರೆಂಬ ಐದು ಮಂದಿಗಳಿಗೆ ಆ ದ್ರೌಪದಿಯು ಸತಿಯೆಂದು ನಿಯುಕ್ತಳಾಗಿ ವಿಜೃಂಭಣೆಯಿಂದ ವಿವಾಹವಾಗಿ ಅಲ್ಲಿಂದ ಆ ಪಾಂಡವರು ತಾಯಿ ಮತ್ತು ಹೆಂಡತಿಯಿಂದ ಕೂಡಿ ಹಸ್ತಿನಾವತಿಗೆ ಕರೆತರಲ್ಪಟ್ಟು ಸುಸಂಭ್ರಮದಿಂದ ಸ್ವಾಗತಿಸಲ್ಪಟ್ಟದ್ದರಿಂದ ಅವರು ತಮ್ಮ ದಾರಿದ್ರ್ಯ ದುಸ್ಥಿತಿಯಿಂದ ವಿಮುಕ್ತರಾಗಿ ಸೌಭಾಗ್ಯ ಸಂಪನ್ನರಾದರು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೨೨ ಮಾಗಧವಧಾ ಪ್ರಸಂಗ

ಧನ ಜನ ಬಲ ಛಲೇತ್ಯಾದಿಗಳಿಂದ ಅನುಭವ್ಯವಾಗುವ ಈ

ಲೋಕಜೀವನ ವಿಲಾಸವೈಭವವು, ಹರ್ಷದಾಯಕತ್ವದಲ್ಲಿ 'ಮಾಯ ಮಂಜಿನ ಪುಂಜಿ, — ಇಂದ್ರಧನು — ವಿದ್ಯುಲ್ಲೇಖೆ' ಇತ್ಯಾದಿ ಗಳಾದ ಕವಿವರ್ಣನೆಯಂತೆ, ಬರೇ ಕಿಂಚಿತ್ಕಾಲಿಕವಾಗಿರುವುದು. ಬರೇ ದೈಹಿಕ ಸುಖಸಾಧಕಗಳಾಗಬಹುದಾದ ಬಾಹ್ಯ ಸ್ಪರ್ಶ ಭೋಗ್ಯವಸ್ತುಗಳು, 'ಆದ್ಯಂತವಂತಾಃ' ಎಂಬಂತೆ, ಸ್ವಲ್ಪ ಮಾತ್ರ ಕಾಲಾವಧಿಯ ಪರಿಮಿತಿಯುಳ್ಳವುಗಳಾದುದರಿಂದ, ಅವುಗಳನ್ನೇ ನಂಬಿ ನೆಚ್ಚಿಕೊಳ್ಳುವುದರಿಂದ ಯಾವನಿಗೂ ತನ್ನ ನಿಜ ಶುಭವನ್ನು ಪಡೆಯುವುದು ಅಸಾಧ್ಯವು. ಆದುದರಿಂದ ಬರೇ ಸ್ಥೂಲಾವ ಲೋಕನಶೀಲರಾದ ಮಂದರು ಮಾತ್ರ ಅಂಥ ಲೌಕಿಕ ಸಂಪತ್ ಸಂಗ್ರಹದಿಂದ ಸ್ವಕೀಯ ಸುಖಸಿದ್ಧಿ ಎಂದು ಎಣಿಸುವರು. ಆದರೆ ಸೂಕ್ಷ್ಮಾವಲೋಕನ ಶೀಲದಿಂದ ನಿಜ ರಹಸ್ಯ ಸಂಗ್ರಾಹಕರಾದ ಸದ್ವಿ ಚಾರಸಂಪನ್ನರು, ಅಂಥ ಲೌಕಿಕಸಂಪತ್ತನ್ನೇ ನೆಚ್ಚಿಕೊಳ್ಳುವುದಿಲ್ಲ. ಲೋಕಸಂಪತ್ತನ್ನೇ ಸಂಲಕ್ಷಿಸಿ, ಭೋಗವಿಲಾಸೈಕ ಜೀವನಪಾಕ್ಷಿಕ ಪದ್ಧತಿಯಿಂದ, ದರ್ಪ—ಅಹಂಕಾರಾದಿ ಗುಣಗಳು ಹುಟ್ಟಿಕೊಳ್ಳು ವುವು. ಆ ದುರ್ಗುಣಗಳೇ ಪರಪೀಡೆಯ ಪಾಪಕರ್ಮವನ್ನು ಪ್ರಚೋದಿಸುವುವು; ಆ ಪಾಪಕರ್ಮವೇ ಪರಿಣಾಮದಲ್ಲಿ ಕ್ಲೇಶ ತ್ರಾಸಾದಿಗಳ ಅನುಭವದ ದುಃಸ್ಥಿತಿಯ ದುಷ್ಕೂಪಕ್ಕೆ ದೂಡಿಬಿಡು ವುದು. ಇದು ನಾರದಮುನಿಯ ಉಪದೇಶದ ಮೇರೆಗೆ ರಾಜಸೂಯ ಎಂಬ ಯಜ್ಞವನ್ನು ಸಂಕಲ್ಪಿಸಿದ ಪಾಂಡವರ ಕರೆಯನ್ನನುಸರಿಸಿ ಅಲ್ಲಿಗೆ ಬಂದ ಶ್ರೀಕೃಷ್ಣನು, ಆ ಯಜ್ಞ ನಿರ್ವಹಣಕ್ಕೆ ಪೂರ್ವ ಭಾವಿಯಾಗಿ ಮಾಗಧ (ಜರಾಸಂಧ) ನೆಂಬವನ ವಧೆಯ ಅವಶ್ಯಕತೆ ಯನ್ನು ನಿರೂಪಿಸಿ, ಭೀಮಾರ್ಜುನರನ್ನು ಸಂಗಡ ಕರೆದುಕೊಂಡು ಆ ಮಾಗಧನ ಗಿರಿವ್ರಜವೆಂಬ ಪುರವನ್ನು ಪ್ರವೇಶಿಸಿ, ಅಲ್ಲಿ ಕಪಟ ವೇಷಧಾರಣೆ—ಅಪರದ್ವಾರ ಪ್ರವೇಶ—ಮಾಗಧ ಸಮಕ್ಷಮ ತದ್ವಧಾ ವೃತ್ತಾಂತ ನಿರೂಪಣಾರ್ಥ ಧ್ವನಿಗರ್ಭಿತ ಯುಕ್ತಿ ವಚನ ರಚನ ಕೌಶ್ಯಲಾತ್ ಸಂಭಾಷಣಾ—ಮುಂತಾದ ಕೆಲವು ತಂತ್ರಗಳನ್ನು ಪ್ರಯೋಗಿಸಿ, ಕೊನೆಗೆ ಆ ಮಾಗಧನ ಪ್ರತಿಯಾಗಿ ಭೀಮನಿಂದ

ಯುದ್ಧಮಾಡಿಸಿ, ಮಾಗಧನಿಗೆ ಮರಣವನ್ನುಂಟುಮಾಡಿದನು ಎಂಬ ಈ ಕಥೆಯಿಂದ ಸಿಗುವ ಬೋಧಾಂಶವು.

೨೩ ರಾಜಸೂಯ ಪ್ರಸಂಗ

ಧರ್ಮ—ಅರ್ಥ—ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಅರ್ಥ ಕಾಮಗಳು ನಮ್ಮ ಐಹಿಕ ಜೀವನ ಸಂಬಂಧಿಗಳು. ಈ ಅರ್ಥ ಕಾಮಗಳು ಧರ್ಮವನ್ನು ಹೊಂದಿ ಕೊಂಡಿರಬೇಕಾದುದು ಮುಖ್ಯ ನ್ಯಾಯವು. ಅರ್ಥವು ಸ್ವಪೋಷಣೆಗೆ ಅವಶ್ಯಕವಾದರೂ, ಕೇವಲ ಸ್ವಪೋಷಣೈಕನ್ಯಾಯದಿಂದ ಆಗುವ ಅರ್ಥಸಾಧನೆಯು, ಸ್ವಾರ್ಥಲಾಲಸೆಯು ಧರ್ಮವಿಭಿನ್ನವಾದ ದುರ್ವ್ಯವಹಾರವಾದೀತು. ಧರ್ಮವು ದೇವರಾದರೆ, ಅರ್ಥವು ದೇವರ ಸಂಗಾತಿನಿಯಾಗಿರುವ ಸತಿಯೆಂದು ಕಲ್ಪಿಸೀಯುವಾಗಿ, 'ಲಕ್ಷ್ಮೀ' ಎಂಬ ನಾಮಸಂಕೇತದಿಂದ ಸಂಬೋಧ್ಯವು. ಸರ್ವವ್ಯಾಪನೆಯುಳ್ಳ ದೇವರ ಹೆಂಡತಿಯನ್ನು ಸಾರ್ವತ್ರಿಕ ಹಿತಸಂಯೋಜನಾರ್ಥವಾಗಿ ಸಾಧಿಸುವುದೇ ನ್ಯಾಯಸಮ್ಮತವು. ಸಾರ್ವತ್ರಿಕ ಹಿತಸಂಯೋಜನಾ ನ್ಯಾಯವೇ ಧರ್ಮವು. ಆದುದರಿಂದ, ಧರ್ಮವನ್ನು ಆಶ್ರಯಿಸಿಕೊಂಡೇ ಅರ್ಥವನ್ನು ಸಾಧಿಸಬೇಕಾದುದು ಸುವಿವೇಕಕ್ಕೆ ಸಮ್ಮತವು. ವಿತ್ತರೂಪದ ಅರ್ಥಕ್ಕೆ, ಧರ್ಮ, ಅಗ್ನಿ, ನೃಪ ಮತ್ತು ತಸ್ಕರರೆಂಬ ಭಾಗಿನೇಯ ದಾಯಾದರು ಇರುತ್ತಾರೆಂದೂ, ಅವರಲ್ಲಿ ಪ್ರಥಮ ಗಣ್ಯವಾಗಿರುವ ಧರ್ಮವೇ ಆ ಅರ್ಥಕ್ಕೆ ಹಕ್ಕುದಾರ ನೆಂದೂ, ಅವನ ಹಕ್ಕು ತಪ್ಪಿಹೋದರೆ, ಮಿಕ್ಕುಳಿದ ಮೂರು ಮಂದಿಗಳ ವಿಕೋಪ ವಿಪ್ಲವದಿಂದ ಅರ್ಥದಿಂದ ಅನಾಹುತವಾಗುವು ದೆಂದೂ, ನೀತಿಶಾಸ್ತ್ರಜ್ಞರ ಅರ್ಥವಿಷಯಕವಾದ ಉಪದೇಶಸೂಕ್ತಿ ಇದೆ. ಅಂತು ಸ್ವಪೋಷಣಾಮಾತ್ರದ ಸಂಕುಚಿತ ಭಾವವಿಲ್ಲದೆ, ಸಾರ್ವತ್ರಿಕ ಧಾರಣೆ ಪೋಷಣೆಯಾಗಬೇಕೆಂಬ ಸದುದ್ದೇಶಸಂಪೂರಿತ ವಾದ ವಿಶಾಲ ಭಾವದಿಂದ, ಸಂದರ್ಭೋಚಿತವಾದ ಯಥಾ ಸಾಧ್ಯ ವಾದ ಪೌರುಷದಿಂದ ಅರ್ಥಸಾಧನೆಮಾಡುವ ನ್ಯಾಯಶೀಲನು ದೈವಾನುಗ್ರಹಸಂಪನ್ನನಾಗಿ ಜಯಶಾಲಿಯಾಗುವನು. ಈ ವಿಷ

ಯವು, ಇಂದ್ರಪ್ರಸ್ತದಲ್ಲಿರುತ್ತಿದ್ದ ಪಾಂಡವರು, ನಾರದರ ಉಪದೇಶ- ಶ್ರೀಕೃಷ್ಣನ ಸಹಾಯ-ಇವುಗಳನ್ನವಲಂಬಿಸಿ, ಪರಾಕ್ರಮವನ್ನು ಪ್ರಯೋಗಿಸಿ, ಅನೇಕ ಅರಸುಗಳಿಂದ ಕಪ್ಪವನ್ನು ಸೆಳೆದು ತಂದು, ಸ್ನೇಹಸೌಜನ್ಯವನ್ನು ಪ್ರಯೋಗಿಸಿ ಅನೇಕ ಅರಸುಗಳಿಂದ ಸಂಪತ್ತನ್ನು ಒಲುಮೆಯಿಂದ ತಂದು, ಆ ರೀತಿಯಿಂದ ಸಾಧಿತವಾದ ಸಂಪತ್ತನ್ನು ಸ್ವಪೋಷಣೆಗಾಗಿ ವಿನಿಯೋಗವಮಾಡದೆ, ಅನ್ನದಾನ-ಭೂದಾನ- ಗೋದಾನ-ಸುವರ್ಣದಾನ ಇತ್ಯಾದ್ಯನೇಕವಾದ ದಾನಪದ್ಧತಿಯೊಳ ಗೊಂಡ ರಾಜಸೂಯವೆಂಬ ಯಜ್ಞವನ್ನು ಮಾಡಿ ಭೀಷ್ಮ, ದ್ರೋಣ, ಕೃಪ, ವಿದುರರೇ ಮೊದಲಾದ ತಮ್ಮ ಗುರುಹಿರಿಯರು ಮೆಚ್ಚು ವಂತೆಯೂ ದುರ್ಯೋಧನ, ತತ್ಸಹೋದರವರ್ಗ, ಕರ್ಣ, ಶಕುನಿ ಗಳೇ ಮೊದಲಾದ ತಮ್ಮ ಅಹಿತಕಾಂಕ್ಷಿಗಳಾದ ಮತ್ಸರಿಗಳ ಮನ ಬೆರಗಾಗುವಂತೆಯೂ ಸಮಸ್ತ ಜನಸಮ್ಮೋದ ಸಮುದ್ಭವವಾಗು ವಂತೆಯೂ ಗತಪಿತೃಗಳಿಗೆ ಸ್ವರ್ಗದಲ್ಲಿ ಸಂತೃಪ್ತಿಯಾಗುವಂತೆಯೂ ಬಹುವಿಜೃಂಭಣೆಯನ್ನು ನಡೆಸಿ, ಕೊನೆಯಲ್ಲಿ ಶ್ರೀಕೃಷ್ಣನಿಗೆ ಅಗ್ರ ಪೂಜೆಯನ್ನು ಸಲಿಸಿ ಕೀರ್ತಿಶಾಲಿಗಳಾದರು ಎಂಬೀಕಥೆಯಿಂದ ಸಿಗುವ ಬೋಧಾಂಶವು.

ಪ್ರತ್ಯಕ್ಷದಿಂದಲೋ, ಅನುಮಾನದಿಂದಲೋ, ಆಪ್ತವಾಕ್ಯ ದಿಂದಲೋ, ವಿಚಾರವಾದಿಯಾಗಿರುವವನು ಸದ್ಗುಣ ಸಂಪನ್ನ ಮಹಾಪುರುಷರ ಗುರುತನ್ನು ಗೊತ್ತುಹಿಡಿದು, ಅಂಥವರನ್ನು ಗೌರವಿಸಿಯೊ ಸತ್ಕರಿಸಿಯೊ ಪುರಸ್ಕರಿಸಿಯೊ ಆಶ್ರಯಿಸಿಯೊ ಅನುಕರಿಸಿಯೊ ತನ್ನ ಮೇಲ್ಮೆಯನ್ನು ಸಾಧಿಸಿಕೊಳ್ಳುವನು. ಇದಕ್ಕೆ ವಿರುದ್ಧವಾಗಿ ಪ್ರಮಾಣತ್ರಯದಿಂದಲೂ ಸಿದ್ಧಾಂತವಮಾಡ ಲ್ಪಟ್ಟ ಮಹಾತ್ಮ್ಯೆಯುಳ್ಳ ಸದ್ಗುಣಿಯನ್ನು ಕೇವಲ ಮೂರ್ಖಸ್ವಭಾ ವಜನ್ಯವಾದ ದುರಾಗ್ರಹದಿಂದ ನಿಂದಿಸಿ, ಜರೆದು, ತಿರಸ್ಕರಿಸಿ, ಸ್ವಪ್ರ ತಿಷ್ಠೆಗಾಗಿ ವಿರೋಧಿಸುವ ದುಷ್ಟನು ಕೀಳ್ಮೆಯನ್ನು ಸಾಧಿಸುತ್ತಾನೆ. ಇದು ಭೀಷ್ಮೋಪದೇಶವನ್ನು ಒಪ್ಪದೆ, ಬುದ್ಧಿಬಲ ಪ್ರಯೋಗದ ತರ್ಕಕ್ಕೂ ಸಮ್ಮತಿಸದೆ, ಪ್ರತ್ಯಕ್ಷ ಪರಾಮರ್ಶೆಗೂ ಸಹನೆ ಇಲ್ಲದೆ,

ಶಿಶುಪಾಲ ದಂತವಕ್ತ್ರರೆಂಬ ರಾಕ್ಷಸರಾಜರು ಶ್ರೀಕೃಷ್ಣನನ್ನು ಜರೆದು ನಿಂದಿಸಿ, ತತ್ಫಲವಾಗಿ ಸಮಸ್ತ ಜನಸಂತೋಷದ ಸುಯಜ್ಞದ ಸಮಾಪ್ತಿಸಮಯದಲ್ಲಿ ತಾವು ಮಾತ್ರ ಶ್ರೀಕೃಷ್ಣನಿಂದ ನೋವನ್ನೂ ಸಾವನ್ನೂ ಪಡೆಯುವಂತಾಯಿತು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೨೪ ದ್ರೌಪದಿ ವಸ್ತ್ರಾಪಹರಣ ಪ್ರಸಂಗ

"ಧರ್ಮ" ಎಂಬುದರ ಇತಿಸ್ವರೂಪವನ್ನು ನಿರ್ಣಯಮಾಡುವುದು ಕೆಲವು ಸಂದರ್ಭಗಳಲ್ಲಿ ಮಹಾಮೇಧಾವಿಯ ಬಲಿಷ್ಠಬುದ್ಧಿ ಬಲಪ್ರಯೋಗದಿಂದಲೂ ಅಸಾಧ್ಯವಾಗಬಹುದು. ಆಚಾರರೂಪದ ಧರ್ಮವು ಅನೇಕವಾಗಿರುತ್ತಾ, ಅಂಥ ಅನುಷ್ಠನೀಯವಾದ ಧರ್ಮವು ಸರ್ವರಿಗೂ ನಿರ್ಣಯಾತ್ಮಕ ರೀತಿಯಿಂದ ಗ್ರಾಹ್ಯವಾಗುವುದಿಲ್ಲ ಧರ್ಮಜ್ಞಾನ ಸಂಗ್ರಹಕ್ಕೆ ಆಧಾರಪ್ರಬೋಧಕಗಳಾಗಿ, "ವೇದಸ್ಮೃತಿ ಸದಾಚಾರ: ಸ್ವಸ್ಯ ಚ ಪ್ರಿಯಮಾತ್ಮನಃ। ಏತತ್ ಚತುರ್ವಿಧಂ ಪ್ರಾಹುಃ ಸಾಕ್ಷಾತ್ ಧರ್ಮಸ್ಯ ಲಕ್ಷಣಮ್॥" ಎಂದೋ "ಧಾರಣಾದ್ಧರ್ಮ ಇತ್ಯಾಹುಃ ಧರ್ಮೋಧಾರಯತೇ ಪ್ರಜಾಃ। ಯಃ ಸ್ಯಾತ್ ಧಾರಣಸಂಯುಕ್ತಃ ಸಧರ್ಮ ಇತ್ಯುಚ್ಯೆತೇ॥" ಎಂದೊ "ಚೋದನಾ ಲಕ್ಷಣೋರ್ಥೋ ಧರ್ಮಃ" ಎಂದೊ, ಮತ್ತಿನ್ನಿಂಥ ಅನೇಕ ಆಪ್ತ ವಾಕ್ಯಗಳು ವಿಚಾರ್ಯಗಳಾಗಬಹುದು. ಆದರೂ ಇಂಥ ಆಪ್ತವಾಕ್ಯ ರೂಪೀ ಶಬ್ದಪ್ರಮಾಣದಿಂದ ಧರ್ಮಸ್ವರೂಪದ ಸಿದ್ಧಾಂತವಾಗುವುದು ಸಮಸ್ತ ಸಂದರ್ಭಗಳಲ್ಲಿಯೂ ಸಾಧ್ಯವೆಂದು ನಂಬಲಾಗದು. ಶುಭ ಕರ್ಮವನ್ನೇ ಧರ್ಮವೆಂದು ಸುಲಭವಾಗಿ ಹೇಳಬಹುದಾದರೂ ಆ ಶುಭಕರ್ಮವು ಯಾವುದೆಂಬ ಜಿಜ್ಞಾಸೆಯೇ ಕೆಲವು ಸಂದರ್ಭದಲ್ಲಿ ಬರುವುದುಂಟು. ಏವಂಚ, ಬುದ್ಧಿಬಲದ ತರ್ಕವು ಧರ್ಮ ಜ್ಞಾನ ಸಂಗ್ರಹಕ್ಕೆ ಆವಶ್ಯಕ ಉಪಾಯವಾದರೂ 'ತರ್ಕೋಽಪ್ರತಿಷ್ಠ' ಎಂಬಂತೆ, ಬರೀ ಬುದ್ಧಿಬಲದ ತರ್ಕವನ್ನಾಶ್ರಯಿಸಿಯೇ ಧರ್ಮ ಜ್ಞಾನ ಪ್ರಾಪ್ತಿಯಾಗುವುದು ಸಮಸ್ತ ಸಂದರ್ಭದಲ್ಲಿ ಸಾಧ್ಯವಿಲ್ಲ ಅಂತು ಈ ಕರ್ಮ ಪ್ರಪಂಚದಲ್ಲಿ ಶ್ರೇಯಸ್ಸಾಧನ ವಿಚಾರವಾದಿಗೆ ಅನು

ಭವ್ಯವಾಗುವ ದೊಡ್ಡದೊಂದು ಕಷ್ಟವೆಂದರೆ ಧರ್ಮಜಿಜ್ಞಾಸೆಯೇ ಸರಿ. ಹಾಗಾದರೆ ಇದಕ್ಕೆ ಸಮಾಧಾನ ಹೇಗೆ? ಧರ್ಮಸಂಕಟ ಪರಿಹಾರಕ್ಕೆ ಭಗವದ್ಭಕ್ತಿಯೇ ಉಚಿತ ಉಪಾಯವು. ತನಗಿರುವ ಸಂಪತ್ತು, ವಿದ್ಯಾ, ಬುದ್ಧಿ, ಬಂಧುಜನ, ಪರಿವಾರ, ತ್ರಾಣ, ಸ್ಥಾನ, ಮಾನ—ಇಂಥವುಗಳಲ್ಲಿ ಯಥೋಚಿತವಾದ ವಿಶ್ವಾಸವಿದ್ದರೂ ತನಗೆ ಭಗವದನುಗ್ರಹವೇ ಮುಖ್ಯವೆಂಬ ವಿಚಾರದಿಂದ ಭಗವದ್ಭಕ್ತಿಯನ್ನು ಸಾಧಿಸಿಕೊಳ್ಳಬೇಕಾದುದೇ ತಾರಣೋಪಾಯವು. ಇದು ಹಸ್ತಿನಾವತಿಯ ಕೌರವನು, ಇಂದ್ರಪ್ರಸ್ಥದ ಪಾಂಡವರನ್ನು ಶಕುನಿಯ ಸಲಹೆಯಂತೆ ತನ್ನಲ್ಲಿಗೆ ಕರೆಸಿ, ಅವರಿಂದ ದ್ಯೂತವನ್ನಾಡಿಸಿ, ಆ ದ್ಯೂತದಲ್ಲಿ ಅವರನ್ನು ಸೋಲಿಸಿ, ಅವರು ತಮ್ಮ ಪತ್ನಿಯಾದ ದ್ರೌಪದಿಯ ಮೇಲಿನ ಅಧಿಕಾರವನ್ನೂ ಕಳಕೊಂಬಂತೆ ಮಾಡಿ, ತಾನು ಆ ದ್ರೌಪದಿಗೆ ಅಪಮಾನ ಮಾಡಬೇಕೆಂದು ಆಕೆಯ ಸೀರೆಯನ್ನು ದುಶ್ಶಾಸನನಿಂದ ಅಪಹರಣಮಾಡಿದಾಗ, ಆ ದ್ರೌಪದಿಗೆ ಆಕೆಯ ಧರ್ಮವಿಷಯಕ ಪ್ರಶ್ನೆಗೆ ಉತ್ತರ ಕೊಡುವ ಪ್ರಾಜ್ಞರಾದ ಯಾರ ಆಶ್ರಯವೂ ಸಿಗದೆ ಹೋದಾಗ, ತನ್ನ ಮಾನಸಂರಕ್ಷಣೆಗೆ ಈ ಪ್ರತ್ಯಕ್ಷ ಪ್ರಪಂಚದಲ್ಲಿ ಯಾರ ಸಹಾಯವೂ ಸಿಗದೆಂಬ ಸ್ವಾನುಭವವು ಅವಳಿಗೆ ದೊರೆತು, ಕೊನೆಗೆ, ಭಗವದ್ಭಕ್ತಿಯನ್ನಾಶ್ರಯಿಸಿ, ತತ್ಫಲದಿಂದ ಭಗವದನುಗ್ರಹದತ್ತವಾದ ಅಕ್ಷಯಾಂಬರದಿಂದ ಅಚ್ಛೇದ್ಯ ಮಾನವತಿಯಾಗಿ ಮೆರೆದಳು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೨೫ ಇಂದ್ರಕೀಲಕ ಪ್ರಸಂಗ

ನಿಘರ್ಷಣ, ಛೇದನ, ತಾಪ, ತಾಡನಗಳಿಂದ ಅಕ್ಕಸಾಲಿಗನು ಭಂಗಾರವನ್ನು ಸರಿಯಾದ ಹದಕ್ಕೆ ತಂದು ಅದನ್ನು ಆಭರಣವನ್ನಾಗಿ ಮಾಡಿ ಸಾರ್ಥಕಗೊಳಿಸುವನು. ಹಾಗೆಯೇ ಭಂಗಬವಣೆಗಳನ್ನಿತ್ತು ಭಗವಂತನು ಭಕ್ತನನ್ನು ಸರಿಯಾದ ಹದಕ್ಕೆ ತಂದು, ಅವನನ್ನು ತನ್ನ ಅನುಗ್ರಹಕ್ಕೆ ಅರ್ಹನನ್ನಾಗಿ ಮಾಡಿ, ಅವನ ಉತ್ತಮ ಗುಣಕ್ಕೆ ಉಚಿತವಾದ ಮಹಾಪದವಿಯಲ್ಲಿ ಇರಿಸುವನು. ಆದುದರಿಂದ ಭಗವದ್ಭಕ್ತಿಯನ್ನಾಶ್ರಯಿಸಿರುವ ಸತ್ಕರ್ಮ ಸಾಧಕನು ತನಗೊದಗಬಹು

ದಾದ ಅಡ್ಡಿ ವಿಡ್ಡೂರಗಳನ್ನು ಅವು ಭಗವದನುಗ್ರಹದ ಭವಿಷ್ಯತ್ಪ್ರಾಪ್ತಿಯ ಪೂರ್ವಭಾವೀ ಭಗವತ್ತಂತ್ರವೇ ಸರಿ ಎಂಬ ಸಮಾಧಾನದಿಂದ ಸಹಿಸಿಕೊಂಡು ತನ್ನ ಸತ್ಸಾಧನೆಯಲ್ಲಿ ಮನೋಧೈರ್ಯದಿಂದ ಮುಂಬರಿಯಬೇಕಾದುದೇ ವಿಹಿತವು. ಇದು ವನವಾಸದೀಕ್ಷೆಯಲ್ಲಿದ್ದ ಪಾಂಡವರಲ್ಲಿ ಅರ್ಜುನನು ವೇದವ್ಯಾಸಾಜ್ಞೆಯಂತೆ ಇಂದ್ರಕೀಲವೆಂಬ ಪ್ರದೇಶದಲ್ಲಿ ತಪಸ್ಸನ್ನು ಸಾಧಿಸುತ್ತಾ ಆ ಸಂದರ್ಭದಲ್ಲಿ ಸಂಪ್ರಾಪ್ತವಾದ ಚಳಿ, ಮಳೆ, ಗಾಳಿಗಳೇ ಮೊದಲಾದ ಸಕಲವಿಧ ಸಂಕಷ್ಟಗಳನ್ನು ಸಹಿಸಿಕೊಂಡಿದ್ದನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

ತಾತ್ವಿಕ ವಿಚಾರದೃಷ್ಟಿಯಿಂದ ನಿಷ್ಕ್ರಿಯನೆಂದು ಗ್ರಹಿಸಲ್ಪಡುವ ದೇವನನ್ನು ವ್ಯಾವಹಾರಿಕ ವಿಚಾರದೃಷ್ಟಿಯಿಂದ ಸಕ್ರಿಯನೆಂದು ಪರಿಗ್ರಹಿಸಿ ಆ ಸಕ್ರಿಯನಾಗಿರುವ ದೇವನ ಕ್ರಿಯೆಗೆ ನಿದರ್ಶನಗಳಾಗಿ ಸೃಷ್ಟಿ, ಸ್ಥಿತಿ, ಲಯ, ತಿರೋಭಾವ ಮತ್ತು ಅನುಗ್ರಹಗಳೆಂಬ ಪಂಚ ಪ್ರಕಾರಗಳು ಹೇಳಲ್ಪಡುತ್ತವೆ. ಈ ಪಂಚ ಪ್ರಕಾರಗಳಲ್ಲಿ ಅನುಗ್ರಹವೆಂಬ ಕೊನೆಯ ಕ್ರಿಯಾ ಪ್ರಕಾರವು ಮನುಷ್ಯ ಪ್ರಪಂಚಕ್ಕೆ ವಿಸ್ಮಯವನ್ನು ಹುಟ್ಟಿಸುವಷ್ಟು ವಿಚಿತ್ರವಾದದ್ದು. ಇದು ಅರ್ಜುನನ ತಪಸ್ಸಿಗೆ ಮೆಚ್ಚಿ ಅವನಿಗೆ ಅನುಗ್ರಹಮಾಡಬೇಕೆಂದು ಪರಮೇಶ್ವರನು ಪಾರ್ವತೀ ಸಹಿತನಾಗಿ ಕಿರಾತವೇಷಧಾರಣದ ಕಾಪಟ್ಯವನ್ನು ಕೈಗೊಂಡು ಅವನಿದ್ದಲ್ಲಿಗೆ ಬಂದು ಯಃಕಶ್ಚಿತ್ ಸೂಕರವಧಾ ವ್ಯವಹಾರದಿಂದ ಆ ಅರ್ಜುನನನ್ನು ಯುದ್ಧಕ್ಕೆ ಕೆಣಕಿ ಅವನನ್ನು ಪ್ರತಿಭಟಿಸಿ, ಅವನನ್ನು ಸೋಲಿಸಿ ವಿಗತಾಸ್ತ್ರನನ್ನಾಗಿಯೂ ಅಪಹೃತ ಶಾರೀರಿಕ ಬಲದಿಂದ ನಿತ್ರಾಣಿಯನ್ನಾಗಿಯೂ ಮಾಡಿ ದೀನಾವಸ್ಥೆಗೆ ಇಳಿಸಿದನು ಎಂಬ ಈ ಕಥೆಯಿಂದ ಸಿಗುವ ಬೋಧಾಂಶವು.

ಯುದ್ಧೋದ್ಯೋಗದಲ್ಲಾದರೂ ಪ್ರತಿಪಕ್ಷ ಪ್ರಘಾತಾರ್ಥವಾದ ಪ್ರತಿಭಟನ ಯುಕ್ತಿಗೆ ಅಸ್ತ್ರ ಶಸ್ತ್ರ ಸಂಗ್ರಹಣವೇ ಮೊದಲಾದ ಬಾಹ್ಯ ಬಲ ಸಂಯುಕ್ತತೆಗಿಂತಲೂ ಭಗವದ್ಭಕ್ತಿ ಸಾಧನ ರೀತ್ಯಾ

ಬರುವ ಅಂತರಂಗ ಬಲ ಸಂಯುಕ್ತತೆಯೇ ಮುಖ್ಯವು. ಇದು ಕಿರಾತರೂಪೀ ಕಪರ್ದಿಯನ್ನು ಕಾಳಗದಲ್ಲಿ ಗೆಲಲಾಗದೆ ಸೋತ ಅರ್ಜುನನು ಕೊನೆಗೆ ಶಿವಭಕ್ತಿಯನ್ನು ಸಾಧಿಸಿ ಅರ್ಥಾತ್ ಶಿವಾರ್ಚನೆಯನ್ನು ಮಾಡಿ ತತ್ಫಲವಾಗಿ ಆ ಶಿವನಿಂದ 'ಪಾಶುಪತ'ವನ್ನು ವರವನ್ನಾಗಿ ಪಡೆದು ಶಿವನ ಪತ್ನೀ ಪರಿವಾರಾದಿಗಳಿಂದಲೂ ಬೇರೆ ಬೇರೆ ವರಗಳನ್ನು ಪಡೆದು ಕೃತಾರ್ಥನಾದನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೨೬ ಚಿತ್ರಸೇನ ಕಾಳಗ ಪ್ರಸಂಗ

'ಪಾಪೀ ಪಾಪೇನ ಹನ್ಯತೇ' ಎಂಬೀಸೂಕ್ತಿಯು ಸರ್ವಥಾ ಸತ್ಯವು. ದುಷ್ಟತಂತ್ರಪ್ರಯೋಗದಿಂದ ಪರಪೀಡೆಯನ್ನು ಮಾಡುವ ಮಾತ್ಸರ್ಯ ಪೂರಿತನಾದ ಪಾಪಿಯು ಕೊನೆಗೆ ತನ್ನ ಪಾಪದ ಫಲಾವಸ್ಥೆಯಿಂದ ತಾನೇ ದುರ್ಬಂಧಕ್ಕೆ ಸೆರೆ ಸಿಲುಕಿ ಮರುಗಬೇಕಾಗುವುದು. ಆದರೆ ಪುಣ್ಯಶೀಲರಾದ ಸಾಧುಗಳು ತಮಗೆ ಅಪಕಾರ ಮಾಡಿದ ಪಾಪಿಗಳಿಗಾದರೂ ಸಂದರ್ಭೋಚಿತದ ಸದುಪಕಾರವನ್ನೇ ಮಾಡುವ ಸದ್ಭಾವನೆಯುಳ್ಳವರು. 'ಅಪಕಾರಿಷು ಯಃ ಸಾಧುಃ ಸ ಸಾಧುಃ ಸದ್ಭಿರುಚ್ಯತೇ' ಎಂಬ ಸೂಕ್ತಿಯು ಇದೇ ಅಭಿಪ್ರಾಯದ್ದು. ಇದು ಪಾಂಡವರಲ್ಲಿ ಮಾತ್ಸರ್ಯವಿದ್ದ ಕೌರವರು ಅವರಿಗೆ ಕೇಡನ್ನೆಣಿಸಿ ಘೋಷಯಾತ್ರೆಯ ನೆಪದಿಂದ ಅವರಿದ್ದ ದ್ವೈತವನಕ್ಕೆ ಬಂದು ಬಾಧಿಸಿದಾಗ ಅಲ್ಲಿ ಜಲಕೇಳಿವಿಲಾಸ ಮಗ್ನನಾಗಿರುತ್ತಿದ್ದ ಒಬ್ಬ ಗಂಧರ್ವನ ಆಘಾತಕ್ಕೆ ಬಲಿಯಾಗಿ ಅವನ ಸೆರೆಗೆ ಸಿಲುಕಿ ಮರುಗುವಾಗ ಇದನ್ನು ತಿಳಿದ ಧರ್ಮರಾಜನು ತನ್ನ ತಮ್ಮ ಅರ್ಜುನನಿಗೆ ಇತ್ತ ಉಪದೇಶದ ಮೇರೆಗೆ ಆ ಅರ್ಜುನನು ಚಿತ್ರಸೇನನನ್ನು ಪ್ರತಿಭಟಿಸಿ ಕೌರವರನ್ನು ತದ್ಬಂಧನದಿಂದ ವಿಮುಕ್ತರನ್ನಾಗಿ ಮಾಡಿದನು ಎಂಬೀಕಥೆಯಿಂದಲೂ ಕೌರವನ ಸಹಾಯಾರ್ಥ ಸೈಂಧವನು ದ್ರೌಪದಿಯನ್ನು ಅಪಹರಿಸಿದಾಗ ಅದನ್ನು ತಿಳಿದ ಭೀಮನು ಆತನನ್ನು ಹಿಡಿದು ಅವನ ಪ್ರಾಣವಧೆಯ ಬದಲಾಗಿ ಮಾನವಧೆಯನ್ನು ಮಾತ್ರ ಮಾಡಿದನು ಎಂಬ ಈ ಕಥೆಯಿಂದಲೂ ಸಿಗುವ ಬೋಧಾಂಶವು.

೨೭ ಕೀಚಕ ವಧಾ ಪ್ರಸಂಗ

ಸೌಂದರ್ಯ ದರ್ಶನದಿಂದ ಮನಾಕರ್ಷಣೆಯಾಗುವುದೇನೋ ರಸಿಕ ಮನೋವೃತ್ತಿಯುವನಿಗೆ ಸಹಜ ಸ್ವಭಾವಜನ್ಯವು. ಆದರೆ ಅಂಥ ಮನಾಕರ್ಷಣೆಯು ಸ್ವೇಂದ್ರಿಯ ಭೋಗ ಲಾಲಸಾತ್ಮಕವಾದ ಕಾಮವಿಕಾರ ಹೇತುವಾಗದಂತೆ ಬೌದ್ಧಿಕ ಜಾಗೃತಿ ಬೇಕು ಯಾಕೆಂದರೆ ಅಂಥ ಕಾಮವಿಕಾರದಿಂದ ಸ್ವಭೋಗಕ್ಕಾಗಿ ಪರಸ್ವಾಪಹರಣದ ದುಷ್ಟ ವೃತ್ತಿ ಹುಟ್ಟಿ ತದನುಸರಣೆಯಿಂದ ಪಾಪಪ್ರಕ್ರಿಯಾ ದುರ್ವ್ಯವಹಾರವು ಸಾಗಿ ತತ್ಫಲವಾಗಿ ದುಃಖ ದುರ್ಮರಣಾದಿಗಳು ಸಂಭವಿಸುವುವು. ಸೌಂದರ್ಯ ದರ್ಶನದಲ್ಲಿ ಕಲೆಯ ರಸಾಸ್ವಾದನದ ಸದ್ದೃಷ್ಟಿಯಿದ್ದರೆ ಲೇಸು; ಅದಕ್ಕೆ ವಿಪರೀತವಾಗಿ ಕಾಮಭೋಗಾಭಿಲಾಷೆಯ ದುರ್ದೃಷ್ಟಿ ಇದ್ದರೆ ಹಾನಿ. ಈ ನ್ಯಾಯವು ಸ್ತ್ರೀ ಸೌಂದರ್ಯಾವಲೋಕನದ ವಿಷಯದಲ್ಲಿ ಚೆನ್ನಾಗಿ ಅನ್ವಯಿಸುತ್ತದೆ. ಸ್ತ್ರೀ ಸೌಂದರ್ಯೇಕ್ಷಣಾತ್ ಮನಸ್ಸು ಮೋಹಾವೇಶಗ್ರಸ್ತವಾಗಿ ದುಶ್ಚಾಂಚಲ್ಯವಾಗದಂತೆ ಬುದ್ಧಿಯು ಬಲಿಷ್ಠವಾಗಿರಬೇಕು. ದೇಹವೆಂಬ ರಥಕ್ಕೆ ಇಂದ್ರಿಯಗಳೇ ಹಯಗಳಾಗಿ, ಮನಸ್ಸೇ ಕಡಿವಾಣವಾಗಿ, ಬುದ್ಧಿಯೇ ಸಾರಥಿಯಾಗಿ, ವಿಷಯಗಳೇ ಗೋಚರಗಳಾಗಿ, ಆತ್ಮನ ಪ್ರಪಂಚ ಯಾತ್ರೆ ಸಾಗುತ್ತದೆ ಎಂದು ವರ್ಣಿಸುವ ಉಪನಿಷದ್ವಾಕ್ಯದಲ್ಲಾದರೂ ಇಂದ್ರಿಯ ಸಾಕ್ಷಾತ್ತಾಗಿ ಗೋಚರವಾಗುವ ವಿಷಯದಲ್ಲಿ ಮನಸ್ಸು ಶಿಥಿಲವಾಗದಂತೆ ಬುದ್ಧಿಯು ಬಲಿಷ್ಠವಿರಬೇಕೆಂಬ ಎಚ್ಚರಿಕೆಯನ್ನು ನೀಡುವ ಉಪದೇಶವಿದೆ. ಇದು ಪಾಂಡವರು ತಮ್ಮ ಅಜ್ಞಾತವಾಸದ ಅವಧಿಯಲ್ಲಿ ಪ್ರಚ್ಛನ್ನ ವೇಷದಿಂದ ವಿರಾಟ ನಗರದಲ್ಲಿ ಮತ್ಸ್ಯಭೂಪನ ಆಶ್ರಯದಲ್ಲಿರುವಾಗ ಪಾಂಡವರ ಪತ್ನಿ ದ್ರೌಪದಿಯೂ ಮಾಲಿನಿ ಎಂಬ ಹೆಸರಿನಿಂದ ಸೈರಂಧ್ರಿಯಾಗಿ ಮತ್ಸ್ಯಭೂಪನ ರಾಣಿಯಾದ ಸುಧೇಷ್ಣಾ ದೇವಿಯ ಆಶ್ರಯದಲ್ಲಿರುತ್ತಿರುವಲ್ಲಿ ಆ ರಾಣಿಯ ಸಹೋದರನೂ ಆ ನಗರದ ಮುಖ್ಯ ಸೇನಾನಾಯಕನೂ ಆಗಿದ್ದ ಕೀಚಕನೆಂಬವನು ಸೈರಂಧ್ರಿಯನ್ನು ಕಂಡು ಆಕೆಯ ಸೌಂದರ್ಯ ದರ್ಶನದಿಂದ ತತ್ಪರ ಮೋಹವಿಕಾರಕ್ಕೆ ಒಳಪಟ್ಟು ಆಕೆಯ ಹಿತೋಪದೇಶಪೂರ್ವಕವಾದ ತಿರಸ್ಕಾರದಿಂದಲೂ

ಅತ್ಯುತ್ಕಟ ಭೋಗಾಕಾಂಕ್ಷಾಪೂರಿತವಾದ ತನ್ನ ದುಷ್ಕಾಮನೋಜ್ವಲನವನ್ನು ಉಪಶಮಿಸಿಕೊಳ್ಳಲಾಗದೆ ಯುಕ್ತಿ, ಪ್ರಯುಕ್ತಿಗಳ ವಿವಿಧ ತಂತ್ರ ಪ್ರಯೋಗಗಳನ್ನು ಮಾಡುತ್ತಾ ಆಕೆಯನ್ನು ಉಪದ್ರವಿಸುತ್ತಿದ್ದುದರಿಂದ ಕೊನೆಗೆ ಆಕೆಯ ಯುಕ್ತಿಪೂರ್ವಕವಾದ ಪ್ರೇರಣೆಯನ್ನನುಸರಿಸಿದ ಬಾಣಸಿಗನಾಗಿರುತ್ತಿದ್ದ ಭೀಮನು ವಂಚನೋಪಾಯವನ್ನಾಶ್ರಯಿಸಿ ರಾತ್ರಿವೇಳೆಯಲ್ಲಿ ಗುಪ್ತವಾಗಿ ನಾಟ್ಯಮಂದಿರದಲ್ಲಿ ಆ ಕೀಚಕನನ್ನು ಗುದ್ದಿ ಕೊಂದನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೨೮ ಉತ್ತರ ಗೋಗ್ರಹಣ ಪ್ರಸಂಗ

ಸ್ವಪ್ರಶಂಸಾ ಸಂಗ್ರಹದ ಉತ್ಕಟಾಕಾಂಕ್ಷಾ ಬದ್ಧತೆಯಿಂದ ವಾಗಾಡಂಬರವನ್ನೇ ವಿನಿಯೋಗಿಸುವ ಭಾಷಣ ಬಾಹುಲ್ಯದ ಬಡಾಯಿ ಕೊಚ್ಚಿಕೊಳ್ಳುವ ಬಾಯಿಬಲದ ಭಟರು ಕಾರ್ಯ ಸಾಧನೆಯಲ್ಲಿ ಕಸು ಇಲ್ಲದ ಟೊಳ್ಳುಗಟ್ಟಿಗಳೇ ಸರಿ. ಆದರೆ ಕಾರ್ಯಸಾಧನೆಯ ಕಸುಗೂಡಿರುವ ಸ್ವಯಂಯೋಗ್ಯತಾ ಸಂಪನ್ನರು ಆತ್ಮಪ್ರಶಂಸಾರ್ಥದ ಮಾತನ್ನಾಡುವುದಿಲ್ಲ. 'ತುಂಬಿದ ಕೊಡ ತುಳುಕದು'. ಆದುದರಿಂದ ಸೊಲ್ಲಿನ ಗುಲ್ಲಿನಿಂದ ಆತ್ಮಪ್ರಶಂಸೆ ಮಾಡಿಕೊಂಬವರು ಕಾರ್ಯರಂಗದಲ್ಲಿ ಪೌರುಷ ಶೂನ್ಯರೇ ಸರಿ ಎಂದು ತಿಳಿಯಬಹುದು. ಇದು ಪಾಂಡವರ ಪತ್ತೆಹಚ್ಚುವುದಕ್ಕಾಗಿ ಹಸ್ತಿನಾಪತಿಯ ಕೌರವಾದ್ಯರು ವಿರಾಟನಗರಕ್ಕೆ ಬಂದು ಅಲ್ಲಿಯ ಗೋವುಗಳನ್ನು ಸೆರೆಹಿಡಿದು ಹಲ್ಲೆಮಾಡಿದಾಗ ಆ ವಿಚಾರವನ್ನು ತಿಳಿದ ವಿರಾಟರಾಜ ಪುತ್ರನಾದ ಉತ್ತರನೆಂಬವನು ಆ ಕೌರವಾದ್ಯರನ್ನು ಗೆಲುವೆನೆಂದು ಆತ್ಮಪ್ರಶಂಸನಾಪೂರ್ವಕವಾದ ವೀರವಾದದ ಅಬ್ಬರದ ಬೊಬ್ಬೆಯ ಆಡಂಬರವನ್ನು ಆಡಿ ಬೃಹನ್ನಳಾ ವೇಷದಲ್ಲಿದ್ದ ಅರ್ಜುನನ ಸಾರಥ್ಯದಿಂದ ಸಮರರಂಗಕ್ಕೆ ಸಾಗುತ್ತಾ ಆ ಸಮರರಂಗದ ಸಮೀಕ್ಷಾಮಾತ್ರದಿಂದಲೇ ಹೆದರಿ, ಹಿಂಗಿ ಹಿಂದೋಡಲು ಹವಣಿಸಿದಾಗ ಅರ್ಜುನನು ಬಲವಂತಿಕೆಯಿಂದ ಆ ಉತ್ತರನನ್ನು ರಥದಲ್ಲಿ ನಿರ್ಬಂಧಿಸಿಟ್ಟುಕೊಂಡು ಗುಪ್ತವಾಗಿ ಇಡಲ್ಪಟ್ಟಿದ್ದ ತನ್ನ

ಅಸ್ತ್ರಗಳನ್ನು ಅವನಿಂದಲೇ ತರಿಸಿಕೊಂಡು, ಕೊನೆಗೆ ಅವನಿಗೆ ತನ್ನ ನಿಜ ಸ್ವರೂಪವನ್ನು ಪ್ರಕಟಿಸಿ, ಅವನನ್ನು ತನ್ನ ರಥಕ್ಕೆ ಸಾರಥ್ಯಕ್ಕಾಗಿ ನಿಯೋಜಿಸಿಕೊಂಡು ತಾನೇ ಕಾಳಗವಮಾಡಿ ಆ ಕೌರವಾದ್ಯರನ್ನು ಸೋಲಿಸಿ, ಸ್ವಪೌರುಷದಿಂದಲೇ ಸಮರದಲ್ಲಿ ಸುಜಯುವನ್ನು ಸಂಪಾದಿಸಿಕೊಂಡನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೨೯ ಶ್ರೀ ಕೃಷ್ಣಸಂಧಾನ ಪ್ರಸಂಗ

ಈ ಪ್ರಪಂಚವನ್ನು ಪ್ರವೇಶ ಮಾಡುವಾಗಲೇ, ಅಂದರೆ, ಈ ಜಗತ್ತಿನಲ್ಲಿ ಜನ್ಮಗ್ರಹಣವಾಗುವಾಗಲೇ, ಪ್ರತಿಯೊಬ್ಬನಿಗೂ ಪೂರ್ವ ಕೃತಕರ್ಮ ವಾಸನಾತ್ಮಕವಾಗಿಯೋ, ಅತರ್ಕ್ಯವಾದ ದೈವತಂತ್ರ ದಿಂದಲೋ, ಅವನದ್ದೇ ಆಗಿರುವ ಒಂದು ವಿಶಿಷ್ಟ ಗುಣವಿರುತ್ತದೆ. ಆ ಗುಣವೇ ಅವನ ಕರ್ಮಕ್ಕೆ ಚೋದಕವಾಗಿ, ಆ ಅವನ ಕರ್ಮ ಸಂಚಾಲನೆಯೇ ಅವನ ಪ್ರಪಂಚ ಜೀವನದ ಔದ್ಯೋಗಿಕ ಧರ್ಮವಾಗಿ ನಿಲ್ಲುವುದು. ಆ ಒಂದು ವಿಶಿಷ್ಟಗುಣವೇ ಅಂತಃಕರಣದ ಸಂಸ್ಕಾರ, ಉದ್ವೇಗ, ಭಾವನಾ, ಹಠಾಖ್ಯಯೋಗ ಅಥವಾ ಸ್ಥಿತಿ ಸ್ಥಾಪಕತ್ವವೆಂದು ಹೇಳಲ್ಪಡುವ ಅಂತಃಕರಣದ ಸಂಸ್ಕಾರ ಲಕ್ಷಣ ಗಳಲ್ಲಿ, ಕೊನೆಯದಾದ ಹಠಾಖ್ಯಯೋಗ ಅಥವಾ ಸ್ಥಿತಿಸ್ಥಾಪಕತ್ವದ ನ್ಯಾಯದಂತೆ, ತನ್ನ ಆ ವಿಶಿಷ್ಟಗುಣವನ್ನು ಬಿಟ್ಟುಬಿಡುವುದು ಅಥವಾ ಪರಿವರ್ತನೆ ಮಾಡಿಬಿಡುವುದು ದುಸ್ಸಾಧ್ಯವೇಸರಿ. ಸ್ವಚಿತ್ತ ಸಂಸ್ಕಾರ ರೂಪೇಣ ಸಂಪ್ರತಿಷ್ಠಿತವಾದ ಆ ಗುಣಕ್ಕೆ ಅನುಸಾರವಾದ ಕರ್ಮ ಸಂಚಾಲನೆಯು ದುಷ್ಪರಿಣಾಮಕಾರಿಯಾದೀತೆಂದು, ಪ್ರಾಜ್ಞರ ಉಪದೇಶದಿಂದಲೋ—ಪ್ರತ್ಯಕ್ಷಾನುಭವದ ವಿಘಟನೆಗಳಿಂದಲೋ—ವಿದ್ಯಾಭ್ಯಾಸದಿಂದ ಸುಶಿಕ್ಷಿತವಾದ ಸುಪಕ್ವಸ್ವಬುದ್ಧಿಯ ವಿವೇಚನೆಯಿಂದಲೋ—ಸ್ಪಷ್ಟವಾಗಿ ತಿಳಿದರೂ ಆ ಗುಣವನ್ನು ಬಿಟ್ಟುಬಿಡುವುದು ಅಸಾಧ್ಯವು. ಇದು ಹಸ್ತಿನಾವತಿಯ ದುರ್ಯೋಧನನು ಪಾಂಡವ ವಿದ್ವೇಷಣಾತ್ಮಕವಾದ ತನ್ನ ಸ್ವಗುಣಾನುಸರಣೆಯಿಂದ ಆ ಪಾಂಡವರೊಡನೆ ಯುದ್ಧವೆಂದೇ ನಿಶ್ಚಯಗೈದು ಪಾಂಡವನಿಯೋಜಿತನಾಗಿ ಅವನೆಡೆಗೆ ಬಂದು ಪಾಂಡವಸ್ನೇಹಸಾಧನಾರ್ಥದ ಸದುಪದೇಶ

ಪನ್ನಿತ್ತ, ದ್ರುಪದ ಪುರೋಹಿತರನ್ನು ಅಸಮ್ಮತಿಸಿ ಶ್ರೀಕೃಷ್ಣಸಹಾಯ ಸಂಗ್ರಹಣಾರ್ಥದಿಂದ ತಾನೇ ದ್ವಾರಾವತಿಗೆ ಹೋಗಿ ಶ್ರೀಕೃಷ್ಣನನ್ನು ಸಂಧಿಸಿದಾಗಲೂ ಅವನಿಂದ ಉಪದೇಶಿಸಲ್ಪಟ್ಟೂ ಪಾಂಡವಸ್ನೇಹಪ್ರಬಂಧಕ್ಕೆ ಒಡಂಬಡದೆ ತನ್ನ ಸಂಕಲ್ಪಾನುಸಾರ ಸಂಭವನೀಯ ಭಾವೀ ಯುದ್ಧಕ್ಕೆ ಬಲರಾಮನು ಸ್ವಯಂಸಹಾಯಕನಾಗಿ ಬರುವಂತೆ ಆತನಿಂದ ಭರವಸೆಯನ್ನು ಪಡೆದು ಹಸ್ತಿನಾವತಿಗೆ ಮರಳಿ ಅಲ್ಲಿ ಪಾಂಡವವಿರೋಧಾರ್ಥದ ಸಮರಸುನಿಶ್ಚಯವನ್ನು ದ್ರೋಣಕೃಪಾಶತ್ಥಾಮಕರ್ಣಾದಿಸ್ವಜನ ಮಂಡಳಿಯ ಸಭೆಯಲ್ಲಿ ಪ್ರಕಟಿಸಿ ತದ್ವಿಷಯ ಸಮಾಲೋಚನಾ ಸಂದರ್ಭವನ್ನುಂಟುಮಾಡಿದಾಗ ದ್ರೋಣ ಕರ್ಣರೊಳಗೆ ಪರಸ್ಪರ ವಿರುದ್ಧಾಭಿಪ್ರಾಯಗಳು ಹುಟ್ಟಿಕೊಂಡುದುದರ ಪರಿಣಾಮವಾಗಿ ಸುಯೋಧನನ ಸಮರ ಸಂಕಲ್ಪ ವಿಷಯಕವಾದ ಅನುಮೋದ, ಪ್ರತಿವೋದ ನಿರೂಪಕವಾದ ಪರಸ್ಪರ ವಿರುದ್ಧ ಭಾಷಣೆಯ ವಾಗ್ಫರ್ಷಣೆಯು ಬಹು ತುರುಸಿನಿಂದ ನಡೆದು ಕೊನೆಗೆ ಸುಯೋಧನನ ಚಾತುರ್ಯದಿಂದ ಆ ಅವಾಂತರವು ಅಲ್ಲಿಗೇ ತಟಸ್ಥವಾಗಿ, ಸುಯೋಧನನು ತನ್ನ ಯುದ್ಧಸಂಕಲ್ಪದಲ್ಲಿ ಸಂಪ್ರತಿಷ್ಠನಾಗಿ, ತನ್ನ ಪ್ರತಿಪಕ್ಷದ ಪಾಂಡವರ ಪರಿಸ್ಥಿತಿಯ ಪರಿಶೀಲನೆಗಾಗಿ ಸಂಜಯನೆಂಬವನನ್ನು ಸಂಯೋಜಿಸಿ, ಪಾಂಡವರ ಪ್ರಾಬಲ್ಯವನ್ನು ಪರೀಕ್ಷಿಸಿ ಅಲ್ಲಿಂದ ಮರಳಿಬಂದ ಸಂಜಯನು ಪಾಂಡವ ದ್ವೇಷತಿರಸ್ಕಾರಾರ್ಥದ ಹಿತೋಪದೇಶ ಮಾಡಿದ್ದಕ್ಕೆ ಅವನನ್ನೂ ತಿರಸ್ಕರಿಸಿ ಸುಯೋಧನನು ಯುದ್ಧನಿರ್ವಾಹದಲ್ಲಿಯೇ ಸ್ಥಿರ ಸಂಕಲ್ಪನಾಗಿರಲು, ಅತ್ತ ಉಪಪ್ಲಾವ್ಯದಲ್ಲಿ ಧರ್ಮರಾಜನು ನಿಜ ಸಹೋದರರನ್ನೂ ಸತಿಯನ್ನೂ ಕೂಡಿ ಸಮಾಲೋಚನೆಮಾಡಿ, ಶ್ರೀಕೃಷ್ಣನೊಡನೆ ವಿಚಾರ ವಿನಿಮಯ ಮಾಡಿ, ಸುವಿಮರ್ಶೆಯಿಂದ ಸಾಧುನ್ಯಾಯವನ್ನು ಸಂಗ್ರಹಿಸಿ ಕಡೆಗೆ ಶ್ರೀಕೃಷ್ಣನನ್ನು ಸಂಧಾನಕ್ಕೆಂದು ಹಸ್ತಿನಾವತಿಗೆ ಕಳುಹಲು ಶ್ರೀಕೃಷ್ಣನು ಹಸ್ತಿನಾವತಿಗೆ ಬಂದು ವಿದುರನಲ್ಲಿ ವಿಶ್ರಾಂತಿಯನ್ನು ಪಡೆದು ಅವನ ಭಕ್ತಿ ಯುಕ್ತವಾದ ಸತ್ಕಾರಕ್ಕೆ ಸಂತುಷ್ಟಿ ಪ್ರಕಟಿಸುವ ನೆಪದಿಂದ ತನ್ನ ಕ್ಷೀರಸಾಗರಶಾಯಿತ್ವದ ಮಹಾಸ್ವರೂಪವನ್ನು ಪ್ರದರ್ಶಿಸಿ ಅವನ ಆಶ್ರಯದಲ್ಲಿ ಉಳಿದುಕೊಂಡಿದ್ದ ಕುಂತಿದೇವಿಯನ್ನು ಗೌರ

ವಿಸಿ ಉಚಿತ ಸಮಯವನ್ನು ಸಂಗ್ರಹಿಸಿ ವಿದುರ ಸಾಂಗತ್ಯದಿಂದ ಸುಯೋಧನನ ಸಭಾಪ್ರವೇಶಮಾಡಿ ಅಲ್ಲಿ ದುರ್ಯೋಧನನ ದುರ್ದರ್ಪಕ್ಕೆ ಪ್ರತಿಶಾಸ್ತಿಯಾಗಿ ಅವನು ಪೀಠಸಹಿತ ಪ್ರಪತಿತನಾಗುವಂತೆ ಪವಾಡವನ್ನು ಪ್ರಯೋಗಿಸಿ ಆ ಮೇಲೆ ಆ ದುರ್ಯೋಧನನ ದರ್ಪವಾಣಿಯನ್ನು ಪ್ರತಿಷೇಧಿಸಿ, ತನ್ಮಧ್ಯೆ ವಿದುರನು ಸಭಾತ್ಯಾಗ ಮಾಡುವಂಥ ಘಟನೆ ನಡೆದು ತದನಂತರ ಶ್ರೀಕೃಷ್ಣನು ವಿವಿಧ ರೀತಿಯಿಂದ ಸುಜ್ಞಾನ ಪ್ರಬೋಧಕ ಸುರಹಸ್ಯ ಸಂಭೃತವಾದ ಸುರಚಿತ ವಚನ ಕೌಶಲ್ಯದಿಂದ ಪಾಂಡವದ್ವೇಷ ನಿರೋಧಾರ್ಥಕ ಸದುಪದೇಶವನ್ನು ಮಾಡಿದರೂ ಅದಕ್ಕೆ ಸುಯೋಧನನು ಸಮ್ಮತಿಸದಿರಲು ಭೀಷ್ಮಾದ್ಯಾಪ್ತರೂ ಧೃತರಾಷ್ಟ್ರ, ಭಾನುಮತ್ಯಾದಿ ಆತ್ಮೀಯರೂ ಪಾಂಡವಸ್ನೇಹ ಸಂಭಾವನಾರ್ಥವಾಗಿ ನೀಡಿದ ಹಿತೋಪದೇಶವೂ ನಿಷ್ಪ್ರಯೋಜನವಾಗಿ, ಕೊನೆಗೆ ಅಲ್ಲಿ ಶ್ರೀಕೃಷ್ಣನನ್ನು ಹಿಡಿದು ಕಟ್ಟುವ ದುರಾಗ್ರಹ ಪೀಡಿತನಾದಾದುರ್ಯೋಧನನ ದುಷ್ಕೃತಿಗೆ ಪ್ರತಿಯಾಗಿ ಶ್ರೀಕೃಷ್ಣನು ತನ್ನ ಯೋಗಮಾಯಾ ಚಮತ್ಕಾರದಿಂದ ತನ್ನ ಸಾರ್ವಪ್ರಾದೇಶಿಕ ಬೃಹದ್ವ್ಯಾಪನೆಯ ವಿಸ್ತೃತ ವಿಚಿತ್ರ ರೂಪದಿಂದ ಮೆರೆದು ಕೊನೆಯಲ್ಲಿ ಸುಯೋಧನನ ನಿರ್ಧಾರ ನಿರೂಪಣೆಯ ಮುಕ್ತಾಯದ ಮಾತುಗಳಿಂದ ಅವನು ಸಾಂಸಾರಿಕ ಸುಖಸಮಗ್ರತೆಯನ್ನಾದರೂ ಸಂತ್ಯಜಿಸಿ ಸಾವನ್ನಾದರೂ ಸಂತೋಷದಿಂದ ಸಮ್ಮತಿಸಲು ಸಿದ್ಧನಾಗಿರುವ, ಸರ್ವಥಾ ಪರಿತ್ಯಜಿಸಲ್ಪಡದ ಪಾಂಡವದ್ವೇಷ ಪೂರಿತವಾದ ಸಮರ ಸಂಕಲ್ಪವನ್ನು ಸುಸ್ಥಿರವಾಗಿಟ್ಟುಕೊಂಡಿರುವ ಅವರ ಅಂತಃಸಂಸ್ಕೃತಿಯನ್ನು ಸಮಸ್ತರಿಗೂ ಪ್ರಕಟಿಸಿ, ಕೌರವರಿಗೆ ಪಾಂಡವರೊಡನೆ ಸಂಧಾನವು ಸರ್ವಥಾ ಸಾಧ್ಯವಲ್ಲವು ಎಂಬುದನ್ನು ಪ್ರಸಿದ್ಧಪಡಿಸಿದನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೩೦ ಭೀಷ್ಮಪರ್ವ ಪ್ರಸಂಗ

ಕಾಮ, ಸಂಕಲ್ಪ ಮತ್ತು ಕ್ರಿಯಾ ಈ ಮೂರೂ ಕೂಡಿ ಒಂದು ಕರ್ಮವು. ಆದುದರಿಂದ ಕ್ರಿಯಾರೂಪವಾಗಿ ಅಭಿವ್ಯಕ್ತ ಸ್ಥಿತಿಯಲ್ಲಿರುವ ಒಬ್ಬನ ಕರ್ಮವು ಸರಿಯೊ ತಪ್ಪೋ, ಪುಣ್ಯವೋ ಪಾಪವೋ,

ನ್ಯಾಯವೂ ಅನ್ಯಾಯವೋ ಎಂದು ಅದರ ಇತಿಸ್ವರೂಪವನ್ನು ತಿಳಿಯ ಬೇಕಾದರೆ ಆ ಕರ್ಮದ ಕಾಮನಾ ಮತ್ತು ಸಂಕಲ್ಪಗಳ ಶೋಧೆಯು ಬೇಕಾಗುತ್ತದೆ. ಕೇವಲ ಕಾಯಿಕ ಸುಖಕಾಮನೆಯನ್ನಿಟ್ಟುಕೊಳ್ಳದೆ ಪರಮಾತ್ಮಾಭಿಲಕ್ಷ್ಯ ಸಹಿತವಾದ ಸದುದ್ದೇಶವನ್ನೇ ಸಂಕಲ್ಪಿಸಿಕೊಂಡು ಆಚರಿಸುವ ಒಂದಾನೊಂದು ಕರ್ಮವು ಬಾಹ್ಯ ವ್ಯಕ್ತತೆಯಲ್ಲಿ ಯಾವ ರೂಪದಲ್ಲಿದ್ದರೂ ಅದು ಸರಿಯಾದದ್ದೇ ನ್ಯಾಯವಾದದ್ದೇ ಎಂದು ಮಾನ್ಯವು. ಇದು ಕುರುಕ್ಷೇತ್ರದಲ್ಲಿ ಕೌರವ, ಪಾಂಡವರೊಳಗೆ ಯುದ್ಧ ನಡೆಯುವುದೆಂದು ನಿಶ್ಚಯವಾದ ಪ್ರಕಾರ ಪಾಂಡವರು ಶ್ರೀಕೃಷ್ಣನ ಪುಢಾರಿತನದಿಂದ ತತ್‌ಕ್ಷೇತ್ರದಲ್ಲಿ ಯುದ್ಧಸನ್ನಾಹದಿಂದ ಕೂಡಿ ತಮ್ಮ ನಿಲ್ದಾಣವನ್ನು ಹೊಂದಿಕೊಂಡ ಸಮಾಚಾರವನ್ನು ಸಂಗ್ರಹಿಸಿಕೊಂಡ ಸುಯೋಧನನು ತಾನೂ ಸೇನಾಸಂಗ್ರಹ ಮಾಡಿ ಕೊಂಡು ದ್ರೋಣಾದಿ ಆಪ್ತರೊಡನೆ ವಿಚಾರ ವಿನಿಮಯವಾದಂತೆ ಭೀಷ್ಮನನ್ನೇ ತನ್ನ ಪಕ್ಷದ ಸೇನಾ ನಾಯಕತ್ವಕ್ಕೆ ನಿಯೋಜಿಸಲು ಆ ಭೀಷ್ಮನು ಸ್ವಾಂತಃಕರಣದಲ್ಲಿ ಪಾಂಡವಪರವಾದ ಪ್ರೇಮವನ್ನೂ ಶ್ರೀಕೃಷ್ಣಪರವಾದ ಭಕ್ತಿಯನ್ನೂ ಇಟ್ಟುಕೊಂಡವನಾದುದರಿಂದ ಪಾಂಡವವಿರೋಧಸಾಧನೆಗೆ ಕಾಮನಾ, ಸಂಕಲ್ಪಗಳಿಲ್ಲದವನಾದರೂ ರಾಜಾಶ್ರಯವೃತ್ತಿ ನ್ಯಾಯ ನಿರ್ಬಂಧಕ್ಕೆ ಕಟ್ಟುಬಿದ್ದವನಾದುದರಿಂದ ಅನಿವಾರ್ಯಪಕ್ಷದಿಂದ ಕೇವಲ ಕ್ರಿಯಾರೂಪವಾದ ಪಾಂಡವ ವಿರುದ್ಧ ವ್ಯವಸಾಯ ದೀಕ್ಷಾಬದ್ಧನಾಗಿರಲು, ತದ್ರಣಕ್ಷೇತ್ರದಲ್ಲಿ ಶ್ರೀ ಕೃಷ್ಣಸಾರಥ್ಯದಿಂದ ಅರ್ಜುನನು ಉಭಯ ಸೇನೆಗಳ ಮಧ್ಯೆ ನಿತ್ತು ಪ್ರತಿಪಕ್ಷದವರನ್ನು ಕಂಡಾಗ ಅವರಲ್ಲಿದ್ದ ದ್ವೇಷಭಾವವನ್ನು ಕಳೆದು ಕೊಂಡು ಅದಕ್ಕೆ ಬದಲಾಗಿ ಮೋಹಭಾವಾಪನ್ನನಾಗಿ ಕಾರ್ಪಣ್ಯ ದೋಷೋಪಹತಸ್ವಭಾವದಿಂದ ವಿಗತೋತ್ಸಾಹಿಯಾಗಿ ತಾಟಸ್ಥ್ಯ ವನ್ನು ತಳೆದಾಗ ಶ್ರೀಕೃಷ್ಣನು ಆತನಿಗೆ ಉಪನಿಷದರ್ಥಗರ್ಭಿತವಾಗಿ ಯೂ ಅಶೇಷ ಸಮಸ್ತ ಜನವರ್ಗ ಸಂಗ್ರಾಹ್ಯಾವಶ್ಯಕವಾದ ಇಹ ಪರ ನಿಶ್ರೇಯಸ್ಕರ ಆಧ್ಯಾತ್ಮಿಕ ವಿಚಾರ ಪ್ರಬೋಧಕವೂ ಆದ ಸು ವಾಕ್ಯಾಮೃತಗಳಿಂದ ತತ್ವಜ್ಞಾನವನ್ನು ಉಪದೇಶ ಮಾಡಿ ಆತನ ಉದಾಸೀನತೆಯನ್ನು ಉಚ್ಚಾಟನೆಮಾಡಿ ಉದ್ಯೋಗಕ್ಕೆ ಉತ್ತೇಜಿತ

ನನ್ನಾಗಿ ಮಾಡಿ, ತದನಂತರ ಬಲು ಭರದಿಂದ ಸಾಗಿದ ಭೀಷ್ಮಾರ್ಜುನ ಕಾಳಗದಲ್ಲಿ ಭೀಷ್ಮನು ಅರ್ಜುನ ಸಾರಥಿಯಾಗಿದ್ದ ಶ್ರೀಕೃಷ್ಣನಿಗೆ ಶರಪ್ರಯೋಗ ಮಾಡಿದ ವಕ್ರನೀತಿಗೆ ಪ್ರತಿರೋಧಾತ್ಮಕವಾಗಿ ಶ್ರೀ ಕೃಷ್ಣನು ಸುದರ್ಶನಧಾರಿಯಾಗಿ ಸ್ವಯಂಯೋಧನಂತೆ ರಣರಂಗ ಕ್ಕಿಳಿದು ಭೀಷ್ಮನ ಮೇಲೆ ಧಾಳಿಯನ್ನಿಡಲು, ಅದರಿಂದ ಯುದ್ಧಾರ್ಥ್ ಪೂರ್ವದಲ್ಲಿ ಸುಯೋಧನನಿಗೆ ಶ್ರೀಕೃಷ್ಣನಿತ್ತಿದ್ದ ಭಾಷೆಯು ಭಂಗಿತ ವಾದಂತಾಗಿ ಏತದ್ಘಟನೆಗೆ ಭೀಷ್ಮನ ಭಗವದ್ಭಕ್ತಿ ಸಂಪನ್ನವಾದ ಆತ್ಮ ವರ್ಚಸ್ಸೇ ಕಾರಣವೆಂದು ಸಂಶೋಧಿಸಿದ ಶ್ರೀಕೃಷ್ಣನು ತನ್ನ ಚಮ ತ್ಕಾರಪ್ರಯೋಗದಿಂದ ಭೀಷ್ಮನ ಕರ್ಮಸ್ವರೂಪದ ಸಹಜಸ್ಥಿತಿಯನ್ನು ಅರ್ಥಾತ್ ಅವನ ಪಾಂಡವ ಪ್ರತಿಪಂಥದ ಉದ್ಯೋಗದ ನ್ಯಾಯ ನಿರೂಪಣೆಯನ್ನು ಅವನ ಮಾತುಗಳಿಂದಲೇ ಪ್ರಸಿದ್ಧಗೊಳಿಸಿ ತನ್ಮೂ ಲಕ ಅವನೂ ಹರಿಭಕ್ತನಾದ ಧರ್ಮಾತ್ಮನೇ ಸರಿ ಎಂದು ಗೌರವಿಸಿ ಕೊನೆಯಲ್ಲಿ ಶಿಖಂಡಿಯನ್ನು ಭೀಷ್ಮನೆದುರಲ್ಲಿ ಯುದ್ಧಕ್ಕೆ ನಿಯೋಜಿ ಸಿದ ತಂತ್ರದ್ವಾರಾ ಅವನನ್ನು ಯುದ್ಧೋದ್ಯೋಗದಿಂದ ನಿವೃತ್ತ ಗೊಳಿಸಿ ಅವನು ಶರತಲ್ಪದಲ್ಲಿ ಪವಡಿಸುವಂತೆ ವ್ಯವಸ್ಥೆಗೊಳಿಸಿದನು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೩೧ ಅಭಿಮನ್ಯುಕಾಳಗ ಪ್ರಸಂಗ

ಕರ್ಕಶ ಸ್ವರದ ಕಾಗೆಯಾಗಿ ಸಾವಿರ ವರ್ಷ ಬದುಕುವುದ ಕ್ಕಿಂತಲೂ, ಕಂಠಮಾಧುರ್ಯದ ಕೋಗಿಲೆಯಾಗಿ ನಾಲ್ಕು ದಿನ ಬದು ಕಿದರೆ ಸಾಕು. ಜೀವನದ ಧ್ಯೇಯವೇನೆಂದು ಗೊತ್ತುಗುರಿಯಿಲ್ಲದೆ, ತನ್ನ ಸಹಜಗುಣ ಪ್ರವೃತ್ತಿಜನ್ಯ ಧರ್ಮ ಯಾವುದೆಂಬ ವಿವೇಚನೆ ಯಿದ್ದೂ ತದನುಸರಣೆಯುಳ್ಳ ತನ್ನ ಲೋಕಜೀವನ ನ್ಯಾಯವನ್ನು ನಿಷ್ಠೆಯಲ್ಲಿಟ್ಟುಕೊಳ್ಳದೆ ಆತ್ಮಾಭಿಮಾನ—ದೇಶಾಭಿಮಾನ—ಸ್ವಜನಾ ಭಿಮಾನ—ಧರ್ಮಾಭಿಮಾನ—ಇಂಥ ಯಾವ ಅಭಿಮಾನದ ನಚ್ಚೂ ಕೆಚ್ಚೂ ಇಲ್ಲದೆ ಬರೇ ಆಹಾರ ನಿದ್ರಾಭಯ ಮೈಥುನಾದಿಗಳಲ್ಲಿ ನಿರತ ನಾಗಿ ತನ್ನ ಶರೀರಪೋಷಣಾನ್ಯಾಯ ನಿಮಗ್ನನಾಗಿ ಎಷ್ಟು ಕಾಲ ಬದುಕಿದರೇನು? ಎಷ್ಟು ಸುಖ ತಾಳಿದರೇನು? ಉಂಡು ತಿಂದು ಬೆಳೆದು

ಳಿದು ಬಿಡೋಣವೆಂಬ ಬರೇ ದೇಹಭೋಗ ಸಂಪ್ರಾಪ್ತಿ ಸ್ಥಿತಿಯಲ್ಲಿಯೇ
ಮಿತಿಯೆಂದು ತೀರ್ಮಾನಮಾಡಿಕೊಂಡು ಜೀವಿಸುತ್ತಿರುವ ಮನು
ಷ್ಯನು ಮೃಗಗಳ ಮಟ್ಟಕ್ಕಿಂತ ಮೇಲೆಂಬುದು ಹೇಗೆ? ಮೃಗ
ಗಳ ಮಟ್ಟಕ್ಕಿಂತ ಕೀಳೆಂಬುದು ಸುತರ್ಕಕ್ಕೆ ಸ್ಪಷ್ಟವು. ದೇಹವು
ಬಲಿತು ಬೆಳೆದು ಬೃಹದ್ಬಲ—ಆಕಾರಗಳೆಷ್ಟನ್ನು ತಳೆದರೂ ಮನು
ಷ್ಯನು ಆನೆಯನ್ನು ಮಿಗಿಸಬಲ್ಲನೇ? ನಿದ್ರಾಸುಖಸಂಪಾದನೆಯಲ್ಲಿ
ಮನುಷ್ಯನು ಹಾವುಗಳಿಗಿಂತ ಹೆಚ್ಚೆನಿಸುವನೇ? ಮನೆ—ಮಂದಿರ
ಗಳನ್ನು ಕಟ್ಟಿಕೊಂಬುದರಲ್ಲಿ ಮನುಷ್ಯನು ಕಲ್ಲು ಬಂಡೆಗಳನ್ನೇ
ಕೊರೆದು ಭದ್ರವಾದ ಆವಾಸಗೃಹಗಳನ್ನು ನಿರ್ಮಿಸಿಕೊಳ್ಳುವ
ಕರಡಿಗಿಂತ ಮೇಲಾಗುವನೇ? ಧನಾಢ್ಯತೆಯಲ್ಲಿ ಕನಕದ್ರವ್ಯಮಯ
ಕೊಪ್ಪರಿಗೆಗಳನ್ನೇ ಕಾವಲುಮಾಡುವ ಸರ್ಪಗಳಿಗಿಂತ ಮನುಷ್ಯನು
ಅಧಿಕನಾಗಬಹುದೇ? ಸಂತಾನಸಂಪ್ರಾಪ್ತಿ ಸ್ಥಿತಿಯಲ್ಲಿ ಕಪ್ಪೆಮೀನು
ಗಳದ್ದಕ್ಕಿಂತ ಮನುಷ್ಯನದ್ದೇನು ಮಹತ್ವ? ಆದುದರಿಂದ ಶಾರೀರಿಕ
ತ್ರಾಣ, ಸಾಮಾಜಿಕ ಮಾನ, ಸಂಪಾದನೆಯ ಹಣ ಪಡೆವ ಸಂತಾನ
ಬದುಕಿದ ಆಯುರ್ಮಾನ—ಇತ್ಯಾದಿಗಳಿಂದ ಮನುಷ್ಯ ಜೀವಿತದ
ಮಹತ್ವವು ಗಣ್ಯವಲ್ಲ. ಆದರೆ ಸಹಜ ಯೋಗ್ಯತಾನುಸಾರವಾಗಿ
ಕರ್ಮದಲ್ಲಿ ಸಾಗುತ್ತಾ ಸತ್ತರೆ ಸ್ವರ್ಗದ ಭಾಗ್ಯ—ಬದುಕಿದರೆ
ಭೂಮಿಭಾಗ್ಯವೆಂದು ಸಾವು ಬದುಕುಗಳಲ್ಲಿ ಸಮಲಕ್ಷ್ಯವನ್ನು ಸಾಧಿಸಿ
ನ್ಯಾಯವೆಂದು ನಿರ್ಣಯಿಸಲ್ಪಟ್ಟ ತನ್ನ ಧ್ಯೇಯವನ್ನು ಸಾಧಿಸುತ್ತಾ
ಧೃತಿಬಿಡದೆ ಮತಿಗೆಡದೆ ಧೀರವೃತ್ತಿಯಿಂದ ಸಾಗುವವನೇ—ಅಂಥ
ವನು ಅಲ್ಪಾಯುಷ್ಯದಲ್ಲಿ ಅವಸಾನನಾದರೂ ಧನ್ಯನು. ಇದು ಕುರು
ಕ್ಷೇತ್ರದಲ್ಲಿ ಸಾಗುತ್ತಿದ್ದ ಯುದ್ಧದಲ್ಲಿ ಪಾಂಡವ ಪಕ್ಷದಲ್ಲಿ ಅರ್ಜುನನು
ಸಂಶಪ್ತಕರ ಪ್ರತಿಯಾಗಿ ರಣದಲ್ಲಿ ಪ್ರಯುಕ್ತನಾಗಿದ್ದ ಸಂದರ್ಭದಲ್ಲಿ
ಆ ಪಾಂಡವರ ಪ್ರತಿಸ್ಪರ್ಧೆಗಾಗಿ ಪ್ರತಿಪಕ್ಷ ಪ್ರಮುಖನಾದ ದ್ರೋಣ
ನಿಂದ ನಿಬಂಧಿತವಾದ ಚಕ್ರವ್ಯೂಹವನ್ನು ಭೇಧಿಸುವ ಪ್ರತಿಭಟನು
ಅರ್ಜುನನ್ಯೇತರ್ರ್ಯಾರೂ ಇಲ್ಲದ ನಿಮಿತ್ತ ನಿರಾಶಾಗ್ರಸ್ತನಾದ ಧರ್ಮ
ರಾಜನು ಸೋಲನ್ನು ಸಮ್ಮತಿಸಬೇಕಾದ ದುರ್ದುಶಾತಂಕೆಯಿಂದ
ದುಃಖಿತನಾಗಿರಲು ಅರ್ಜುನಪುತ್ರನಾದಾ ಅಭಿಮನ್ಯುವು ವೀರವಾದ

ನಿರೂಪಣಾರ್ಥಗರ್ಭಿತವಾದ ಸಾಂತ್ವನ ವಾಕ್ಯಗಳಿಂದ ಆ ಧರ್ಮ ರಾಜನನ್ನು ಸಮಾಧಾನಗೊಳಿಸಿ ಸೋತ್ಸಾಹಪೂರಿತನಾಗಿ ರಣವೀಳ್ಯ ವನ್ನು ಪಡೆದು ಮಹೋತ್ಸಾಹದಿಂದ ಮುಂಬರಿದು ರಣೋದ್ಯೋಗ ದಲ್ಲಿ ತನ್ನ ಅಪ್ರತಿಹನ್ಯಮಾನ ಪರಾಕ್ರಮದಿಂದ ಆ ಪ್ರಬಲವ್ಯೂಹದ ಪ್ರಬೇಧನಮಾಡಿ ವೈರಿಜನ ವಿಸ್ಮಯ ವಿಭ್ರಮಹೇತುಕವಾದ ತನ್ನ ಶೌರ್ಯಧೈರ್ಯ ವೀರ್ಯ ಗಾಂಭೀರ್ಯಸಮನ್ವಿತವಾದ ಅಪ್ರತಿಮ ಪ್ರತಾಪಪ್ರಪೂರಿತ ರಣ ಕೌಶಲ್ಯದಿಂದ ದ್ರೋಣನನ್ನು ಗೆಲಿದು ಕೌರವ ನನ್ನು ಸೆರೆಹಿಡಿದು ಕರ್ಣನನ್ನು ಕಳೆಗೆಡಿಸಿ ತದನುವರ್ತಿಗಳನ್ನು ಓಡಿಸಿ ಒದೆದು ಕೆಲವರನ್ನು ದೂಡಿ ಸದೆದು ವಿಕ್ರಮ ವಿಪೂರಿತ ವೀರವ್ಯವ ಸಾಯದಲ್ಲಿ ಅಭೂತಪೂರ್ವ ಪ್ರಕಟಿತವಾದ ಮಹಾಪ್ರತಿಷ್ಠೆಯನ್ನು ಪಡೆದು ತಾನೇ ತಾನಾಗಿ ಮೆರೆಯುತ್ತಿರಲು ಅವನಿಂದ ಸಂದತ್ತವಾದ ಸಂತ್ರಾಸದ ಕಾವಿನಿಂದ ಕಡುನೊಂದ ಕೌರವನು ತನ್ನ ದುಃಖವನ್ನು ದ್ರೋಣನಲ್ಲಿ ದೂರಿಕೊಂಡದ್ದರ ಮೇರೆಗೆ ದ್ರೋಣನು ವಂಚನೋ ಪಾಯವನ್ನು ಸಂಯೋಜಿಸಿ ಅರ್ಥಾತ್ ಕರ್ಣನು ಪರಾಙ್ಮುಖತೆ ಯಿಂದ ಅಭಿಮನ್ಯುವಿನ ತೋಳ್ಗಳನ್ನು ಕತ್ತರಿಸುವಂತೆ ಧುರದುರ್ನೀ ತಿಯನ್ನು ನಿಯೋಜಿಸಿ ಮತ್ತಾ ಅಭಿಮನ್ಯುವಿಗೆ ಆ ಚಕ್ರವ್ಯೂಹದಿಂದ ಪ್ರತ್ಯಾಗಮನವಾಗದಂಥ ಪ್ರಬಂಧವನ್ನು ರಚಿಸಿ ಅದಕ್ಕಾಗಿ ಅಭಿಮನ್ಯು ವಿನ ಸಮ್ಮುಖದ ಸಮರಕ್ಕೆ ಪ್ರತಿಯೋಧರನ್ನು ನಿಯೋಜಿಸಿ ಅಂತು ಅಕ್ರಮದಿಂದವನ ವಿಕ್ರಮವನ್ನು ವಿನಷ್ಟಗೊಳಿಸಿ ಕಡುವೀರನಾದಾ ಅಭಿಮನ್ಯುವನ್ನು ಕದನರಂಗದಲ್ಲಿ ಕೆಡಹಿ ಕೊಂದು ಕಳೆದರಾದರೂ ಅಭಿಮನ್ಯುವು ಧರ್ಮಕ್ಷೇತ್ರದಲ್ಲಿ ವೀರೋಚಿತವಾದ ತನ್ನ ಧಾರ್ಮಿಕ ಧುರವ್ಯವಸಾಯದಿಂದ ಸ್ಥಿರ—ಸ್ಥಾಯಿೀ ಸತ್ಕೀರ್ತಿಯನ್ನು ಸಂಸ್ಥಾ ಪಿಸಿಕೊಂಡು ಧನ್ಯನಾದನು ಎಂಬೀಕಥೆಯಿಂದ ಸಿಗುವ ಬೋ ಧಾಂಶವು.

೩೨ ಸೈಂಧವ ವಧಾ ಪ್ರಸಂಗ

ಮನಸ್ಸಿನಲ್ಲಿ ಮೂಡಿದ್ದೆಲ್ಲವನ್ನು ಒಡನೆ ಬಾಯಿಯಿಂದ ಆಡಿ ಬಿಡುವುದು ಪ್ರಮಾದವಾಗಬಹುದು. ಆಡಿದ ಮೇಲೆ ಮಾಡದವನು

ಅಧಮನಾಗುವನು ಎಂಬ ಎಚ್ಚರಿಕೆ ಇರಬೇಕು. ಉದ್ವೇಗವಶನಾದವನ ಅವಸರದ ಭಾಷೆಯು ಕೊನೆಗೆ ನುಡಿಯಂತೆ ನಡೆ ಇಟ್ಟುಕೊಳ್ಳಲು ಸಾಧ್ಯವಾಗದ ಅವಮಾನದ ದುಷ್ಪರಿಸ್ಥಿತಿಯನ್ನು ದೊರಕಿಸಿ, ಪಶ್ಚಾತ್ತಾಪದ ಬೇಗೆಯಲ್ಲಿ ಬೇಯಿಸಿ, ಆತ್ಮಘಾತ ಮಾಡಿಕೊಳ್ಳೋಣವೆಂಬ ಎಣಿಕೆಗೊಳಗಾಗುವಷ್ಟು ಸಂಕಷ್ಟಸ್ಥಿತಿಗೆ ಸಿಲುಕಿಸೀತು. ಮಾತಿನಂತೆ ಕೃತಿ ಇರಲೇಬೇಕಾದುದು ಮಾನವಂತನಿಗೆ ಮುಖ್ಯವು. ಆದುದರಿಂದ ಮಾನಸಂರಕ್ಷಣೆಯ ವಿವೇಚನಾಶೀಲನು ತನ್ನ ಯೋಗ್ಯತೆಯನ್ನನುಲಕ್ಷಿಸಿ, ತನ್ನ ವರ್ತಮಾನ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಸಾಕಷ್ಟು ಸಾವಕಾಶವಾಗಿ ಮಾತಾಡುವುದು ವಿಹಿತವು. ಇದು ಚಕ್ರವ್ಯೂಹದಲ್ಲಿ ಮರಣ ಹೊಂದಿದ ತನ್ನ ಮಗನ ವೃತ್ತಾಂತವನ್ನು ತನ್ನ ಪಾಳೆಯಕ್ಕೆ ಮರಳಿ ಬಂದೊಡನೆಯೇ ತಿಳಿದ ಅರ್ಜುನನು ತನ್ನ ಮಗನ ತದ್ವ್ಯೂಹಪ್ರತ್ಯಾಗಮನಕ್ಕೆ ಪ್ರತಿಬಂಧಕವನ್ನಿತ್ತ ಸೈಂಧವನೊಡನೆ ಅತ್ಯುಗ್ರ ವೈರಭಾವಾವಿಷ್ಟನಾಗಿ ಕೋಪೋದ್ವಿಗ್ನ ಮನಸ್ಕತೆಯಿಂದ ತದ್ದಿವಸ ಸೂರ್ಯಾಸ್ತದೊಳಗೆ ಸೈಂಧವನ ಶಿರಚ್ಛೇದನ ಮಾಡುವೆನೆಂಬ ಉಜ್ವಲ ಪ್ರತಿಜ್ಞೆಯನ್ನು ಮಾಡಲು ಈ ವಿಷಯವನ್ನರಿತುಕೊಂಡ ಕೌರವನು ಪಾರ್ಥಪ್ರತಿಜ್ಞಾಪ್ರಜ್ವಲನಾಗ್ನಿಗೆ ಸೈಂಧವಪ್ರಾಣಾಹುತಿಯಾಗದಂತೆ ಆ ಸೈಂಧವನನ್ನು ಗೌಪ್ಯದಲ್ಲಿರಿಸಿ ತತ್ಫಲವಾಗಿ ಅರ್ಜುನನು ಭ್ರಷ್ಟಪ್ರತಿಜ್ಞನಾಗಿ ಅಪಮಾನದ ಅತಿ ವೇದನೆಯಿಂದ ಆತ್ಮಘಾತವನ್ನು ಮಾಡಿಕೊಳ್ಳಬೇಕಾದ ಆವಶ್ಯಕತೆಯು ಅನುಮಾನಿಸಲ್ಪಟ್ಟಾಗ ಆ ಅರ್ಜುನ ಸಂರಕ್ಷಣಾ ಸುದೀಕ್ಷಾಸುಬದ್ಧನಾದ ಶ್ರೀಕೃಷ್ಣನು ತನ್ನ ಕಪಟತಂತ್ರ ಪ್ರಯೋಗಾತ್ ದಿವಸ ಸಾಹಜಿಕಪ್ರಕಾಶವನ್ನು ಪ್ರಕ್ಷಿಪ್ತಗೊಳಿಸಿ, ರಾತ್ರಿಮುಖ ಸಾಹಜಿಕವಾದ ಸಂಧ್ಯಾರುಣ ಮಂದಛಾಯೆಯನ್ನು ಪ್ರಸಾರಗೊಳಿಸಿ ದಿವಸಾಂತ್ಯ ಕಾಲವೇ ಸಮಸ್ತಜನವೇದ್ಯವಾಗುವಂತೆ ಬೃಹದ್ಭ್ರಮಾಜಾಲವನ್ನು ವ್ಯಾಪಿಸಲು ತನ್ನ ಪ್ರತಿಜ್ಞಾಪಾಲನೆಯ ಕಾಲವು ಅತೀತವಾಯಿತೆಂದು ಅವಗಾಹಿಸಿದ ಅರ್ಜುನನು ಪ್ರತಿಜ್ಞಾಭಂಗದ ದೋಷಕ್ಕೆ ಶಿಕ್ಷೆಯಾಗಿಯೂ ಅಪಮಾನದ ಅತಿವೇದನೆಯ ಅಸಹ್ಯತೆಗಾಗಿಯೂ ಅಗ್ನಿಪ್ರವೇಶಕ್ಕೆ ಅನುವಾಗಿ ತನ್ನ ಪ್ರತಿಜ್ಞೆಗೆ ಕಾರಣವಾಗಿದ್ದ ಉದ್ವಿಗ್ನ

ಸ್ಥಿತಿಗ್ರಸ್ತ ದುರ್ಬಲಬುದ್ಧಿಗಾಗಿ ಪಶ್ಚಾತ್ತಾಪಗೊಂಡು ಶ್ರೀಕೃಷ್ಣನನ್ನು ವಂದಿಸಲು, ತತ್ಸಂದರ್ಭದಲ್ಲಿ ಅರ್ಜುನನ ಪ್ರತಿಜ್ಞಾನುಸರಣೆಯು ಶರದಿಂದ ಸ್ವಶಿರ ಸಂಛೇದ್ಯವಾಗುವ ಸಮಯುವು ಅತೀತವಾಯಿತೆಂಬ ಅತಿ ಧೈರ್ಯದಿಂದ ಸಮೀಪದಲ್ಲಿಯೇ ಪ್ರಕಟನಾಗಿದ್ದ ಸೈಂಧವನನ್ನು ಸಂಹರಿಸುವಂತೆ ಶ್ರೀಕೃಷ್ಣನು ಅರ್ಜುನನನ್ನು ಪ್ರೇರಿಸಿದ್ದರ ಮೇರೆಗೆ ಕೃಷ್ಣೋಪದೇಶದಲ್ಲಿ ಶ್ರದ್ಧಾನ್ವಿತನಾದ ಅರ್ಜುನನು ಹಾಗೆಯೇ ಮಾಡಿದಾಗ ಶ್ರೀಕೃಷ್ಣನು ತನ್ನ ತಂತ್ರದಿಂದ ನಿರ್ಮಿಸಿದ ಕೃತ್ರಿಮ ಸಂಧ್ಯಾಕಾಲ ಲಕ್ಷಣವನ್ನು ಉಪಸಂಹರಿಸಿ, ಅದು ಇನ್ನೂ ಹಗಲು ಹೊತ್ತೇ ಆಗಿತ್ತು ಎಂಬ ವಾಸ್ತವತೆಯನ್ನು ವ್ಯಕ್ತಗೊಳಿಸಿದ್ದರಿಂದ ಅರ್ಜುನನ ಪ್ರತಿಜ್ಞೆಯು ಕಾಲಕ್ಲ್ಪಪ್ತತೆಯನ್ನು ಮೀರದೆ ನ್ಯಾಯವತ್ತಾಗಿಯೇ ಪಾಲಿತವಾಯಿತೆಂದು ಪ್ರಸಿದ್ಧವಾಯಿತು ಎಂಬೀಕಥೆಯಿಂದ ಸಿಗುವ ಬೋಧಾಂಶವು.

೩೩ ಕರ್ಣಾರ್ಜುನರ ಕಾಳಗ ಪ್ರಸಂಗ

ರಾಜಾಶ್ರಯ, ಮಹಾಧಿಕಾರ, ಆಢ್ಯಪದವಿ, ವ್ಯವಹಾರಕೌಶಲ್ಯ ವಿದ್ವತ್‌ಸಂಪತ್, ಶಾರೀರಿಕ ತ್ರಾಣ, ಸಾಮಾಜಿಕ ಮಾನ, ಸುಪ್ರತಿಷ್ಠಾವಂತ ಜನಸಹಾಯ—ಇಂಥಿಂಥ ಯಾವ ಸುಯೋಗ್ಯತೆಯಿಂದ ಸಂಪನ್ನನಾಗಿದ್ದರೂ ದೈವಬಲವೊಂದಿಲ್ಲದಿದ್ದರೆ ಇವೆಲ್ಲ ನಿಷ್ಫಲಗಳಾಗಿ ಪರಿಣಮಿಸುವುವು. ಪೌರುಷವು ದೈವಹೀನನಿಗೆ ಫಲವನ್ನು ಪ್ರಾಪ್ತಿಸದು. ಇದು ಕುರುಕ್ಷೇತ್ರದಲ್ಲಿ ನಡೆದ ಮಹಾಯುದ್ಧದಲ್ಲಿ ಸುಯೋಧನನ ಪಕ್ಷದಲ್ಲಿ ಸೇನಾನಿತ್ವದ ಅಧಿಕಾರವನ್ನು ವಹಿಸಿಕೊಂಡು ಕಲಿತನದಿಂದ ಕಾದಾಡುತ್ತಿದ್ದ ಕರ್ಣನೆಂಬ ಆ ಕೌರವನ ಕಡು ಸ್ನೇಹಿತನಾದ ಸುಭಟೋತ್ತಮನು ತನ್ನ ಪ್ರತಾಪೋದ್ಯಮದ ಪ್ರಥಮ ಪ್ರಕರಣದಲ್ಲಿ ಜಯಲಾಭ ಪಡೆಯದಿರಲು, ಆತನ ಜಯಲಾಭದ ಕಾರಣ ಸಂಶೋಧನೆಯನ್ನು ಮಾಡಿಕೊಂಡ ಕೌರವನು ಆತನಿಗೆ ಶಲ್ಯ ಮಹಾರಾಜನ ಸಾರಥ್ಯವನ್ನು ಹೊಂದಿಸಿಕೊಟ್ಟು, ಕರ್ಣಯುದ್ಧೋಪಕ್ರಮದಲ್ಲಿ ಕರ್ಣ ಶಲ್ಯರೊಳಗೆ ಪರಸ್ಪರ ವೈಷಮ್ಯಪೂರ್ವಕವಾದ ಉಪಾಲಂಭದ ಉಪಟಳ ಉಂಟಾಗತೊಡಗಿದರೂ ಸ್ವಪಕ್ಷ ಭದ್ರತಾವಿಚಾರ

ದಲ್ಲಿ ಜಾಗೃತನಾದ ಆ ಕೌರವನಿಂದ ಆ ಉಪಟಳದ ಉಪಶಮನವಾಗಿ ಕರ್ಣನು ಬವಣದಲ್ಲಿ ಬಲಿಷ್ಠನಾದ ಭೀಮನನ್ನು ಬೀಳ್ಗೊಳಿಸಿದ್ದಲ್ಲದೆ ಧರ್ಮರಾಜನನ್ನೂ ಧುರದಲ್ಲಿ ಸೆರೆಹಿಡಿದು ತಥಾಪಿ ಆತನಿಗೆ ತಾನು ಅಣ್ಣನಿದ್ದೇನೆ ಎಂಬ ಅಂತಸ್ಥವಾದ ಗುಪ್ತಪ್ರಜ್ಞೆಯಿಂದುದಯಿಸಿದ ಸಹೋದರ ವಾತ್ಸಲ್ಯ ಸಂಪೀಡೆಯಿಂದ ಅವನ ಸೆರೆಬಿಟ್ಟ ಮೇಲೆ ಅರ್ಜುನನು ತನ್ನ ಅಗ್ರಜ ಧರ್ಮರಾಜನಿಗೆ ಕರ್ಣನ ಮೂಲಕ ಸಂಭವಿಸಿದ್ದ ಸಂಕಷ್ಟವನ್ನು ಸಮೀಕ್ಷಿಸಿ ಕರ್ಣನ ವಿಚಾರದಲ್ಲಿ ಕೋಪ ತಾಳಿ, ಕೆರಳಿ, ಕಿಚ್ಚೆದ್ದು, ಅವನ ಪರಾಕ್ರಮಕ್ಕೆ ಪ್ರತೀಕಾರಾರ್ಥವಾಗಿ ಅವನನ್ನು ಕೊಲೆಗೈದೇ ತೀರುವೆನೆಂಬ ಪ್ರತಿಜ್ಞೆಮಾಡಿ ರಣರಂಗ ಪ್ರವೇಶಮಾಡಿ ಅಲ್ಲಿ ಪ್ರತಿಭಟಿಸಿದ ಕರ್ಣಪುತ್ರನೊಬ್ಬ ವೃಷಸೇನನೆಂಬವನನ್ನು ಕೊಂದು ಕಳೆಯಲು, ಆ ವೃಷಸೇನನ ಕಳೇಬರವನ್ನು ಕಣದಲ್ಲಿ ಕಂಡ ಕರ್ಣನು ಪುತ್ರಮೋಹಜನ್ಯ ದುಃಖಕ್ಕೆ ಸಿಲುಕಿ ಸಂತಪ್ತನಾದರೂ ಆ ದುಃಖದಿಂದ ಮೊದಲಿನಿಂದಲೂ ಬೆಳೆದುಬರುತ್ತಿದ್ದ ಅರ್ಜುನದ್ವೇಷಕ್ಕೆ ಪೋಷಣೆಯನ್ನೇ ಪಡೆದು ಪ್ರದ್ವೇಷ ಭಾವಪ್ರಚೋದನೆಯಿಂದ ಆ ಅರ್ಜುನನನ್ನೇ ಪ್ರತಿಭಟಿಸಿ ಅತ್ಯಂತೋತ್ಸಾಹ ಭರಿತನಾಗಿ ಯುದ್ಧ ಮಾಡುತ್ತಿರಲು ವೀರಾವೇಶಪೂರಿತವಾಗಿಯೂ ಸ್ವಾರಸ್ಯಪೂರ್ಣವಾಗಿಯೂ ಸಾಗುತ್ತಿದ್ದ ಈ ಸಮಸ್ಪರ್ಧಿಗಳಾದ ಕರ್ಣಾರ್ಜುನರ ಕಾಳಗದಲ್ಲಿ ರಥಯುದ್ಧ ಕೌಶಲ್ಯದಲ್ಲಿ ಕರ್ಣನಲ್ಲಿ ತೋರಿಬಂದ ಹೆಚ್ಚುಗಾರಿಕೆಯನ್ನು ಮೆಚ್ಚಿದ ಶ್ರೀಕೃಷ್ಣನು ತನ್ನ ಮುಗ್ಧಮನವನ್ನು ವಂಚಿಸದೆ ಕರ್ಣನನ್ನು ಪರಿತೋಷ ಪ್ರಕಟಣಾರ್ಥವಾಗಿ ಪ್ರಶಂಸಿಸಲು ಅದರಿಂದ ತನಗೆ ಮುಖಭಂಗವಾಯಿತೆಂಬ ಕಲ್ಪನೆಯಿಂದ ಅರ್ಜುನನು ಉತ್ಸಾಹಕುಂಠಿತನಾಗಿ ಉದ್ಯೋಗದಲ್ಲಿ ಉಲ್ಲಾಸ ಕಳೆದುಕೊಂಡು ತಟಸ್ಥನಾದಾಗ ಶ್ರೀಕೃಷ್ಣನು ಅವನಿಗೆ ಕರ್ಣಪ್ರಶಂಸೆಯ ಅಂತರ್ರಹಸ್ಯವನ್ನು ಬೋಧಿಸುವುದರ ಮೂಲಕ ಅವನ ನಿರುಲ್ಲಾಸವನ್ನು ನಿರಸನಮಾಡಿ ಅವನನ್ನು ಪುನರುತ್ತೇಜಿತನನ್ನಾಗಿ ಮಾಡಿದ ಮೇಲೆ ಕರ್ಣನು ಅಯೋಚಿತವಾಗಿಯೂ ಅಯಾಚಿತವಾಗಿಯೂ ತನ್ನ ಬತ್ತಳಿಕೆಯಿಂದ ಸಂಪ್ರಾಪ್ತವಾದ ಒಂದು ಸರ್ಪಶರವನ್ನು ಸ್ವಯಮುತ್ಸಾಹದಿಂದ ಅರ್ಜುನನಿಗೆ ಲಕ್ಷ್ಯಹಿಡಿ

ದಾಗ ತಲ್ಲಕ್ಷ್ಯಪರಿವರ್ತನಾರ್ಥವಾಗಿ ಶಲ್ಯನು ಕೊಟ್ಟ ಸಲಹೆಯನ್ನು ತಿರಸ್ಕರಿಸಿ ಅದನ್ನು ಬಿಡಲು ಆ ಶರವು ಅರ್ಜುನಪ್ರಘಾತದಲ್ಲಿ ಕೃತಾರ್ಥವಾಗದೆ ಅರ್ಜುನನಿಂದ ಭಗ್ನಾವಶಿಷ್ಟವಾಗಿ ಕರ್ಣನ ಬಳಿಗೇ ಮರಳಿ ಬಂದು ತನ್ನನ್ನು ಮರಳಿ ತೊಡುವಂತೆ ಆಗ್ರಹದಿಂದ ಯಾಚಿಸಿದಾಗ ಅದರ ಇತಿವೃತ್ತಾಂತವನ್ನು ವಿಚಾರಿಸಿಕೊಂಡ ಕರ್ಣನು, ಅದು ಕಾರಣಾಂತರದಿಂದ ಅರ್ಜುನನ ವಧಾರ್ಥವಾದ ಪ್ರತಿಜ್ಞೆ ಮಾಡಿಕೊಂಡಿದ್ದ ಒಂದು ಸರ್ಪವೆಂದು ತಿಳಿದುಬಂದುದರಿಂದ ಅದರ ಪ್ರಯೋಗದಿಂದ ತನ್ನ ಸ್ವಯಂ ಮರ್ಯಾದೆಗೆ ಮಾಲಿನ್ಯದ ಮುಚ್ಚಳವಾಗಬಹುದೆಂದು ವಿವೇಚಿಸಿ ಅದನ್ನು ತಿರಸ್ಕರಿಸಿದ್ದಕ್ಕೆ ಅದರ ಪುನರ್ಗ್ರಹಣಕ್ಕೆ ಅತ್ಯಾಗ್ರಹದಿಂದ ಸಲಹೆಯನ್ನಿತ್ತ ಶಲ್ಯನೂ ಕರ್ಣನಿಂದ ತಿರಸ್ಕೃತನಾಗಲು, ಆ ಶಲ್ಯನು ಕರ್ಣಸಾರಥ್ಯವನ್ನು ಧಿಕ್ಕಾರದಿಂದ ತಿರಸ್ಕರಿಸಿ ಆ ಕರ್ಣನ ಹಂಗು ಹರಿದು ಹೊರಟುಹೋದ ಮೇಲೆ ಕರ್ಣನು ಕಾಳಗದಲ್ಲಿ ಪರಿವಾರಜನದಿಂದ ವಿಗತನಾಗಿ ಬರಿದಾದ ಬತ್ತಳಿಕೆ, ತುಂಡಾದ ಧನುಸ್ಸು, ಮುರಿದು ಹೋದ ತೆಕ್ಕೆ, ಕಾಲ್ಮುರಿದ ಕುದುರೆಗಳು, ಕೀಲು ತಪ್ಪಿ, ಗಾಲಿ ಜಾರಿ, ಗಜಿಬಿಜಿಗೊಂಡ ರಥ ಇಂಥಿಂಥ ದುರವಸ್ಥೆಗಳಲ್ಲಿ ಸಿಲುಕಿದ್ದಲ್ಲದೆ ಕಡುವಾಗಿ ತಾಗಿದ ಕ್ರೂರ ಕಣೆಗಳಿಂದ ಗಾಯದಲ್ಲೆಲ್ಲ ಕೆನ್ನೀರು ಸೋರಿ, ಕಣದ ಕೆಸರೂ ಅದಕ್ಕೆ ಸೇರಿ ಕೊನೆಗಾತನೇ ರಥದಿಂದ ಕೆಳಕ್ಕೆ ಹಾರಿ ಮಂಡಿಯೂರಿ ಕದನದ ಕಳದಲ್ಲಿ ಕುಸಿದು ಚಡಪಡಿಸುತ್ತಿರುವ ತದ್ರಥವನ್ನು ಸಾಧ್ಯವಾದ ಸುವ್ಯವಸ್ಥೆಗೆ ಸರಿಪಡಿಸಿಕೊಳ್ಳುವರೆ ಅರ್ಜುನನನ್ನು ಕ್ಷಾತ್ರೋಚಿತ ಗೌರವನೀತಿಯಂತೆ ಕಿಂಚಿತ್ಕಾಲಾವಕಾಶವನ್ನು ಕೊಡಬೇಕೆಂದು ಗೌರವಯುಕ್ತವಾಗಿ ದೈನ್ಯತೆಯಿಂದ ಕೇಳಿಕೊಳ್ಳಲು, ಕರ್ಣನ ಇಂಥ ದಾರುಣ ಸ್ಥಿತಿಯಲ್ಲಿ ಅನುಕಂಪ ಪಡೆದ ಅರ್ಜುನನು ತನ್ನ ಅಂತಃಕರಣದಲ್ಲಿ ಕರ್ಣವಿಷಯಕವಾಗಿ ಅಂಕುರಿಸಿದ ಅವರ್ಣನೀಯವಾದ ಆದರಭಾವದ ಅನುಭವವನ್ನು ಶ್ರೀಕೃಷ್ಣನಲ್ಲಿ ನಿವೇದಿಸಿ ಆ ಕರ್ಣನ ವಾಸ್ತವ ವಿಚಾರವನ್ನು ತನಗೆ ತಿಳಿಸಬೇಕೆಂದು ಬೇಡಿಕೊಂಡದ್ದಕ್ಕೆ ಶ್ರೀಕೃಷ್ಣನು ಕರ್ಣನೊಡನೆ ಅರ್ಜುನನಿಗಿರುವ ರಕ್ತಸಂಬಂಧದ ರಹಸ್ಯವನ್ನು ಹೇಳದೆ ಆ ಮೊದಲು ಕರ್ಣನಿಂದ ನಡೆದಿದ್ದ

ಅಭಿಮನ್ಯುವಧಾಕಾರಣವಾದ ಪ್ರಘಾತ ಘಟನೆಯನ್ನು ಮಾತ್ರ ವಿವರಿಸಿದುದರಿಂದ ಅರ್ಜುನನಿಗೆ ಕರ್ಣನಲ್ಲಿ ಆದರಕ್ಕೆ ಬದಲಾಗಿ ದ್ವೇಷವೇ ಉಜ್ವಲಿಸಲು, ಆ ವೇಳೆಗೆ ಕರ್ಣನು ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಂಡು ಯುದ್ಧಕ್ಕೆ ಸಿದ್ಧನಾಗಿ ಅರ್ಜುನನು ನಿರ್ದಾಕ್ಷಿಣ್ಯವಾಗಿ ಸಂಪ್ರಯೋಗಿಸಿದ ಸುಶಕ್ತ ಶರಗಳಿಂದ ಕಟ್ಟಕಡೆಗೆ ಕಾಯದ ಕಸುವೆಲ್ಲ ಕಳೆದು, ಕೈಯ ಅಸ್ತ್ರಗಳೆಲ್ಲ ಅಳಿದು, ಕದನಕಣದಲ್ಲಿ ಕೆಳಗುರುಳಿ ಮತ್ತಲ್ಲಿ ನಿಶ್ಪ್ರಾಣದಿಂದ ನರಳಿ, ಅಸು ಅಡಗದೆ ಪೇಚುಪಡುತ್ತಿರಲು ಆ ದಿವಸ ಸೂರ್ಯಾಸ್ತದಅವಧಿಯೊಳಗೆ ಕರ್ಣಾವಸಾನವನ್ನು ಮಾಡಬೇಕಾದ ಅರ್ಜುನನ ಪ್ರತಿಜ್ಞೆಯು ಭಂಗಗೊಳ್ಳದಂತೆ ಅರ್ಜುನ ಮಾನರಕ್ಷಣಾದೀಕ್ಷಾಬದ್ಧನಾದ ಶ್ರೀಕೃಷ್ಣನು ಕಪಟತಂತ್ರ ಪ್ರಯೋಗಾತ್ ವಿಪ್ರವೇಷವನ್ನು ಧರಿಸಿ ಕರ್ಣನ ಕರ್ಣಕುಂಡಲಗಳನ್ನು ಯಾಚಿಸಿ ದಾನಶೂರನಾದ ಕರ್ಣನ ಔದಾರ್ಯಪೂರ್ವಕದ ತತ್ಕುಂಡಲ ದಾನವನ್ನು ಕೃತಜ್ಞತಾಪೂರ್ವಕವಾಗಿ ಪ್ರತಿಗ್ರಹಿಸಿ ಅವನ ಆ ಪುಣ್ಯ ಮಹಾಕೃತಿಯಿಂದ ಸಂತುಷ್ಟಿ ಪಡೆದು ಪ್ರಸನ್ನನಾಗಿ ತನ್ನ ಸಹಜ ಸುಂದರ ಸ್ವರೂಪವನ್ನೇ ಕರ್ಣನಿಗೆ ಪ್ರತ್ಯಕ್ಷ ಪ್ರಕಟಿಸಿ, ಅವನ ಸ್ವಾಮಿನಿಷ್ಠೆ, ಔದಾರ್ಯ, ರಣಚಾತುರ್ಯ, ಶೌರ್ಯ, ವೀರ್ಯೇತ್ಯಾದಿ ಗುಣಗಳನ್ನು ಶ್ಲಾಘಿಸಿ, ತನ್ನ ಮೆಚ್ಚುಗೆಯನ್ನು ಸೂಚಿಸಿ, ಕೊನೆಯಲ್ಲಿ ಅವನ ಅವಸಾನಪರ ಸಂತೋಷಪೂರ್ವಕವಾದ ಕೋರಿಕೆಯ ಮೇರೆಗೆ ಅರ್ಜುನನಿಂದ ಅಂಜನಾಸ್ತ್ರ ಪ್ರಯೋಗ ಮಾಡಿಸಿ ಅವನಿಗೆ ಮಂಗಲಕೀರ್ತಿಕರ ಮರಣವನ್ನು ಕೊಟ್ಟನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೩೪ ಶಲ್ಯಪರ್ವ ಪ್ರಸಂಗ

ವಿಧಿಯ ವಿಶೇಷ ಸತ್ತೆಯು ಸಂಚಾಲನೆಯಾಗುತ್ತಿರುವ ಈ ಕರ್ಮಪ್ರಪಂಚದಲ್ಲಿ ಸ್ವಸಂಕಲ್ಪಾನುಸಾರಣೆಯ ಸಂದರ್ಭ ಸಿಕ್ಕಿಯೆ ಸ್ವಕಾರ್ಯವನ್ನು ಸಾಧಿಸುವೆನೆಂಬ ಛಲಸಾಧನೆಯು ಸಲ್ಲದು. ಯಾಕೆ ಎಂದರೆ, ಒಂದೊಂದು ವೇಳೆ ಘನ ವಿಚಾರಶೀಲನಾದ ಮಹಾಪ್ರಾಜ್ಞನಿಗಾದರೂ ಅನುದ್ದಿಷ್ಟವಾದ ಅಸಂಕಲ್ಪಿತವಾದ ಅನಿರೀಕ್ಷಿತ ಸಂದರ್ಭ

ಗಳು ತಾವಾಗಿಯೇ ಒದಗಿಬಂದು ವಿಧಿನಿಯಮದ ವೈಚಿತ್ರ್ಯವು ಅನುಭವ್ಯವಾಗುತ್ತದೆ. ಇಂಥ ವಿಧಿವಿನಿಯಂತ್ರಣಕ್ಕೆ ಸೆರೆ ಸಿಲುಕಿದರೂ ಗತಿಗೆಡದೆ, ಮತಿಬಿಡದೆ ಪೌರುಷದಿಂದ ಉದ್ಯೋಗಶೀಲನಾಗಿರುವುದೇ ನ್ಯಾಯವಿಚಾರವಾದೀ ಜನಕ್ಕೆ ನಿಯಮವು. ದೈವತಂತ್ರ ನಿಬಂಧನೆಗೆ ಸಿಕ್ಕಿದ್ದರೂ ಪೌರುಷದಿಂದ ಕಾರ್ಯ ಸಾಧಿಸುವಾತನು ಸತ್ತುಹೋ ದರೂ ದೈವಚಿಂತನೆಯಿಂದ ನಿಸ್ತೇಜನಾಗಿ ಕಾರ್ಯಸಾಧಿಸದ ತಟ ಸ್ಥನು ಬದುಕಿಕೊಂಡದ್ದಕ್ಕಿಂತ ಮೇಲು. ಇದು ಸಹಜ ಗುಣ ದಿಂದಲೂ ಬಂಧುಮೋಹದಿಂದಲೂ ಪಾಂಡವಪ್ರೇಮಿಯಾಗಿ ಪಾಂಡವ ಸಹಾಯಕತ್ವದಲ್ಲಿಯೆ ಸಂಕಲ್ಪವುಳ್ಳವನಾಗಿ ತದುದ್ದೇಶ ದಿಂದಲೆ ಕುರುಕ್ಷೇತ್ರದ ಕಾಳಗಕ್ಕಾಗಿ ಬಂದಿದ್ದ ಶಲ್ಯಮಹಾರಾಜನು ವಿಧಿತಂತ್ರವಿಕ್ರಮಕ್ಕೆ ಸೆರೆಸಿಲುಕಿ ಪಾಂಡವ ವಿರುದ್ಧವಾಗಿ ಕೌರವ ಪಕ್ಷನಿಬದ್ಧನಾಗಿ ತತ್ಪರಿಣಾಮದಿಂದ ಕೌರವ ಸಹಾಯಾರ್ಥವಾಗಿ ಒಂದುಬಾರಿ ಕರ್ಣಸಾರಥ್ಯವನ್ನೂ ನಿರ್ವಹಿಸಿ ತದನುಭವಾತ್ ಆತ್ಮ ಗೌರವಕ್ಕೆ ಆಘಾತವಾದುದನ್ನು ಸಹಿಸದೆ ತತ್ಸಾರಥ್ಯ ಪರಿತ್ಯಜನೆ ಯಿಂದ ಸ್ವತಂತ್ರಭಟನಾಗಿ ಕೊನೆಗೆ ತಾನೇ ಸ್ವತಂತ್ರಯೋಧನಾಗಿ ಕೌರವ ಸಹಾಯಾರ್ಥಕ್ಕಾಗಿ ಅನಿವಾರ್ಯದಿಂದ ಸೇನಾನಾಯಕ ತ್ವದ ಪಟ್ಟವನ್ನು ವಹಿಸಿಕೊಂಡು ಪೌರುಷಾನ್ವಿತನಾಗಿ ಪಾಂಡವ ರೊಡನೆ ಹೋರಾಡಿ ಧರ್ಮರಾಜನನ್ನು ಪ್ರತಿಭಟಿಸಿದಲ್ಲಿ ಆತನ ಕರಾಳ ಖಡ್ಗಕ್ಕೆ ಬಲಿಯಾಗಿ ಸತ್ತನು ಎಂಬೀಕಥೆಯಿಂದ ಸಿಗುವ ಬೋ ಧಾಂಶವು.

೩೫ ಗಧಾಯುದ್ಧ ಪ್ರಸಂಗ

"ಪಡೆಯೋಳ್ಪಲ್ಲಿದನಾದೊಡೇನ್ ಪಾಪಾರಿಯಂ ಗೆಲ್ವನೇ" ಎಂಬ ಕವಿವಾಣಿಯು ಸತ್ಯತೆಯು ಈ ಪ್ರತ್ಯಕ್ಷ ಪ್ರಪಂಚದಲ್ಲಿ ನಡೆ ಯುವ ಅನೇಕ ಪ್ರಸಿದ್ಧ ಪುರುಷರ ಜೀವನ ಚರಿತ್ರೆಗಳ ಘಟನಾವಳಿ ಗಳಿಂದ ವೇದ್ಯವಾಗುತ್ತದೆ. ಪರಪೀಡನಾಕೃತಿಗಳಿಂದ ಪಾಪವನ್ನಾ ಚರಿಸಿದವನು ಸ್ವಶುಭಸಂಸ್ಥಾಪನೆಗಾಗಿ ಈ ವ್ಯಕ್ತಪ್ರಪಂಚದ ಯಾವ ವಿವಿಧವೈಭವಗಳನ್ನು ಸಾಧಿಸಿಟ್ಟುಕೊಂಡರೂ ತನ್ನ ಪಾಪ ಪರಿಣಾಮ

ದಿಂದ ಅಶುಭಾನುಭವದಿಂದಲೇ ಅವಸಾನ ಹೊಂದದೆ ಉಳಿಯನು. "ಮಾಡಿದ್ದುಣ್ಣೋ ಮಹಾರಾಯ" ಎಂಬ ರೂಢಿಯ ಗಾದೆಯು ತ್ರಿಕಾಲಾಬಾಧಿತ ಸತ್ಯಸೂಕ್ತಿಯೇ ಸರಿ. "ಪಾಪೀ ಪಾಪೇನ ಹನ್ಯತೇ" ಎಂಬ ಮಾತೂ ಸತ್ಯವೆಂದು ಸಂಗ್ರಾಹ್ಯವಾಗಬೇಕಾದ ಸೂಕ್ತಿಯೆ ಹೌದು. ಸಮಗ್ರ ವಿಶ್ವವ್ಯಾಪ್ತವಾಗಿರುವ ಕೀರ್ತಿ ಇದ್ದರೂ ಅನನ್ಯ ಲಭ್ಯ ಮಹಾಸಂಪತ್ತು ಸಂಗ್ರಹವಾಗಿದ್ದರೂ ಅತ್ಯುನ್ನತ ಪದವಿಪ್ರತಿಷ್ಠಿತನಾಗಿ ಮೆರೆವ ಮಹಾ ಆಢ್ಯತೆಯಿದ್ದರೂ ಮಹಿಮಾನ್ವಿತ ಗುರುಜನ ಸಹಾಯ, ಸಹಕಾರ ಸಂಪನ್ನನಾಗಿದ್ದರೂ ವ್ಯವಹಾರ ಕೌಶಲ್ಯ—ಶಾಸ್ತ್ರಜ್ಞಾನ—ಶಸ್ತ್ರ ಪಾಂಡಿತ್ಯ—ಘನಾಧಿಕಾರ ಇತ್ಯಾದಿ ಯಾವ ಬಲದಿಂದ ಕೂಡಿದವನಾಗಿದ್ದರೂ ಅಂಥವನು ಧೂರ್ತನಾಗಿ ದುಷ್ಕರ್ಮ ಮಾಡಿದವನಾಗಿದ್ದರೆ ಅದರ ಫಲಪ್ರಾಪ್ತಿಯಾಗಿ ಹದವಾದ ಹೊತ್ತಿನಲ್ಲಿ ಅವನಿಗೆ ದುಃಖಮಯ ದುರ್ಮರಣಾದ್ಯನಿಷ್ಠವು ದೊರೆಯಲಿಕ್ಕೇ ಬೇಕೆಂಬ ದೈವದ ದುರ್ನಿವಾರ್ಯವಾದ ಸತ್ತೆಯು ನಡೆದೇ ನಡೆಯುತ್ತದೆ. ಇದು ಕುರುಕ್ಷೇತ್ರದ ಯುದ್ಧದಲ್ಲಿ ತನ್ನಗುರು—ಬಂಧು—ಮಿತ್ರ—ಪುತ್ರ—ಸಹೋದರ—ಅನುಚರ—ಸೇನಾ ಮುಂತಾದ ಸಹಾಯಕ ವರ್ಗಸಾಕಲ್ಯದ ಸರ್ವನಾಶನದ ದುಃಖವನ್ನು ತಾನು ಅನುಭವಿಸಿದ ಸುಯೋಧನನು ಕಡೆಯಲ್ಲಿ ತಾನೊಬ್ಬನೇ ಪಾಂಡವರ ಪ್ರತಿಭಟನಾಗಿ ನಿಲ್ಲಬೇಕಾದ ಆವಶ್ಯಕತೆಗೆ ಸಿಲುಕಿದಾಗ ಕುರುಕ್ಷೇತ್ರದ ಯುದ್ಧಾರಂಭಪೂರ್ವದಲ್ಲಿ ಸಹಾಯ ಕರ್ತೃತ್ವದ ಭರವಸೆಯ ಭಾಷೆಯನ್ನು ತನಗೆ ಇತ್ತಿದ್ದ ಬಲರಾಮನ ಬರೋಣದಲ್ಲಿ ನಿರೀಕ್ಷಾಬದ್ಧನಾಗಿ ಆ ಬಲರಾಮಾಗಮನದೊಳಗೆ ತಾನು ಭೀಮನ ಪ್ರತಿಜ್ಞಾನುಸಾರವಾಗಿ ಹತನಾಗಿ ಹೋಗದಂತಾಗಬೇಕೆಂದು ಬಗೆದು ಆ ತನಕದ ಕಾಲಕ್ಷೇಪಕ್ಕಾಗಿ ಅಡಗಿಕುಳಿತುಕೊಳ್ಳುವುದಕ್ಕಾಗಿ ವೈಶಂಪಾಯನವೆಂಬ ಸರೋವರವನ್ನು ಆರಿಸಿ ಸಂಜಯನ ಮೂಲಕ ತನ್ನ ತಾಯಿ, ತಂದೆ, ಹೆಂಡತಿ ಇವರಿಗೆ ತನ್ನ ಕೊನೆಯ ಮಾತುಗಳನ್ನು ಹೇಳಿ ಕಳುಹಿಸಿ, ಕೃತಸಂಕಲ್ಪದಂತೆ ವೈಶಂಪಾಯನಕ್ಕಿಳಿದು ತಾನು ಸಿದ್ಧಿಸಿಟ್ಟುಕೊಂಡಿದ್ದ ಜಲಸ್ತಂಭನ ವಿದ್ಯಾಪ್ರಯೋಗದಿಂದ ಅಲ್ಲಿಯೇ ಗುಪಿತನಾಗಿದ್ದಾಗ ಅಲ್ಲಿಗೆ ಬಂದು

ತನಗೆ ಸೇನಾನಿತ್ವದ ಜವಾಬ್ದಾರಿಕೆಯನ್ನು ನೀಡಬಹುದೆಂದು ಉತ್ಸಾಹದಾಯಕ ಸಲಹೆಯನ್ನಿತ್ತ ಅಶ್ವತ್ಥಾಮನನ್ನೂ ಆ ಸುಯೋಧನನ್ನು ತಿರಸ್ಕರಿಸಿ ಕಾಲ ವಿಕ್ಷೇಪನಕ್ಕಾಗಿ ಆ ಕೊಳದೊಳಗೆ ಕುಳಿತಿರಲು ಇದನ್ನರಿಯದ ಪಾಂಡವರು ಭೀಮನೇ ಪ್ರಧಾನವಾಗಿ ಸುಯೋಧನನ ಪತ್ತೆಗಾಗಿ ಪರಿಶ್ರಮಪಟ್ಟು ಪ್ರಯೋಜನವಾಗದೆ ಭೀಮ ಪ್ರತಿಜ್ಞಾಭಂಗದ ದುರ್ದಶಾಪ್ರಾಪ್ತಿಯ ಸಂದೇಹಕ್ಕೆ ಸಿಕ್ಕಿಬಿದ್ದು ತದ್ಭೀತಿಗೆ ಬಲಿಯಾಗಿ ವಿಧಿವಿಚಿಂತನಾಸ್ಥಿತಿ ಸಂಬದ್ಧರಾಗಿರಲು ಸರೋವರಾಂತಸ್ಥ ಸುಯೋಧನನ ಗುಪ್ತಸ್ಥಿತಿಯ ಸೋವನ್ನು ಸಂಗ್ರಹಿಸಿದ ಭೀಮನ ಬೇಹುಕಾರರು ಆ ವಿಚಾರವನ್ನು ಭೀಮನಿಗೆ ಪ್ರಕಟಿಸಿದ್ದರಿಂದ ಅದು ಮಿಕ್ಕುಳಿದೆಲ್ಲರಿಗೂ ಪ್ರಕಟವಾಗಿ ಶ್ರೀಕೃಷ್ಣನಿಂದ ಕೂಡಿ ಪಾಂಡವರು ಆ ವೈಶಂಪಾಯನ ಸರೋವರದೆಡೆಗೆ ಸಾರಿ ಬಂದು ಜಲಸ್ಥನನ್ನು ಕೊಲೆಗೈಯಲಾಗದೆಂಬ ನ್ಯಾಯನಿಷ್ಠೆಯಿಂದ ಸುಯೋಧನನನ್ನು ಸರೋವರದಿಂದ ಮೇಲೆಬ್ಬಿಸುವ ಸಲುವಾಗಿ ಭೀಮನನ್ನುಳಿದು ಮಿಕ್ಕವರೆಲ್ಲರೂ ಅವನನ್ನುಪಚಾರಿಸುವ ಕಟೂಕ್ತಿಗಳನ್ನಾಡಿ ಪ್ರಚೋದಿಸಿದರೂ ಅವನು ಮೇಲೆ ಬಾರದಿರಲು, ಕೊನೆಗೆ ಭೀಮನೇ ಉತ್ತೇಜನೆಗೊಂಡು ಸುಯೋಧನನ ನೈಚ್ಯತಾ ನಿರೂಪಣೆಯಾಗುವಂಥ ಅವನ ದುಶ್ಚರಿತ್ರೆಯ ಕೆಲವು ದೂಷ್ಯವಿಚಾರಗಳನ್ನು ಉದ್ಘಾಷಿಸಿ ಅವನನ್ನು ಕೆರಳಿಸುವಂತೆ ಚುಚ್ಚುಮಾತುಗಳನ್ನಾಡಲು ಅದರಿಂದ ಅವನ ಮಾನಧನತ್ವಮಾನಸಿಕಕ್ಕೆ ಮಹಾ ಆಘಾತವಾದಂತಾಗಿ ಕೋಪೋದ್ದೀಪ್ತನಾಗಿ ಕೊಳ ಬಿಟ್ಟು, ತಳ ಬಿಟ್ಟು, ಮೇಲೆದ್ದು ಮುಂದೆ ಹಾಯ್ದು, ಗದಾಪಾಣಿಯಾಗಿ ಸಮರಸಿದ್ಧನಾದುದುದನ್ನು ಕಂಡು ಯುದ್ಧನ್ಯಾಯಾನುಸಾರವಾಗಿ ತಮ್ಮ ಪಕ್ಷದ ಯಾವನಾದರೊಬ್ಬನು ಮಾತ್ರ ಸುಯೋಧನನೊಡನೆ ಹೋರಾಡುವಂತೆ ಅವನಿಂದ ಆರಿಸಲ್ಪಡುವಂತೆ ಧರ್ಮರಾಜನು ಕ್ರಮನಿಬಂಧನೆ ಮಾಡಿದುದರ ಮೇರೆಗೆ ಭೀಮನೇ ಆರಿಸಲ್ಪಟ್ಟಾಗ ಭೀಮ ಕೌರವರೊಳಗೆ ಪರಸ್ಪರ ವಿರುದ್ಧ ಗದಾಯುದ್ಧ ಆರಂಭವಾದಾಗಲೇ ಆ ಯುದ್ಧಪ್ರದೇಶಕ್ಕೆ ಬಲರಾಮಾಗಮನವಾಗಿ ಕೌರವನ ಅಂದಿನ ಆ ದುಷ್ಪರಿಸ್ಥಿತಿಯ ದೈನ್ಯಾವಸ್ಥೆಯನ್ನು ತಿಳಿದು ಅನುಕಂಪನೆಯುಂಟಾಗಿ ಕೌರವನ ಆ

ಜನಪರಿವಾರಸಾಕಲ್ಯಶೂನ್ಯತೆಯ ದೈನ್ಯಾವಸ್ಥೆಗೆ ಪಾಂಡವಪ್ರತಾಪವೇ ಸಾಕ್ಷಾತ್ಕಾರಣವಾಗಿ ತೋರಿದರೂ ಅದೇ ಮುಖ್ಯ ಕಾರಣವಾಗಿರದೆ ಕೃಷ್ಣತಂತ್ರಪ್ರಯೋಗವೇ ಮುಖ್ಯ ಕಾರಣವೆಂದು ಸಾಧಾರವಾಗಿ ತರ್ಕಿಸಿ, ಅದರಿಂದ ಕೌರವಪರ ವಾತ್ಸಲ್ಯಭಾವಜನ್ಯವಾದ ಕೃಷ್ಣಪರ ಕೋಪವನ್ನು ತಾಳಿ ಕೃಷ್ಣನ ಮೇಲೆ ರೇಗಿಬೀಳಲು, ಶ್ರೀಕೃಷ್ಣನು ತನ್ನ ವಚನ ಕುಶಲಗಾರಿಕೆಯ ಚಾತುರ್ಯಪ್ರಯೋಗದಿಂದ ಅವನನ್ನು ಸಮಾಧಾನ ಸ್ಥಿತಿಗೆ ಇಳಿಸಿ ಅವನನ್ನು ಭೀಮ ಕೌರವರ ಯುದ್ಧಕ್ಕೆ ಸಾಕ್ಷಿಯಾಗಿ ತನ್ನ ಜತೆಗಾರಿಕೆಯಲ್ಲಿ ನೆಮ್ಮದಿಯಿಂದ ನಿಲ್ಲಿಸಿಕೊಂಡ ಮೇಲೆ ಭೀಮ ಕೌರವರಲ್ಲಿ ಗದಾಯುದ್ಧವು ಬಹುಭರದಿಂದ ಸಾಗುತ್ತಾ ಕೌರವನ ಗದಾಪ್ರಹಾರದಿಂದಾದ ತನ್ನ ತಲೆಯ ಪೆಟ್ಟಿನಿಂದ ಭೀಮನು ಮೂರ್ಛಿತನಾಗಿ ಮಹಿಗೊರಗಲು ಧರ್ಮರಾಜಾದ್ಯರು ದುಃಖಿಗಳಾದುದಕ್ಕೆ ಶ್ರೀಕೃಷ್ಣನು ಸಮಾಧಾನಗೊಳಿಸಿ, ಬಿದ್ದಿರುವ ಭೀಮನಿಗೆ ಬಲುಹುಕೊಟ್ಟು ಪುನಶ್ಚೇತನದಿಂದ ಭೀಮನು ಕೌರವನನ್ನು ಕೆಡೆಯುವಂತೆ ಪ್ರಚೋದಿಸಲು ಆ ಶ್ರೀಕೃಷ್ಣನ ಹಿತಸೂಚನಾನುಸರಣೆಯಿಂದ ಭೀಮನು ಕೌರವನ ತೊಡೆಯನ್ನು ಗುರಿಯಿಟ್ಟು ಹೊಡೆದು ನಿಪತನಗೊಳಿಸಿದಾಗ ಬಲರಾಮನು ಯುದ್ಧನ್ಯಾಯಬಾಹಿರವೆಂದು ವಿವೇಚ್ಯವಾಗುವ ಕೃಷ್ಣತಂತ್ರಕ್ಕೆ ಅಸಹ್ಯಪಟ್ಟು ವಿಹ್ವಲಮಾನಸನಾಗಿ ಅಲ್ಲಿಂದ ಹಂಗುಹರಿದು ಹೊರಟು ಹೋಗಲು ಇತ್ತ ಭೀಮನು ಬಿದ್ದ ಕೌರವನ ಕಿರೀಟವನ್ನು ಕಳಚಿ, ಒದೆದು, ಕಾಲಿಂದ ಒಗೆದು, ತನ್ನ ತತ್ಪೂರ್ವಕೃತ ಪ್ರತಿಜ್ಞೆಯ ಪೂರ್ಣಪಾಲನೆಯಾಯಿತೆಂಬ ಆತ್ಮತೃಪ್ತಿ ಆನಂದವನ್ನನುಭವಿಸುತ್ತಿದ್ದಲ್ಲಿ ಆ ಸೂರ್ಯಾಸ್ತ ವೇಳೆಯಲ್ಲಿ ಎಲ್ಲರೂ ಅರ್ಧಮೃತಾವಸ್ಥೆಗೆ ತಲ್ಪಿದ ಆ ಕೌರವನನ್ನು ಏಕಾಂಗಿಯನ್ನಾಗಿಯೇ ಅಲ್ಲಿಯೇ ಬಿಟ್ಟು ಹೊರಟು ಹೋಗಿರಲು ತದನಂತರ ಅಲ್ಲಿಗೆ ಬಂದು ಆತನ ಆ ದಾರುಣ ಸ್ಥಿತಿಯ ದುರ್ದೃಶ್ಯವನ್ನು ಕಂಡ ಅಶ್ವತ್ಥಾಮನು ಕೌರವಪರ ಸ್ವಾಮಿನಿಷ್ಠಾಭಾವಾಪನ್ನವಾದ ಸ್ನೇಹೋದ್ರೇಕವನ್ನು ತಾಳಿ ಆ ಕೌರವನ ಅಂತಿಮ ಆಶಾಪೂರ್ತಿಗಾಗಿ ಅವನ ಇಚ್ಛೆಯಂತೆ ಪಾಂಡವರ ತಲೆಗಳನ್ನು ತಂದೊಪ್ಪಿಸಬೇಕೆಂದು ಬಗೆದು ಕತ್ತಲೆಯಲ್ಲಿಯೇ ಅನ್ಯರಿಗೆ ಗೊತ್ತಾಗದಂತೆ ಪಾಂಡವರ ಶಿಬಿರವನ್ನು ಪ್ರವೇಶಿಸಿ,

ಭ್ರಮಾಜನ್ಯವಿಕಲ್ಪದಿಂದ ಪಾಂಡವರ ಮಕ್ಕಳೈವರನ್ನು ಪಾಂಡವರೇ ಎಂದು ಗ್ರಹಿಸಿ ಆ ಐವರ ಐದೂ ತಲೆಗಳನ್ನು ಕಡಿದು, ಅವುಗಳನ್ನು ಸಂಗ್ರಹಿಸಿ ತಂದು, ಕೌರವನಿಗೆ ಕಾಣಿಸಲು ಅವು ಪಾಂಡವರ ನಿಜಶಿರಗಳಲ್ಲವೆಂದು ಕೌರವನ ಸಮೀಕ್ಷೆಗೆ ಸ್ಪಷ್ಟವಾಗಿ ಗೋಚರಿಸಲು, ಅದಕ್ಕೆ ಕಳವಳಿಸಿ ಕೊನೆಗೆ ಕೌರವನು ಕಡು ನೊಂದು ಕಣ್ಣೀರಿಟ್ಟು ಕೆನ್ನೀರು ಬಸಿಯುತ್ತ, ಚೇತನ ಕುಸಿಯುತ್ತ, ಒಂಟಿಗನಾಗಿ, ಆ ಕಣದಲ್ಲಿ ಬಿದ್ದಿದ್ದು ಕ್ರಮೇಣ ಕಡೆಗಾಲವನ್ನು ಕಂಡು ಕಣ್ಮುಚ್ಚಿದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೩೬ ಸುಧನ್ವ ಕಾಳಗ ಪ್ರಸಂಗ

ಮನುಷ್ಯಸಮಾಜವೆಂಬ ಪರಮಾತ್ಮನ ಶರೀರದಲ್ಲಿ ವಿದ್ವತ್ಪ್ರಯೋಗ ವ್ಯವಹಾರ ಪ್ರಾಮುಖ್ಯತೆಯ ಬ್ರಾಹ್ಮಣರು ತಲೆಯಾದರೆ, ಬಲಪ್ರಯೋಗ ಪ್ರಾಮುಖ್ಯತೆಯ ಕ್ಷತ್ರಿಯರು ಹೆಗಲು. ಹೆಗಲು ತಲೆಯನ್ನಾಶ್ರಯಿಸಿಯೇ ತನ್ನ ಉದ್ಯೋಗ ನಿರ್ವಹಣೆಯಲ್ಲಿದ್ದರೆ ಮಾತ್ರ ಸಮಗ್ರ ಶರೀರಕ್ಕೆ ಸುವ್ಯವಸ್ಥೆಯು; ಅದಿಲ್ಲದಿದ್ದರೆ ಅವ್ಯವಸ್ಥೆಯು. ಹಾಗೆಯೇ ತಲೆಯು ಹೆಗಲಿನಿಂದಾಗಬೇಕಾಗಿರುವ ಸದುದ್ಯೋಗಕ್ಕೆ ಸಮುಚಿತ ಪ್ರೇರಕಸ್ಥಾನವಾಗಿರಬೇಕು. ಅಂದರೆ ಬಲಪ್ರಯೋಗ ಮುಖ್ಯವಾದ ಉದ್ಯೋಗ ಧರ್ಮ ಉಳ್ಳವನು ಸಾಕಷ್ಟು ವಿದ್ವತ್ಸಂಪನ್ನನಾಗಿದ್ದು ವಿಚಾರಶೀಲನೂ ನ್ಯಾಯಾನ್ಯಾಯಗಳನ್ನು ಸರಿಯಾಗಿ ವಿಮರ್ಶೆ ಮಾಡುವ ಪ್ರಾಮಾಣಿಕತೆಯ ಸುಬುದ್ಧಿಯುಳ್ಳ ಸದ್ಗುಣಿಯೂ ಆಗಿರಬೇಕು. ಇಂಥ ವಿಚಾರಶೀಲನಾದ ಸದ್ಗುಣಿಯ ವ್ಯವಹಾರಕ್ರಮವು ಐಹಿಕಜೀವನವ್ಯಾಪಾರಕ್ಕಾಗುವ ಧನ, ದಾರಾ, ಪುತ್ರ, ಕ್ಷೇತ್ರಾದಿ ಸಂಪಾದನೆಯ ದೃಷ್ಟಿಯಿಂದ ಲಾಭದಾಯಕವಲ್ಲವೆಂದು ತೋರಿದರೂ ಶ್ರೀಹರಿಯನುಗ್ರಹ ಸಂಪಾದನಾದೃಷ್ಟಿಯಿಂದ ಮಹಾಲಾಭದಾಯಕವಾದದ್ದೇ ಸರಿ. ಇದು ಪಾಂಡವರು ನಡೆಸುತ್ತಿದ್ದ ಅಶ್ವಮೇಧದ ಅಂಗವಾದ ದಿಗ್ವಿಜಯ ಯಾತ್ರೆಯಲ್ಲಿ ಅರ್ಜುನನು ಬೃಹತ್ಸೇನಾ ಬಲಸಹಿತನಾಗಿ ಹಲವು ರಾಷ್ಟ್ರಗಳ ಮೇಲೆ ಹಲ್ಲೆ ನಡೆಸಿ ಅಲ್ಲಲ್ಲಿಯ ಅಧಿಕಾರಿಗಳಲ್ಲಿ ಕೆಲವರ ಶರಣುಭಾವಕ್ಕೆ ಒಲಿದು, ಕೆಲ

ವರನ್ನು ಯುದ್ಧದಲ್ಲಿ ಗೆಲಿದು, ಕಪ್ಪ-ಕಾಣಿಕೆಗಳನ್ನು ಸುಲಿದು, ತನಗೆ ಮಿಗಿಲಾದ ಮಹಾ ಬಲಶಾಲಿಗಳಾದ ಮಹಿಪರು ಮಹಿಯಲ್ಲಿರಲಿಕ್ಕಿಲ್ಲ ವೆಂಬ ದರ್ಪದಿಂದ ಬಲಿತು, ಚಂಪಕಾವತಿ ರಾಷ್ಟ್ರವನ್ನು ಪ್ರವೇಶಿಸಿದಾಗ ಅಲ್ಲಿಯ ಅರಸನಾದ ಹಂಸಧ್ವಜನು ಅರ್ಜುನನನ್ನು ಪ್ರತಿಭಟಿಸುವುದರ ಪ್ರಯೋಜನದಿಂದ ಶ್ರೀಕೃಷ್ಣಸಂದರ್ಶನ ಪುಣ್ಯಲಾಭವೊದಗಿ ಶುಭ ಪ್ರಾಪ್ತಿಸುವುದೆಂಬ ಸುವಿವೇಚನಾಪೂರ್ವಕವಾದ ಸದುದ್ದೇಶದಿಂದ ಯುದ್ಧಸಿದ್ಧತೆಗಳನ್ನು ಮಾಡಿರಲು ಅವನ ಸತ್ಪುತ್ರಾಗ್ರೇಸರನಾದ ಸುಧನ್ವನು ಪಿತೃಪ್ರೀತ್ಯರ್ಥದ ಪುಣ್ಯಚರಿತನ್ಯಾಯನಿಷ್ಠೆಯಿಂದಲೂ ರಾಷ್ಟ್ರಭದ್ರತೆಗೆ ಭಂಗ ಬರಬಾರದೆಂಬ ರಾಜಕೀಯ ನ್ಯಾಯದಿಂದಲೂ ತನ್ನ ಕ್ಷಾತ್ರೋಚಿತ ವೀರಕರ್ಮ ಧರ್ಮದಿಂದ ಅರ್ಜುನ ಗರ್ವಭಂಗವಾಗುವುದರ ಪರಿಣಾಮವಾಗಿ ಶ್ರೀಕೃಷ್ಣನೇ ಬಂದೊಲಿದು ತನ್ನ ಹಾಗೂ ಸಮಸ್ತರ ಶುಭವಾಗುವುದೆಂಬ ವಿಶ್ವಾಸದಿಂದಲೂ ಅರ್ಜುನ ಪ್ರತಿಭಟನೆಗೆ ತನ್ನ ಪಕ್ಷದಿಂದ ತಾನೇ ಪ್ರಥಮ ಯೋಧನಾಗುವಂತೆ ತನ್ನ ತಂದೆಯಿಂದ ರಣವೀಳ್ಯವನ್ನು ಪಡೆದು ಯುದ್ಧಸನ್ನದ್ಧನಾಗಿ ಸಂಪ್ರದಾಯದಂತೆ ತಾಯಿ ತಂಗಿಯರಿಂದ ಶುಭಾಶೀರ್ವಾದ ಆದೇಶಾದಿಗಳನ್ನು ಪಡೆದು, ಅಷ್ಟಾಗುವಾಗ, ಪತಿಯಿಂದ ಸಂತಾನೋತ್ಪತ್ತಿ ಹೇತುಕವಾದ ಸುರತಸುಖ ಸಂಭೋಗಪ್ರಾಪ್ತಿಗೆ ಅದೊಂದೇ ಸಮಯ ಉಳಿದದ್ದೆಂದು ತಿಳಿದು ರತ್ಯಾಕಾಂಕ್ಷಾಪ್ರಪೀಡಿತಾವಸ್ಥೆಯಿಂದ ಅತ್ಯಾಗ್ರಹದಿಂದ ತನ್ನನ್ನು ನಿರ್ಬಂಧಿಸಿದ ತನ್ನ ನಿಜ ಸತಿಯಾದ ಪ್ರಭಾವತಿಯೊಡನೆ ಕಿಂಚಿತ್ಕಾಲ ಕಾಮಕ್ರೀಡಾಮಗ್ನನಾಗಿದ್ದುದರಿಂದ ಅವನಿಂದ ಸಮಯಕ್ಕೆ ಸರಿಯಾಗಿ ಸಮರರಂಗಕ್ಕೆ ಸೇರಿಕೊಳ್ಳಲಾಗದ ಅಪರಾಧವು ಸಂಭವಿಸಿ, ಅಂಥ ಅಪರಾಧಕ್ಕೆ ತಕ್ಕ ಶಿಕ್ಷಾವಿಧಿಯೆಂದು ಮೊದಲೇ ನಿರ್ಣಯವಾಗಿದ್ದುದರ ಮೇರೆಗೆ ಅವನು ತಪ್ತತೈಲ ಕಟಾಹಕ್ಕೆ ಎಸೆಯಲ್ಪಟ್ಟರೂ ಅವನು ಅಂತರಂಗದಲ್ಲಿ ಸುಪ್ರತಿಷ್ಠಿತವಾದ ಭಗವದ್ಭಕ್ತಿಭಾವವಿಟ್ಟುಕೊಂಡಿದ್ದರಿಂದ ಆ ಬಾಹ್ಯದ ಬೆಂಕಿಯ ಬಾಧೆಯಿಂದ ಯಾವ ಹಾನಿಯನ್ನೂ ಪಡೆಯದೆ ತತ್ಕ್ರೂರ ಶಿಕ್ಷೆಯಿಂದ ಸುಖಾದುತ್ತೀರ್ಣನಾಗಿ ಸಮಸ್ತ ಸಜ್ಜನ ಸುಪ್ರಶಂಸನೀಯನಾಗಿ ಮುಂಬರಿದು ರಣದ ಕಣದಲ್ಲಿ ವೀರಾವೇಶ

ಸಂಪೂರಿತ ಸಮರಚಾತುರ್ಯದಿಂದ ಮೆರೆದು ಅರ್ಜುನನ ಸೇನಾ ವ್ರಾತಕ್ಕೆ ನಾಶನವನ್ನು ಕರೆದು, ಮತ್ತವನ ಗರ್ವದ ಗೊಂಡೆಯನ್ನು ಹರಿದು ತನ್ನ ಬಾಣಪ್ರಯೋಗ ಲೇಖನಿಯಿಂದ ಅರ್ಜುನ ಸಾರಥಿಯ ಶಿರಚ್ಛೇದನ ಕೃತಿಯನ್ನು ಬರೆದು ಅರ್ಜುನನ ರಥವನ್ನೇ ನುಚ್ಚು ನೂರಾಗಿ ಮುರಿದು ಬಲಿಷ್ಠ ಬಾಣಗಳಿಂದ ಅವನನ್ನು ಇರಿದು ಬೀಳ್ಗೆಡಹಿ, ಪುನಃ ಅವನನ್ನು ಮೂದಲೆಯ ಮಾತುಗಳಿಂದ ಜರಿದು ಶ್ರೀಕೃಷ್ಣನನ್ನು ಸ್ವಸಹಾಯಕ್ಕಾಗಿ ಕರೆಯುವಂತೆ ನಿರ್ಬಂಧಪಡಿಸಲು ಕೊನೆಗೆ ಸುಧನ್ವನಿಂದ ಸೋತುಹೋದ ಅರ್ಜುನನು ಭಕ್ತಿಪೂರ್ವಕ ವಾದ ಪ್ರಾರ್ಥನೆಯಿಂದ ಶ್ರೀಕೃಷ್ಣನನ್ನು ತರಿಸಿ, ಅವನನ್ನು ತನ್ನ ಸಾರಥ್ಯದಲ್ಲಿ ಸಂಯೋಜಿಸಿ ತನ್ನ ಪ್ರತಿಜ್ಞಾಪೂರ್ವಕವಾದ ಬಾಣ ತ್ರಯಗಳ ಪ್ರಯೋಗದಿಂದ ಸುಧನ್ವನನ್ನು ಕೊಂದನಾದರೂ ಅಲ್ಲಿ ಬಂದಿದ್ದ ಶ್ರೀಕೃಷ್ಣನು ಸುಧನ್ವನು ಜನ್ಮಸಾಫಲ್ಯವನ್ನು ಸಿದ್ಧಿಸಿಕೊಂಡ ಒಬ್ಬ ಧನ್ಯ ಪುರುಷನೇ ಸರಿ ಎಂದು ಪ್ರಶಂಸಿಸಿ, ಅವನ ಯಶಃಶರೀರ ವನ್ನು ಉಳಿಸಿ, ಬೆಳೆಸಿ ಅರ್ಜುನನ ಗರ್ವವನ್ನು ನಿಲಿಸಿ, ಅಳಿಸಿ ಶುಭ ವನ್ನು ಮಾಡಿದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೩೭ ಪ್ರಮೀಳಾ ಸಂಧಾನ ಪ್ರಸಂಗ

ಲೋಕದಲ್ಲಿ ಸ್ತ್ರೀ ಪುರುಷರೊಳಗೆ ಇರುವ ಪರಸ್ಪರ ಭೇದಕ್ಕೆ ಪ್ರತ್ಯಕ್ಷವಾಗಿರುವ ಶಾರೀರಿಕ ರಚನಾ ಲಕ್ಷಣ ಭೇದದ ಪ್ರಾಕೃತಿಕ ಲಕ್ಷಣವೇ ದೃಷ್ಟಾಂತವು. ಹಾಗೆಯೇ ಮಾನಸಿಕ ಅಥವಾ ಬೌದ್ಧಿಕ ಲಕ್ಷಣ ರೀತ್ಯಾ ಸ್ತ್ರೀಪುರುಷರ ಪರಸ್ಪರ ಭೇದವನ್ನು ಅಲ್ಲಗಳೆಯುವುದು ಅಸಾಧ್ಯವೇ ಸರಿ. ಸ್ತ್ರೀಯಲ್ಲಿ ಪುರುಷನದ್ದಕ್ಕಿಂತ ಅಧಿಕವಾದ ಶಾರೀ ರಿಕ ವರ್ಣ, ಆಕಾರ, ಗತಿ ಇತ್ಯಾದಿ ಸೌಂದರ್ಯ ವೈಶಿಷ್ಟ್ಯವೂ ಕಂಠ ಧ್ವನಿಮಾಧುರ್ಯವೂ ತತ್ಪ್ರಭಾವಾತ್ ಪುರುಷಾಕರ್ಷಕವಾದ ನೈಸ ರ್ಗಿಕ ಗುಣವಿಶೇಷವೂ ಪ್ರತ್ಯಕ್ಷಾವಗಾಹ್ಯವಾದ ಪ್ರಾಕೃತಿಕ ಲಕ್ಷಣ ವಾಗಿರುವುದರಿಂದ ಸ್ತ್ರೀಯರು ಸಮಸ್ತ ವಿಚಾರದಲ್ಲಿಯೂ ಪುರುಷರ ಸರಿಸಮಾನರೇ ಎಂಬ ವಿಕಲ್ಪಾತ್ಮಕ ತೀರ್ಮಾನ ಮಾಡದೆ ಅವರು ಪುರುಷರನ್ನು ಹೊಂದಿಕೊಂಡಿರಬೇಕಾದ ಹದವುಳ್ಳವರೆಂದು ಸಾಧಾರ

ವಾಗಿ ವಿವೇಚಿಸಬಹುದು. ಇಂಥ ವಿಚಾರದಿಂದ ಪುರುಷನು ತನ್ನ ಪ್ರಾಬಲ್ಯ ಪ್ರಯೋಗದಿಂದ ಸ್ತ್ರೀಯನ್ನು ತಾತ್ಸಾರ ಗೈದು ಅವಳನ್ನು ತನ್ನ ಸತ್ತೆಯೊಳಗೆ ತುರುಕಿಸಿ ತನ್ನದ್ದೇ ಆಗಿರುವ ಏಕಪಕ್ಷೀಯ ಅಭಿಪ್ರಾಯ, ಅಭಿರುಚಿಗಳಿಗೆ ಅವಳನ್ನು ಬಲವಂತಿಕೆಯಿಂದ ಸೆಳೆದು ನಿರ್ಬಂಧಿಸಿ, ತನ್ನ ಅಧೀನತೆಯ ಅಡಿಯಾಳನ್ನಾಗಿ ಮಾಡಿಟ್ಟುಕೊಳ್ಳ ತಕ್ಕದ್ದೆಂದು ತಾತ್ಪರ್ಯವಲ್ಲ. ಯಾಕೆಂದರೆ ಆಕೆಗೂ ಸಾರಾಸಾರ ವಿವೇಚನಾತ್ಮಕ ಬುದ್ಧಿಕೌಶಲ್ಯ, ವಿದ್ಯಾಗ್ರಹಣ ಶಕ್ತಿ, ಪಾಪಪುಣ್ಯ ವಿವೇಕ, ಜ್ಞಾನ, ಪಾಂಡಿತ್ಯ, ಧರ್ಮಪ್ರಜ್ಞೆ ಇಂಥವುಗಳಲ್ಲಿ ಸ್ವತಂತ್ರ ಯೋಗ್ಯತೆ ಇದೆ ಎಂಬುದು ಸ್ಪಷ್ಟವು. ಇಂಥ ಅವಳ ಸ್ವಾತಂತ್ರ್ಯದ ಮೇಲೆ ಪುರುಷನು ಸ್ವಾಧಿಕಾರದ ಹಲ್ಲೆ ಮಾಡಿದರೆ ಅದು ಅವನ ಅನೈತಿಕತೆಯ, ಅಧಾರ್ಮಿಕತೆಯ ಅಸಾಧು ವ್ಯವಹಾರವೇ ಸರಿ. ಲೋಕದಲ್ಲಿ ಕೆಲವು ಅಸಾಧಾರಣ ಸಂದರ್ಭಗಳಲ್ಲಿ ಆವಶ್ಯಕತೆ ಒದಗಿದಾಗ ರಾಷ್ಟ್ರಪಾಲನ, ರಣೋದ್ಯೋಗ ನಿರ್ವಹಣ ಇತ್ಯಾದ್ಯನೇಕ ಮಹೋದ್ಯೋಗಗಳಲ್ಲಿ ಸ್ತ್ರೀಯರು ಪುರುಷರಿಗಿಂತ ಮೇಲೆನಿಸಿದ್ದೂ ಉಂಟು. ಸಾರಾಂಶತಃ ಪುರುಷನು ಸ್ತ್ರೀಯನ್ನು ಕೀಳೆಂದು ಕಡೆಗಣಿಸದೆ, ಅವಳ ತ್ರಾಣ ಮಾನಾದಿಗಳಿಗೆ ಯಥೋಚಿತ ಗೌರವವನ್ನಿತ್ತು ಮನ್ನಿಸುತ್ತಲೂ, ತಥಾಪಿ ಸ್ತ್ರೀಯೂ ತನಗೆ ಪುರುಷನ ಹಂಗಿಲ್ಲವೆಂಬ ವಿಚಾರಶೈಥಿಲ್ಯದ ಹುಚ್ಚು ಹುಮ್ಮಸಕ್ಕೆ ಹೊಂದಿಕೊಂಡಿರದೆಯೂ ಸ್ತ್ರೀ ಪುರುಷರು ನ್ಯಾಯಬದ್ಧವಾದ ಅನ್ಯೋನ್ಯ ಅನುಬಂಧವನ್ನು ವ್ಯವಸ್ಥೆ ಮಾಡಿಕೊಂಡಿರಬೇಕಾದುದೇ ಮನುಷ್ಯ ಸಮಾಜದ ಯೋಗಕ್ಷೇಮದ ನ್ಯಾಯನಿಬಂಧನೆಗಳಲ್ಲಿ ಮುಖ್ಯವು. ಇದು ಪ್ರಜೆಗಳೆಲ್ಲರೂ ಸ್ತ್ರೀಯರೇ ಆಗಿದ್ದು ಪ್ರಭು, ಮಂತ್ರಿ, ಪುರೋಹಿತ, ಚಮೂಪತಿ, ಕೋಶಾಧ್ಯಕ್ಷ ಇವರೆಲ್ಲರೂ ಸ್ತ್ರೀಯರೇ ಇದ್ದ ಸ್ತ್ರೀರಾಜ್ಯವೆಂಬ ಕೇರಳ ರಾಜ್ಯದಲ್ಲಿ ಅಶ್ವಮೇಧದ ಕಾರ್ಯ ನಿಯಮಾನುಸರಣೆಯಿಂದ ದಿಗ್ವಿಜಯ ಯಾತ್ರೆ ಕೈಗೊಂಡಿದ್ದ ಅರ್ಜುನನು ಪ್ರವೇಶಿಸಿದಾಗ ಅಲ್ಲಿಯ ಮಹಾರಾಣಿಯಾಗಿ ಮೆರೆಯುತ್ತಿದ್ದ ಪ್ರಮೀಳಾ ಎಂಬಾಕೆಯು ಆ ಅರ್ಜುನನನ್ನು ಪ್ರತಿರೋಧಿಸಿ ತನ್ನ ಸ್ತ್ರೀ ಸೇನಾ ಸಮುದಾಯ ಸಹಿತಳಾಗಿ ಸಮರ ಸನ್ನದ್ಧಳಾಗಿ ನಿಂದು ಸಾಂಪ್ರದಾಯಿಕ ಸಮರದಲ್ಲಿ

ಪರಾಕ್ರಮ ಪ್ರದರ್ಶಿಸಿ ತನ್ನನ್ನು ಸೋಲಿಸಿಯೋ ಅಥವಾ ಸ್ಮರಕೇಳೀ ವಿಲಾಸ ಭೋಗದಿಂದ ತನ್ನನ್ನು ತೃಪ್ತಿಗೊಳಿಸಿಯೋ ಈ ಉಭಯ ರೀತಿಗಳಲ್ಲಿ ಐಚ್ಛಿಕವಾದುದೊಂದನ್ನು ತನಗೆ ಹೊಂದಿಸಿದಲ್ಲದೆ ಅನ್ಯಥಾ ತಾನು ಶರಣಾಗತಳಾಗುವವಳಲ್ಲವೆಂಬ ತನ್ನ ನಿಶ್ಚಿತವನ್ನು ತಿಳಿಸಲು, ಅರ್ಜುನನು ಪರಾಕ್ರಮ ಪ್ರದರ್ಶಿಸುವ ರೂಢ ರಣವನ್ನೇ ಒಡಂಬಟ್ಟು ಆ ಪಾರ್ಥ ಪ್ರಮೀಳೆಯಲ್ಲಿ ಕಡು ಕಾಯ್ಪಿನ ಕದನವು ಸಂಘಟಿಸಿ ತತ್ಕದನದಲ್ಲಿ ಕಿಂಚಿತ್ಕಾಲ ಸೋಲು ಗೆಲವುಗಳ ನಿರ್ಣಯ ಸಿಗದೆ ವೃಥಾ ಕಾಲಹರಣವಾಗುತ್ತಿರುವುದನ್ನು ತಿಳಿದಾ ಪಾರ್ಥನು ಕಾಠಿಣ್ಯಾತಿರೇಕದಿಂದ ಆಕೆ ಕೋಮಲೆ ಅಥವಾ ಅಬಲೆ ಎಂಬುದರಲ್ಲಿ ದಯೆ, ದಾಕ್ಷಿಣ್ಯಾದಿ ಲಕ್ಷ್ಯವಿಡದೆ ಆಕೆಯನ್ನು ಕೊಲ್ಲಬೇಕೆಂಬ ಕಡು ಉಗ್ರತೆಯಿಂದ ಕ್ರೂರ ಕಣೆಯೊಂದನ್ನು ಕೈಗೊಂಡು ಗುರಿ ಹಿಡಿದಾಗ ಅಪ್ರಕಟದ ಅಮರರ ಅಗೋಚರ ತಂತ್ರದಿಂದ ಅಕಸ್ಮಾತ್ ಅಶರೀರವಾಣಿಯೊಂದು ಅವಗಾಹ್ಯವಾಗಿ ತತ್ಪ್ರಯುಕ್ತತೆಯಿಂದ ಪ್ರಮೀಳಾ ಪ್ರಘಾತಕವಾದ ತನ್ನ ಪ್ರತಾಪೋದ್ಯೋಗವನ್ನು ವಿರಾಮ ಗೈದು ತನ್ನ ದಿಗ್ವಿಜಯ ಯಾತ್ರೆಯ ಪರಿಸಮಾಪ್ತಿಯ ಅನಂತರ ಅರ್ಥಾತ್ ಅಶ್ವಮೇಧದ ಮುಗಿತಾಯದ ಮೇಲೆ ಆಕೆಯನ್ನು ತನ್ನ ಪತ್ನಿಯನ್ನಾಗಿ ಪಡೆವೆನೆಂಬ ಭರವಸೆಯ ಭಾಷೆಯನ್ನು ಇತ್ತು, ಆಕೆ ಅದಕ್ಕೆ ಅನುಮತಿ ಇತ್ತು, ಪಾರ್ಥ ಪ್ರಮೀಳೆಯರ ಪರಸ್ಪರ ವಿರುದ್ಧ ವ್ಯವಹಾರವು ಸಮಾಪ್ತಿಗೊಂಡು, ಬದಲಾಗಿ ಪರಸ್ಪರ ಪ್ರೇಮಭಾವ ಪ್ರಬಂಧಾತ್ಮಕವಾದ ಸಂಧಾನವೇ ಸಂಘಟಿಸಿ ಸಂತುಷ್ಟ ಮನಸ್ಕ ಪ್ರಮೀಳಾಸಂದತ್ತ ರತ್ನ ಮೌಕ್ತಿಕಾದ್ಯನೇಕ ಅನರ್ಘ್ಯ ಸುವಸ್ತು ಸಂಗ್ರಹೀತ್ರವಾದ ಅರ್ಜುನನು ತನ್ನ ಅತಃಪರ ಕಾರ್ಯಕ್ರಮಬದ್ಧ ಲಕ್ಷ್ಯದಿಂದ ಅಲ್ಲಿಂದ ಮುಂಬರಿದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೩೮ ಬಭ್ರುವಾಹನ ಕಾಳಗ ಪ್ರಸಂಗ

ಅಭಿಮಾನ ಮತ್ತು ಅಹಂಕಾರ ಈ ಎರಡು ಪರಸ್ಪರ ವ್ಯತ್ಯಸ್ತ ಗುಣಗಳು. ಅಭಿಮಾನವು ಪ್ರಗತಿಸಾಧನೆಗಾಗುವ ಸಹಕಾರೀ

ಸದ್ಗುಣವಾದರೆ ಅಹಂಕಾರವು ದುರ್ಗತಿ ಸಾಧನೆಗಾಗುವ ಪೋಷಕ ದುರ್ಗುಣವು. ದೇಶಾಭಿಮಾನ, ಧರ್ಮಾಭಿಮಾನ, ಕುಲಾಭಿಮಾನ, ಉದ್ಯೋಗಾಭಿಮಾನ, ಆತ್ಮಾಭಿಮಾನ ಇಂಥವುಗಳು ಬೇರೆಬೇರೆ ಸಂದರ್ಭಗಳಲ್ಲಿ ಆಯಾಯ ಸಂದರ್ಭೌಚಿತ್ಯದಿಂದ ಸದ್ಗುಣಗಳೆಂದು ಗ್ರಾಹ್ಯವೇನೋ ಹೌದು. ಆದರೆ ಅಹಂಕಾರವು ಸುತರಾಂ ಸಂತ್ಯಜನೀಯ ದುರ್ಗುಣವು. ಅಹಂಕಾರ ಸಂಯುಕ್ತವಾದ ಅಭಿಮಾನವೂ ಅಧೋಗತಿಯನ್ನುಂಟುಮಾಡುವುದರಲ್ಲಿಯೇ ಪರಿಣಮಿಸುವುದು. ಸ್ವಗೌರವ ಸಂರಕ್ಷಣಾಲಕ್ಷ್ಯಸಂಯುಕ್ತನಾಗಿರುವ ಕಾರ್ಯಪ್ರವೃತ್ತನು ಅಥವಾ ಆತ್ಮಾಭಿಮಾನ ಪೂರ್ವಕವಾಗಿ ತನ್ನದೊಂದು ಕಾರ್ಯ ಸಾಧಿಸುವಾತನು ಅನ್ಯ ಗೌರವ ಘಾತದ ಕೃತಿಚಾಲಕನಾದರೆ ಆತನದ್ದದು ಅಹಂಕಾರ ವೃತ್ತಿಯೇ ಆಗುವುದು. ಹೆರವರ ಗೌರವವನ್ನು ಭಂಗಿಸುವ ದುರುದ್ದೇಶ ಪೂರಿತವಾದ ವಿಘಾತುಕ ಕೃತಿಯು ಸ್ವಗೌರವವನ್ನು ಸಂರಕ್ಷಿಸುವುದರ ಬದಲಾಗಿ ಸ್ವಗೌರವ ಸಂಘಾತದ ಸಂದರ್ಭವನ್ನೇ ಸಾಧಿಸುವುದು. ಆದುದರಿಂದ ವಿಚಾರ ವಾದಿಯಾಗಿರುವ ಗೌರವಶೀಲನು ಅನ್ಯರ ಗೌರವವನ್ನು ಭಂಗಿಸುವ ಗರ್ವಬುದ್ಧಿಯ ದುರಹಂಕಾರಿಯಾಗದಂತೆ ಎಚ್ಚರವಿಟ್ಟುಕೊಳ್ಳಬೇಕು. ಇದು ಅರ್ಜುನನು ತನ್ನ ಅಶ್ವಮೇಧದ ಕಾರ್ಯನಿಯಮಾನುಸಾರವಾದ ದಿಗ್ವಿಜಯ ಯಾತ್ರೆಯಲ್ಲಿ ಮಣಿನಗರವನ್ನು ಪ್ರವೇಶಿಸಿದಾಗ ಅಲ್ಲಿಯ ರಾಜನಾಗಿದ್ದ ಯುವಕ ಬಭ್ರುವಾಹನನು ಅವನನ್ನು ನಿರೋಧಿಸಿ ಪ್ರತಿಭಟನೆಯ ಯುದ್ಧಸನ್ನಾಹ ಮಾಡಿರಲು ಬಭ್ರುವಾಹನನ ತಾಯಿಯಾದ ಚಿತ್ರಾಂಗದಾದೇವಿಯು ಆ ತನಕ ಗೋಪ್ಯವಾಗಿದ್ದ, ಅರ್ಜುನನು ಬಭ್ರುವಾಹನನ ತಂದೆ ಎಂಬ ರಹಸ್ಯವನ್ನು ತಿಳಿಸಿ ತದರ್ಜುನನನ್ನು ತಮ್ಮ ಅರಮನೆಗೆ ಆದರಪೂರ್ವಕ ಆಮಂತ್ರಣ ಕೊಟ್ಟು ತರಿಸಬೇಕೆಂದೂ ಮತ್ತವನನ್ನು ಗೌರವಪೂರ್ವಕ ಸನ್ಮಾನಿಸಿ ಸತ್ಕಾರ ಉಪಚಾರಾದಿಗಳನ್ನು ಮಾಡಬೇಕೆಂದೂ ಉಪದೇಶಿಸುದುದರ ಮೇರೆಗೆ ಬಭ್ರುವಾಹನನು ಅರ್ಜುನನೊಡನೆ ಪಿತೃಭಕ್ತಿ ಇಟ್ಟು ಯುದ್ಧೋದ್ದೇಶದಿಂದ ಪರಾವರ್ತಿತನಾಗಿ ಅರ್ಜುನನ ಸ್ವಾಗತಕ್ಕಾಗಿ ಪುರ ಶೃಂಗಾರಾದಿ ಸಮಸ್ತ ಸಂಭ್ರಮಗಳನ್ನು ವಿರಚಿಸಿ ತಾನು

ಅನರ್ಘ್ಯ ರತ್ನ ಮೌಕ್ತಿಕಾದ್ಯನೇಕ ಕಾಣಿಕೆಗಳನ್ನು ಹಿಡಿದುಕೊಂಡು
ತನ್ನ ಪುರಜನ, ಪರಿಜನ, ಮಹಾಜನ ಸಂದೋಹ ಸಮೇತನಾಗಿ
ಅರ್ಜುನನೆಡೆಗೆ ಬಂದು ಅವನ ಮುಂದೆ ವಿನಯಾನ್ವಿತನಾಗಿ ನಿಂದು
ತಾನು ಮಾಡಿದ್ದ ಯುದ್ಧ ನಿಶ್ಚಯಕ್ಕಾಗಿ ಪಶ್ಚಾತ್ತಾಪ ಪೂರ್ವಕ
ವಾದ ಕ್ಷಮಾಯಾಚನೆ ಮಾಡುತ್ತಾ ತನ್ನ ಭಕ್ತಿಪೂರ್ವಕದ ಆ ಕಾಣಿ
ಕೆಗಳನ್ನು ಸ್ವೀಕರಿಸಬೇಕೆಂದೂ ತನ್ನೊಡನೆ ಪುತ್ರವಾತ್ಸಲ್ಯವಿಡ
ಬೇಕೆಂದೂ ತನ್ನ ವಿಜ್ಞಾಪನೆಯಂತೆ ತನ್ನ ಮಂದಿರಕ್ಕೆ ಬಿಜಯಂಗೈಯ
ಬೇಕೆಂದೂ ಬಿನ್ನೈಸಲು ಅರ್ಜುನನು ಆ ಬಿನ್ನಹವನ್ನು ತಿರಸ್ಕರಿಸಿ
ಆ ಕಾಣಿಕೆಗಳನ್ನೂ ತಿರಸ್ಕರಿಸಿ ಬಭ್ರುವಾಹನನನ್ನು ಪುತ್ರನೆಂದು
ಸ್ವೀಕರಿಸಿದರೆ ತನ್ನ ಸ್ವಗೌರವ ನಷ್ಟವಾಗುವುದೆಂಬ ವಿಕಲ್ಪ ವಿಚಾರ
ದಿಂದ ಮತಿವೈಕಲ್ಯ ತಾಳಿ ಮತ್ತವನನ್ನು ವೇಶ್ಯಾಪುತ್ರನೆಂದು ನಿಂದಿಸಿ
ಆ ನಿಂದಾವಚನದಲ್ಲಿ ಅವನ ತಾಯಿಗೆ ಊಣೆಯವನ್ನು ನಿರ್ದೇಶಿಸುವ
ಧ್ವನ್ಯರ್ಥವನ್ನು ಪ್ರಯೋಗಿಸಿದಾಗ ಬಭ್ರುವಾಹನನು ತನ್ನ ಮಾನಕ್ಕೆ
ಮಾಲಿನ್ಯ ತಂದ ಈ ಮಾತುಗಳಿಂದ ಅರ್ಜುನನಲ್ಲಿ ಕೋಪ ತಾಳಿ
ಕಡು ಕೆರಳಿ ತನ್ನ ಸಹಜ ಕ್ಷಾತ್ರೋಚಿತ ವೀರಸ್ವಭಾವಜನ್ಯವಾದ
ಉದ್ರೇಕದಿಂದ ಉರಿದೆದ್ದು, ರೇಗಿ ಬಿದ್ದು, ತನಗಪಮಾನ ಮಾಡಿದ
ಅರ್ಜುನನಿಗೆ ಪ್ರತೀಕಾರದ ಪಂಥ ತೋರಿ, ಯುದ್ಧ ಸಾರಿ, ಆವೇಶ
ಯುಕ್ತವಾದ ತನ್ನ ಭಟತನವನ್ನು ಬೀರಿ ರಣರೌದ್ರತೆಗೆ ಏರಿ ಸಮರ
ವಿಕ್ರಮದಿಂದ ಆ ಸವ್ಯಸಾಚಿಯ ಸಮಗ್ರ ಸೇನಾಸಂದೋಹವನ್ನು
ಸವರಿ ಕಡೆಗಾಅರ್ಜುನನೊಡನೆ ಕಾಳಗಗೊಟ್ಟು ಕಡುಗಲಿಯಾಗಿ
ಮೆರೆದುದಲ್ಲದೆ ಅರ್ಜುನನ ಶಿರಚ್ಛೇದನವನ್ನೇ ಮಾಡಿ ಮೆರೆಯು
ತ್ತಿರಲು ಇದನ್ನು ತಿಳಿದು ಅರ್ಜುನ ಮರಣದಿಂದ ತನಗುಂಟಾದ
ವೈಧವ್ಯಕ್ಕಾಗಿ ಚಿತ್ರಾಂಗದೆಯೂ ತತ್ಸಖಿ ಉಲೂಪಿಯೂ ದುಃಖ
ದಿಂದ ಪರಿತಪ್ತರಾಗಿರಲು ಅತ್ತ ಹಸ್ತಿನಾವತಿಯಲ್ಲಿ ದೈವಶಕುನದ
ಮೂಲಕ ಈ ದುರ್ಘಟನೆಯನ್ನು ತಿಳಿದ ಶ್ರೀಕೃಷ್ಣ ಭೀಮಾದ್ಯರು
ಧಾವಿಸಿ ಬಂದು ಅರ್ಜುನ ದುರಂತದರ್ಶನಾತ್ ದುಃಖತಪ್ತರಾದರೂ
ಶ್ರೀಕೃಷ್ಣನಿಂದ ಸಂತೈಸಲ್ಪಟ್ಟು ಶ್ರೀಕೃಷ್ಣನ ಸತ್ಸಲಹೆಯಂತೆ ಬಭ್ರು
ವಾಹನನು ಮಾತೃಭಕ್ತಿ, ಪಿತೃಭಕ್ತಿ, ಭಗವದ್ಭಕ್ತಿಗಳಿಂದಲೂ ಪಿತೃ

ವಿಘಾತುಕರೂಪೀ ಸ್ವಯಂಕೃತ ಪಾಪಪ್ರಕ್ಷಾಳನಾರ್ಥ ಪುಣ್ಯಕರ್ಮನಿಷ್ಠೆಯಿಂದಲೂ ಪ್ರೋಲ್ಲಸಿತನಾಗಿ ಪಾತಾಳಪ್ರದೇಶ ಪ್ರಭುವಾದ ಮಹಾಶೇಷನೆಂಬವನ ಸ್ವಾಧೀನಸಂಸ್ಥಿತವಿದ್ದ ಸಂಜೀವನ ಮಣಿಯ ಸಂಗ್ರಹಕ್ಕಾಗಿ ಸಾಗಿ ತನ್ನ ವಿಕ್ರಮವನ್ನೂ ವಿನಯವನ್ನೂ ಸಮುಚಿತವಾಗಿಯೂ ಸಯುಕ್ತಿಕವಾಗಿಯೂ ಪ್ರಯೋಗಿಸಿ ಅದನ್ನು ಸಾಧಿಸಿ ವಿರೋಧಿಜನ ಪ್ರಯುಕ್ತ ಕುತಾಂತ್ರಿಕಾತಂಕಗಳನ್ನು ವೀರಯುಕ್ತಿಗಳಿಂದ ಹಾರ ಹೊಡೆದು ಆ ಮಣಿಯನ್ನು ತಂದು ಶ್ರೀಕೃಷ್ಣನ ಆಜ್ಞೆಯಂತೆ ಅದನ್ನು ಅರ್ಜುನನ ಕಳೇಬರಕ್ಕೆ ಸಂಬಂಧಿಸಿದುದರ ಫಲವಾಗಿ ಅರ್ಜುನನು ಜೀವಗೊಂಡು ಸರ್ವಾಂಗ ಸಚೇತನದಿಂದ ಉತ್ಥಾನವಾಗಲು ಹಿಂದೊಮ್ಮೆ ತೀರ್ಥಯಾತ್ರಾಸಂದರ್ಭದಲ್ಲಿ ಚಿತ್ರಾಂಗದಾ ಉಲೂಪಿಯರೊಡನೆ ಗುಪ್ತಪ್ರೇಮದಿಂದ ನಡೆದಿದ್ದ ಕಾಮಭೋಗ ವಿಷಯಕವಾದ ತನ್ನ ಗತಸ್ಥಿತಿಯನ್ನು ನೆನಪಿಗೆ ತಂದುಕೊಂಡು ಆ ಚಿತ್ರಾಂಗದಾ ಉಲೂಪಿಯರನ್ನು ಪತ್ನಿಯರನ್ನಾಗಿಯೂ ಬಭ್ರುವಾಹನನನ್ನು ಪುತ್ರನನ್ನಾಗಿಯೂ ಸ್ವೀಕರಿಸಿ ತನ್ನನ್ನು ಆವರಿಸಿದ್ದ ಈ ವಿಷಯಕವಾದ ವಿಚಾರದ ವಿಸ್ಮೃತಿಗಾಗಿ ಪಶ್ಚಾತ್ತಾಪಪಡುತ್ತಾ ಶ್ರೀಕೃಷ್ಣನ ಸಮಕ್ಷಮದಲ್ಲಿ ಆತನ ಸನ್ನಿಧಿಯ ಸಾಕ್ಷಿತ್ವದಲ್ಲಿ ಅವರನ್ನು ಆತ್ಮೀಯರನ್ನಾಗಿ ಸಮ್ಮತಿಸಿ ಅವರಿಂದ ಹರ್ಷಪೂರ್ವಕ ಪ್ರದತ್ತವಾದ ಕಪ್ಪಕಾಣಿಕೆಗಳನ್ನು ಪಡೆದು ಶ್ರೀಕೃಷ್ಣಸಮೇತನಾಗಿ ಮುಂದುವರಿದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೩೯ ತಾಮ್ರಧ್ವಜ ಕಾಳಗ ಪ್ರಸಂಗ

‘ಏಕೋ ದೇವಃ ಸರ್ವಭೂತಾಂತರಾತ್ಮಾ’ ಎಂಬ ಆಪ್ತವಾಕ್ಯದಂತೆ ಪರಮಾತ್ಮನು ಸಮಸ್ತ ಜೀವಜಾಲಗಳಲ್ಲಿ ಸೇರಿರುವನೆಂದು ಮನಗಂಡವನು ಪರಮಾತ್ಮಪ್ರೀತ್ಯರ್ಥ ಪುಣ್ಯಕರ್ಮಗಳಲ್ಲಿ ಸರ್ವಭೂತಹಿತವನ್ನೇ ಸಾಧಿಸುತ್ತಾನೆ. ಪರಮಾತ್ಮನಲ್ಲಿ ಪರಮಪ್ರೇಮವೇ ಹರಿಭಕ್ತಿಯಾದುದರಿಂದ ಆ ಹರಿಭಕ್ತಿಯ ಆಚಾರವಿಧಿಯು ಪರಮಾತ್ಮನ ಅಸ್ತಿತ್ವದ ಕ್ಷೇತ್ರಗಳಾದ ಸರ್ವಭೂತಗಳಲ್ಲಿ ಪ್ರೇಮಪರವಾಗಿ ನ್ಯಾಯಯುಕ್ತವಾಗಿರಬೇಕು. ಎಲ್ಲವುಗಳಲ್ಲಿ ಒಂದಾಗಿರುವ ಅಥವಾ

ಯಾವ ಒಂದರಲ್ಲಿ ಎಲ್ಲವುಗಳೂ ಇರುವ ಅಂಥದ್ದರ ಮಹಾಪ್ರಜ್ಞೆಯೇ ಜ್ಞಾನ. ಆದುದರಿಂದ ಜ್ಞಾನಿಯ ಆಚಾರವಿಧಿಯು ಎಲ್ಲವುಗಳ ಪರವಾದ ಪ್ರೇಮಲಕ್ಷ್ಯಬದ್ಧವಾಗಿರಬೇಕು. ಸಾರಾಂಶತಃ ಲೋಕ ಹಿತಸಾಧನೆಯು ಸತ್ಕರ್ಮವೇ ದೇವಭಕ್ತನ ಹಾಗೂ ಜ್ಞಾನಿಯ ಮುಖ್ಯ ನಿಯಮವು. ಯಾಗ, ಯಜ್ಞ, ಹೋಮ, ನೇಮ ಇತ್ಯಾದಿ ಗಳಾದ ಹರಿಭಕ್ತಿಯ ಹೆಸರಲ್ಲಿ ಪ್ರಚಲಿತವಿರುವ ಸಕಲ ಪುಣ್ಯಾಚಾರ ಸಂಪ್ರದಾಯಗಳೂ ಲೋಕಹಿತವನ್ನೇ ಉದ್ದೇಶದಲ್ಲಿಟ್ಟುಕೊಂಡಿವೆ. ದಾನ, ಧರ್ಮ, ದಕ್ಷಿಣೆ—ಇವುಗಳೆಲ್ಲ ಲೋಕಹಿತಸಾಧನೆಯ ವಿವಿಧ ಸಾಧನೆಗಳಲ್ಲದೆ ಬೇರೇನು? ಲೋಕಹಿತಸಾಧನಾರ್ಥದ ಸದ್ಭಾವ ಸಂಯುಕ್ತವಲ್ಲದ ಪೂಜೆ ಪುನಸ್ಕಾರಗಳೋ, ಭಜನಾ, ಅರ್ಚನಾ, ಯಜ್ಞ, ವ್ರತಗಳೋ ಹರಿಪ್ರೀತ್ಯರ್ಥ ಪುಣ್ಯಕರ್ಮಗಳಾಗುವುವೆಂತು? ತಾನು ಹರಿಯನುಗ್ರಹ ಲಾಭ ಪ್ರಾಪ್ತಿಯಿಂದ ಮಹಾಸುಖವನ್ನು ಸಂಪಾದಿಸಿಕೊಳ್ಳಬೇಕೆಂಬ ಸ್ವಾರ್ಥದುದ್ದೇಶವನ್ನಿಟ್ಟುಕೊಂಡರೂ, ಆ ಉದ್ದೇಶದ ಸಾಧನಾ ನಿಯಮವೇ ಆಗಿ, ತಾನು ಲೋಕಹಿತಕ್ಕಾಗಿ ತನುಮನಾದಿಗಳನ್ನು ನೀಡುವ ತ್ಯಾಗಶೀಲನೂ, ಪರೋಪಕಾರಿಯೂ ಆಗಿರಬೇಕಾಗುತ್ತದೆ. ಇದು ಶ್ರೀಹರಿಯ ಸಂದರ್ಶನದ ಮತ್ತು ಹರಿಯನುಗ್ರಹದ ಲಾಭಪ್ರಾಪ್ತಿಯ ಮಹತ್ವಾಕಾಂಕ್ಷಾಬದ್ಧನಾಗಿ, ತದರ್ಥ ನಾರದೋಪದೇಶಾನುಸಾರವಾಗಿ ಅಶ್ವಮೇಧವನ್ನು ಕೈ ಗೊಂಡಿದ್ದ ರತ್ನಾಖ್ಯಪುರದ ಮಯೂರಧ್ವಜನೆಂಬ ರಾಜನು, ಅನ್ಯ ರಾಷ್ಟ್ರಗಳಿಂದ ಸಂಪತ್ಸಂಗ್ರಹ ಮಾಡುವ ಸಲುವಾಗಿ ನಿಜಪುತ್ರನಾದ ತಾಮ್ರಧ್ವಜನೆಂಬವನನ್ನು ಸೇನಾಸಮೇತನನ್ನಾಗಿ ದಿಗ್ವಿಜಯಕ್ಕಾಗಿ ಕಳುಹಿಸಿರುವಾಗ, ಪಾಂಡವರ ಅಶ್ವಮೇಧದ ನಿಯಮದಂತೆ ಅರ್ಜುನನೂ ದಿಗ್ವಿಜಯಾರ್ಥವಾಗಿ ಸಾಗುತ್ತಿದ್ದು ದೈವಯೋಗಾತ್ ಈ ಉಭಯರಲ್ಲಿ ಪರಸ್ಪರ ಯುದ್ಧ ಘರ್ಷಣೆ ನಡೆದು, ಈ ಯುದ್ಧ ದಲ್ಲಿ ತಾಮ್ರಧ್ವಜನು ಕೃಷ್ಣಾರ್ಜುನರಿಬ್ಬರನ್ನೂ ಸೋಲಿಸಿ, ಕದನ ಕಣದಲ್ಲಿ ಕೆಡೆದು, ಅವರನ್ನು ಹಿಡಿದು, ಪಾಶದಿಂದ ಬಂಧಿಸಿರಿಸಿ, ಅವರ ಅಶ್ವಮೇಧದ ತುರಗವನ್ನು ತನ್ನ ಅಶ್ವಮೇಧದ ತುರಗಕ್ಕೆ ಜತೆ ಕರಿಸಿ, ಆ ಉಭಯ ತುರಗಗಳನ್ನೂ ತನ್ನ ಸೇನೆಯನ್ನೂ ಕೂಡಿ

ಕೊಂಡು ಮನೆಗೆ ಮರಳಲು, ಈ ಸಕಲ ವೃತ್ತಾಂತಗಳನ್ನು ಮಗನ ಸ್ವತಃ ವರದಿಯಿಂದ ತಿಳಿದ ಮಯೂರಧ್ವಜನು, ಮಗನ ಈ ಕೃತಿಗಾಗಿ ವ್ಯಥೆಪಟ್ಟು, ಅವನನ್ನು ಧಿಕ್ಕರಿಸಿ, ಕೃಷ್ಣಾರ್ಜುನರಿಗಾದ ಅಪಚಾರಕ್ಕಾಗಿ ಅದು ಅತ್ಯಾಚಾರದ ದುಷ್ಕೃತಿಯಾಯಿತೆಂದು ದುಃಖ ವಿಹ್ವಲ ಮನಸ್ಸಿನಿಂದ ಸಂತಪ್ತನಾಗಿರುತ್ತಿರಲು, ಇತ್ತ ರಣದಲ್ಲಿ ಬಂಧಿತರಿದ್ದ ಕೃಷ್ಣಾರ್ಜುನರು ನಿಶ್ಶಬ್ದದ ನಿಶಿಥ ಕಾಲದಲ್ಲಿ ನಿದ್ದೆ ತಿಳಿದೆದ್ದವರಂತೆ ಮೂರ್ಛಾವಿಮುಕ್ತರಾಗಿ, ಸಂಪ್ರಾಪ್ತ ಸಂಕಷ್ಟ ನಿವೃತ್ತ್ಯರ್ಥದ ಸಮುಚಿತೋಪಾಯವನ್ನು ಚಿಂತಿಸಿ, ಆ ಇಬ್ಬರೂ ಕ್ರಮವಾಗಿ ವೃದ್ಧ ಮತ್ತು ಯುವಕ ಬ್ರಾಹ್ಮಣರಂತೆ ವೇಷ ಧರಿಸಿ, ತಾವು ಗುರು ಮತ್ತು ಶಿಷ್ಯರಂತೆ ಕಾಪಟ್ಯವನ್ನು ನಟಿಸುತ್ತಾ, ಯಜ್ಞದೀಕ್ಷಾಬದ್ಧನಾಗಿ ವೇದಿಕೆಯ ಬಳಿಯಲ್ಲಿ ಉಪಸ್ಥಿತನಿದ್ದ ಮಯೂರಧ್ವಜನ ಬಳಿಗೈದು, ವೃದ್ಧಬ್ರಾಹ್ಮಣ ವೇಷಧಾರೀ ಕೃಷ್ಣನು, ತಾನು ಬರುತ್ತಿದ್ದ ಮಾರ್ಗದಲ್ಲಿ ತನ್ನ ಮಗನು ಬಲಿಷ್ಠ ಸಿಂಹ ಒಂದಕ್ಕೆ ಸೆರೆ ಸಿಕ್ಕಿರುವನೆಂದೂ, ಆ ತನ್ನ ಮಗನ ಬಂಧನ ವಿಮೋಚನೆಯಾಗಬೇಕಾದರೆ, ಮಯೂರಧ್ವಜನ ಶರೀರಾರ್ಧವನ್ನು ತಂದುಕೊಡಬೇಕೆಂದು ಆ ಸಿಂಹವು ಅಪೇಕ್ಷಿಸುತ್ತದೆಂದೂ, ಆ ರಾಜಶರೀರಾರ್ಧವು ತನಗೆ ಸಿಗದಿದ್ದರೆ ತಾನು ಆ ಬಂಧೀ ಬಾಲಕನನ್ನು ಭಕ್ಷಿಸುವೆನೆಂದು ಹೇಳಿತೆಂದೂ, ಒಂದು ಕಲ್ಪಿತದ ಹುಸಿ ಕಥೆಯನ್ನು ವಾಸ್ತವದ ರೀತಿಯಲ್ಲಿ ಹೇಳಿ, ಈ ಕಾಪಟ್ಯ ಪ್ರಯೋಗದಿಂದ ತನಗೆ ಆ ರಾಜಶರೀರಾರ್ಧವನ್ನು ಕತ್ತರಿಸಿ, ವಿಂಗಡಿಸಿ, ದಾನಮಾಡಿ, ಉಪಕಾರ ಮಾಡಬೇಕೆಂದು ಬೇಡುತ್ತ ಅವನ ಸದ್ಗುಣ ಪರೀಕ್ಷೆ ಮಾಡುತ್ತಿರಲು, ಭೂತದಯಾಸಂಪನ್ನನಾದ ಆ ರಾಜನು, ತದ್ಬ್ರಾಹ್ಮಣಾಪೇಕ್ಷೆಗೆ ಸಮ್ಮತಿಸಿದಾಗ, ರಾಜಪತ್ನಿಯಾದ ಕುಮುದ್ವತಿಯು ತಾನೇ ರಾಜಾರ್ಧ ಶರೀರ ರೂಪಿಣಿಯಾದುದರಿಂದ ತಾನೇ ಸಿಂಹಗ್ರಾಸವಾಗಿ ಸ್ವೀಕರಿಸಲ್ಪಡಬೇಕೆಂದು ಬೇಡಿಕೊಂಡರೂ ಬ್ರಾಹ್ಮಣರೂಪೀ ಕೃಷ್ಣನು ಅದಕ್ಕೆ ಸಮ್ಮತಿಸದೆ, ರಾಜನ ಬಲಭಾಗದ ಅರ್ಧ ಶರೀರವನ್ನು ಅಪೇಕ್ಷಿಸುವ ಸಿಂಹಕ್ಕೆ ರಾಜನ ಎಡಭಾಗದ ಅರ್ಧಶರೀರೆಯಾದಾ ಕುಮುದ್ವತಿಯು ಸ್ವೀಕೃತವಾಗದೆಂದು ಯುಕ್ತಿಯನ್ನು ಹೇಳಿ, ರಾಜನ ಸ್ವಶರೀರದಿಂದ

ವಿಚ್ಛಿನ್ನವಾಗುವ ಅರ್ಧ ಶರೀರವೇ ಆವಶ್ಯಕವಾದುದೆಂದು ಅಪೇಕ್ಷಿಸಲು, ಆ ರಾಜನು ಪರೋಪಕಾರ್ಥದ ಪುಣ್ಯ ಕೃತಿಯಲ್ಲಿ ಪರಿತೋಷಾಂತಃಕರಣವುಳ್ಳವನಾಗಿ, ತನ್ನ ಶರೀರಾರ್ಧ ದಾನಕ್ಕೆ ಪೂರ್ಣ ಸಿದ್ಧನಾಗಿ, ತನ್ನ ಶರೀರವನ್ನು ಸರಿಯಾಗಿ ಎರಡು ಸೀಳುಗಳನ್ನಾಗಿ ವಿಭಾಗಿಸುವುದಕ್ಕಾಗಿ ತನ್ನ ನಡುನೆತ್ತಿಯಲ್ಲಿ ಗರಗಸವನ್ನಿಟ್ಟು ಛೇದಿಸುತ್ತಾ ಮುಂಬರಿಯಬೇಕೆಂಬುದಕ್ಕಾಗಿ ತನ್ನ ನಿಜ ಸತಿ ಸುತರನ್ನೇ ಆ ಕೆಲಸದಲ್ಲಿ ನಿಯೋಜಿಸಿರಲು, ತಲೆಯು ಸ್ವಲ್ಪ ಮಾತ್ರ ಸೀಳಲ್ಪಟ್ಟಾಗ ಆತನ ಎಡಗಣ್ಣಿಂದ ನೀರಿಳಿಯುವುದು ತೋರಿಬಂದದ್ದಕ್ಕೆ, ಆ ಕಪಟ ಬ್ರಾಹ್ಮಣನು ಆ ಕಣ್ಣೀರು ದುಃಖಸಂಕೇತವೆಂದೂ ಆದುದರಿಂದ ಅದು ದುಃಖಯುಕ್ತ ದಾನವಾಗುತ್ತದೆಂದೂ ಅಂಥದ್ದೊಂದು ವ್ಯಥಾಪೂರ್ವಕ ದಾನವು ತನ್ನ ಪರಿಗ್ರಹಕ್ಕೆ ಸಲ್ಲದೆಂದೂ ನ್ಯಾಯವನ್ನು ಹೂಡಿ ಆ ರಾಜನನ್ನು ತಿರಸ್ಕರಿಸಿ ಅಲ್ಲಿಂದ ನಿವರ್ತಿಸತೊಡಗಿದಾಗ, ಅವನನ್ನು ತನ್ನ ಮಗನ ಸಹಾಯದಿಂದ ತಡೆದು ನಿಲ್ಲಿಸಿ, ಅವನಿಗೆ ತನ್ನ ಎಡ ಪಕ್ಷವು ಪರೋಪಕಾರಕ್ಕೆ ತಾನು ವಿನಿಯೋಗಿಸಲ್ಪಡದೆ ನಿರರ್ಥಕವಾದುದಕ್ಕಾಗಿ ವ್ಯಥೆ ಪಡುತ್ತಾ ಕಣ್ಣೀರುಬಿಡುತ್ತದೆಯೇ ವಿನಾ ಅನ್ಯಥಾ ಅಲ್ಲವೆಂಬ ರಹಸ್ಯವನ್ನು ಹೇಳಿದುದಕ್ಕೆ ಶ್ರೀಕೃಷ್ಣನು ಆ ರಾಜನ ಪರೋಪಕಾರಾತ್ಮಕ ದಯಾಗುಣಕ್ಕೆ ಮತ್ತಾ ತ್ಯಾಗಶೀಲಕ್ಕೆ ಮೆಚ್ಚಿ, ತನ್ನ ಅದು ತನಕದ ಕಪಟ ವೇಷವನ್ನು ಕಳೆದು, ಅರ್ಜುನ ಸಮೇತನಾಗಿ ನಿಜ ಸುಂದರ ಸ್ವರೂಪದಿಂದ ಪ್ರಕಟನಾಗಿ, ತನ್ನ ದಿವ್ಯ ಹಸ್ತಸ್ಪರ್ಶಾತ್ ರಾಜನ ಗಾಯ-ನೋವುಗಳನ್ನು ನಿವಾರಿಸಿ, ಅವನಿಗೂ ತತ್ಸುತಸತೀತ್ಯಾದಿ ಸಮಸ್ತ ಪರಿವಾರ ಜನಕ್ಕೂ ಮಹದಾನಂದವನ್ನುಂಟುಮಾಡಲು, ಅಲ್ಲಿಗೆ ಶ್ರೀ ಹರಿ ಸಾಕ್ಷಾತ್ಸಂದರ್ಶನೋದ್ದೇಶಿತವಾದ ಅವನ ಯಜ್ಞ ಕರ್ಮಕ್ಕೆ ಉದ್ದೇಶ ಸಿದ್ಧಿಯು ಸಂಪೂರ್ಣ ಫಲಪ್ರಾಪ್ತಿಯಾಗಿ, ಅದು ಮಂಗಲದಲ್ಲಿ ಮುಕ್ತಾಯಗೊಂಡು, ತಾನೂ ಸಹ ಶ್ರೀಕೃಷ್ಣಾರ್ಜುನರ ಮುಂಬರಿಯೋಣದಲ್ಲಿ ಅವರ ಸಂಗಾತಿಯಾಗಿ ಸೇರಿಕೊಂಡು ತನ್ನ ಸತ್ಕರ್ಮ ಸಾಧನೆಯಲ್ಲಿ ಸಾಫಲ್ಯ ಸಿದ್ಧಿಯಾದ ಆತ್ಮ ಸಂತೋಷವನ್ನೂ, ಸತ್ಕೀರ್ತಿಯನ್ನೂ ಪಡೆದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೪೦ ವೀರಮಣಿ ಕಾಳಗ ಪ್ರಸಂಗ

ಲೋಕದಲ್ಲಿ ಪ್ರಕಟದಲ್ಲಿರುವ ಮುತ್ತು ರತ್ನಾದಿಗಳಿಗಿಂತಲೂ ಅಧಿಕತರವಾದ ಮೌಲ್ಯದ ಮುತ್ತು ರತ್ನಾದಿಗಳು ಭೂಗರ್ಭದಲ್ಲಿ ಗೌಪ್ಯದಲ್ಲಿವೆ ಎಂದು ಭೂಶಾಸ್ತ್ರಜ್ಞರು ಸಾಧಾರವಾಗಿ ಹೇಳುತ್ತಾರೆ. ಆದುದರಿಂದ ನಮ್ಮ ಸ್ವಾನುಭೋಗದಲ್ಲಿ ಸಂಸಿದ್ಧವಿರುವ ರತ್ನವೇ ಏಕಮಾತ್ರ ಸರ್ವೋತ್ಕೃಷ್ಟ ಮಹಾರತ್ನವೆಂದು ತಿಳಿದರೆ ಅದು ತಪ್ಪು ಕಲ್ಪನೆಯು. ಅಂದರೆ ಸಾಧು ವಿಚಾರಸಂಗ್ರಹಿಯಾದ ವಿವೇಕಿಯು ತನ್ನಲ್ಲಿರುವ ವಿದ್ವತ್, ಸಂಪತ್ತು, ಧನ, ಮಾನಾದಿ ಯೋಗ್ಯತಾವಿಷಯ ದಲ್ಲಿ ತನಗಿಂತಲೂ ಅಧಿಕತರರಾಗಿರುವವರು ಅಪ್ರಕಟಿತವಾಗಿಯಾದ ರೂ ಇದ್ದೇ ತೀರುವರು ಎಂದು ತಿಳಿದಿರುತ್ತಾನೆ. ಆ ತಿಳುವಳಿಕೆಯಿಂದ ಆತನು ನಿರಹಂಕಾರಿಯಾಗಿ ಪ್ರಶಾಂತನಾಗಿ ಪ್ರಪಂಚವನ್ನನುಭವಿಸು ತ್ತಾನೆ. ಇದಕ್ಕೆ ವಿರುದ್ಧವಾಗಿ ವಿಶಾಲ ವಿಚಾರ ವಿಹೀನನಾದವನು ತನ್ನದ್ದೊಂದೇ ಅನ್ಯತ್ರಾದಧಿಕತರ ಮಹಾಯೋಗ್ಯತೆ ಎಂಬ ತಪ್ಪು ತಿಳು ವಳಿಕೆಯಿಂದ ಅಹಂಕಾರಿಯಾಗಿ ತತ್ಫಲದಿಂದ ಕಡೆಗೆ ಪರಿತಪ್ತನಾಗಿ, ಪತಿತನಾಗುತ್ತಾನೆ. ಅಂತು ನಿರಹಂಕಾರದ ಸಾಧುಸತ್ಪ್ರವೃತ್ತಿಯು ಲೇಸನ್ನೂ, ಅಹಂಕಾರದ ದರ್ಪಿಷ್ಠ ದುಷ್ಪ್ರವೃತ್ತಿಯು ಹಾನಿಯನ್ನೂ ತರುವುದು ಎಂಬ ಎಚ್ಚರಿಕೆ ಬೇಕು. ಇದು ಅಶ್ವಮೇಧದ ಕಾರ್ಯ ನಿಯಮಾನುಸಾರವಾಗಿ ಅರ್ಜುನನು ಸಾರಸ್ವತಾಖ್ಯ ಪುರಪ್ರವೇಶ ಮಾಡಿದಾಗ ಅಲ್ಲಿ ಅವನನ್ನು ಪ್ರತಿಭಟಿಸಿದ ವೀರಮಣಿ ಎಂಬ ರಾಜ ನೊಡನೆ ರಣವೆಸಗಿ ಆ ರಣದಲ್ಲಿ ಸೋತು ಗರ್ವಭಂಗಿತನಾಗಿ ಆ ರಾಜನಲ್ಲಿ ತನ್ನಲ್ಲಿದ್ದುದಕ್ಕಿಂತಲೂ ಅಧಿಕತರ ಶೌರ್ಯ, ಧೈರ್ಯಾದಿ ಬಲಗಳಿದ್ದುದನ್ನು ಅನುಭವಿಸಿ ಕೊನೆಗೆ ಶ್ರೀಕೃಷ್ಣತಂತ್ರಪ್ರಯೋಗ ದಿಂದ ಆ ರಾಜನೊಡನೆ ಸ್ನೇಹಪ್ರಬಂಧವಾಗಿ ಸೋಲಿನಿಂದಾದ ಅನಿ ಷ್ಟದ ನಿವೃತ್ತಿಯನ್ನು ಮಾಡಿಕೊಂಡು ಸುಖದಿಂದಲೇ ಮುಂಬರಿಯು ವಂತಾದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೪೧ ಕೃಷ್ಣಾರ್ಜುನರ ಕಾಳಗ ಪ್ರಸಂಗ

ಅನೇಕ ಕೋಟಿ ಜೀವಜಾಲಗಳಲ್ಲಿ ಮನುಷ್ಯನೇ ತಾನು ಬುದ್ಧಿ

ಜೀವಿಯಾಗಿರುವ ಕಾರಣದಿಂದ ಮಹತ್ವವನ್ನು ಪಡೆದಿರುತ್ತಾನಾದರೆ
ಅವನ ಆ ಮಹತ್ವಕ್ಕೆ ಮುಖ್ಯ ಲಕ್ಷಣವೇ ಧರ್ಮಪ್ರಜ್ಞೆಯು. ಈ
ಧರ್ಮವು ಕೆಲವು ಸಂದರ್ಭಗಳಲ್ಲಿ ದುರವಗಾಹವು. ಬೌದ್ಧಿಕ
ಶ್ರಮದಾಯಕವಾದ ಜಿಜ್ಞಾಸಾತ್ಮಕ ತ್ರಾಸಗಳಲ್ಲಿ ಈ ಧರ್ಮ ಸಮ
ಸ್ಯೆಯೇ ಮುಖ್ಯವು. ವಿಚಾರಪರಿಪ್ಲುತವಾದ ಪರಿಪುಷ್ಟ ಬುದ್ಧಿಯಲ್ಲಿ
ಕರ್ಮಜಿಜ್ಞಾಸರೂಪೀ ಗರ್ಭಸ್ಥಾಪನೆಯಾಗಿ ವಿಚಾರವಿನಿಮಯ
ಕಷ್ಟದ ಪ್ರಸವವೇದನೆಯನ್ನನುಭವಿಸಿ ಧರ್ಮಪ್ರಜ್ಞೆಯನ್ನು ಪಡೆಯ
ಬೇಕಾಗುತ್ತದೆ. ಕೆಲವು ವೇಳೆಯಲ್ಲಿ 'ಕಿಂ ಕರ್ಮ, ಕಿಮಕರ್ಮ,
ಇತಿ ಕವಯೋಪ್ಯತ್ರ ಮೋಹಿತಾಃ' ಎಂಬುದರ ಪೂರ್ಣ ಸತ್ಯತೆಯು
ಸ್ವಾನುಭವಕ್ಕೆ ಸಿಗುತ್ತದೆ. ಅವಶ್ಯ ಆಚರಣೀಯಗಳಾದ ಇಬ್ಬಗೆಯ
ಕರ್ತವ್ಯರೂಪ ಧರ್ಮಗಳು ಪರಸ್ಪರ ವಿರುದ್ಧಗಳಾಗಿ ಏಕಕಾಲದಲ್ಲಿ
ಅನುಲಕ್ಷ್ಯಗಳಾಗುವಾಗ ಅವುಗಳ ಗ್ರಾಹ್ಯ, ತ್ಯಾಜ್ಯ ನ್ಯಾಯಶೋಧನೆ
ಗಾಗಿ ಅಥವಾ, ಪೂರ್ವಪಶ್ಚಾತ್ ನ್ಯಾಯಶೋಧನೆಗಾಗಿ ಸರಿ
ಯಾಗಿ ವಿಮರ್ಶೆ ಮಾಡುವುದಕ್ಕೆ ಸಾಮಾನ್ಯ ಬುದ್ಧಿಯು ಸಾಕಾ
ಗುವುದಿಲ್ಲ. ಗುರೂಪದೇಶದಿಂದಲೂ ಶಾಸ್ತ್ರಾಭ್ಯಾಸಾತ್ಸಂಗ್ರಹೀತ
ಜ್ಞಾನಬಲದಿಂದಲೂ ಅರ್ಥಾತ್ ಸುಸಂಸ್ಕೃತವಾದ ಬುದ್ಧಿಬಲದಿಂದ
ಸುವಿವೇಚನೆ ಮಾಡಿ ಇತಿಕರ್ತವ್ಯತಾನಿಶ್ಚಯವನ್ನು ಪಡೆಯಬೇಕಾ
ಗುತ್ತದೆ. ಹೀಗೆ ಕರ್ತವ್ಯನ್ಯಾಯನಿರ್ಣಯವನ್ನು ಆಶ್ರಯಿಸಿ
ಕೊಂಡು ಸರಿಯಾಗಿ ಸಾಗುತ್ತಿರುವ ಸಾಧುಧರ್ಮನಿಷ್ಠೆಯ ಸಜ್ಜನ
ರಿಗಾದರೂ ದೇವರೇ ಕಷ್ಟವಿತ್ತು ಕಾಡಿ ಧರ್ಮಪರೀಕ್ಷಣ ಚಮತ್ಕಾರ
ಮಾಡುವುದುಂಟು. ಆ ಚಾಮತ್ಕಾರಿಕ ಪರೀಕ್ಷೆಯಲ್ಲಿ ಉತ್ತೀರ್ಣ
ರಾಗುವ ಧರ್ಮಪ್ರಾಜ್ಞರಿಗೆ ಕೊನೆಗೆ ದೇವಾನುಗ್ರಹದ ಮಹಾ
ಸುದೆಶೆ ಸಂಗ್ರಹವಾಗದುಳಿಯದು. ಇದು ಒಂದು ದಿನ ಶ್ರೀಕೃಷ್ಣನು
ತನ್ನ ಪ್ರಾತಃಸ್ನಾನವನ್ನು ಮುಗಿಸಿಕೊಂಡು ಎಂದಿನಂತೆ ಸೂರ್ಯನಿಗೆ
ಅರ್ಘ್ಯ ಕೊಡುತ್ತಿದ್ದಾಗ ಅವನ ಅಂಜಲಿಯ ಶುದ್ಧಜಲಕ್ಕೆ ಆಕಾಶ
ಯಾನದಲ್ಲಿ ಸ್ವೈರಸಂಚಾರಿಯಾಗಿದ್ದ ಗಯನೆಂಬ ಗಂಧರ್ವನಿಂದ
ಉಚ್ಛಿಷ್ಟಪತನಾದ ಭ್ರಷ್ಟತ್ವ ಪ್ರಾಪ್ತಿಸಲು ಆತನು ಅಲ್ಲಿಂದ ಎಂಟು
ದಿನಗಳೊಳಗೆ ಕೃಷ್ಣಹಸ್ತದಿಂದ ವಧ್ಯನಾಗಬೇಕಾದ ಕೃಷ್ಣಕೋಪ

ಪ್ರತಿಜ್ಞೆಗೆ ಪಾತ್ರನಾಗಿ ತದ್ರೀತ್ಯಾ ಸಂಪ್ರಾಪ್ಯವಾಗಲಿರುವ ಸ್ವಮೃತ್ಯು ವಿನಿಂದ ಸಂರಕ್ಷಿತವಾಗಬೇಕೆಂಬ ಸಾಧನೆಗಾಗಿ ಆ ಗಯನು ಬ್ರಹ್ಮ ರುದ್ರಾದಿ ಸಕಲ ದೇವತೆಗಳ ಶರಣು ಹೊಕ್ಕರೂ ಅದರಿಂದ ನಿಷ್ಪ್ರಯೋಜನವಾಗಿ ನಾರದೋಪದಿಷ್ಟ ಸೂಕ್ತ ಸದುಪಾಯಾನುಸರಣೆಯಿಂದ ವನವಾಸದೀಕ್ಷಾ ನಿಬಂಧನಾನುಸಾರವಾಗಿ ಕಾಮ್ಯಕಾವನದಲ್ಲಿರುತ್ತಿದ್ದ ಪಾಂಡವರೆಡೆಗೈದಿ ಅವರೊಳಗಣ ಅರ್ಜುನನ ಪಾದಾಕ್ರಾಂತನಾಗಿ ಯುಕ್ತಿಯಿಂದ ಕೃಷ್ಣಕೃತ ಪ್ರತಿಜ್ಞಾ ವಿಷಯ ಪ್ರಕ್ಷಿಪ್ತಕವಾಗಿ ತನ್ನ ಶರಣಾಗಮನದ ದೀನಸ್ವಭಾವವನ್ನು ವ್ಯಕ್ತಗೊಳಿಸಿ ತನ್ಮೂಲಕ ಶರಣ ಜನಸಂರಕ್ಷಣೆಯ ಕ್ಷಾತ್ರೋಚಿತ ಮರ್ಯಾದಾಗುಣವನ್ನು ಕೆರಳಿಸಿ ತತ್ಫಲವಾಗಿ ಗಯನ ಪ್ರಾಣಸಂರಕ್ಷಣದ ಪ್ರತಿಜ್ಞೆಯನ್ನು ಅರ್ಜುನನು ಮಾಡಿದ ಬಳಿಕ ಕೂಲಂಕಷ ವಿಚಾರೇಣ ಗಯಸಂರಕ್ಷಣೆಯ ಹೊರೆಯನ್ನು ಹೊತ್ತದ್ದರಿಂದ ಗಯಸಂಹಾರಾವಶ್ಯಕತೆಯ ಶ್ರೀಕೃಷ ನಿಗೆ ವಿರುದ್ಧಾಚರಣೆಯ ವೈರಿಯಾಗಬೇಕಾಯಿತೆಂಬ ಸಂದರ್ಭ ಜ್ಞಾನವುಂಟಾಗಿ ಅದಕ್ಕೆ ಪಶ್ಚಾತ್ತಾಪಪಟ್ಟು ಮನ ಮರುಗಿದರೂ ಸ್ವಪ್ರತಿಜ್ಞೆಯನ್ನು ಪಾಲಿಸುವ ಸತ್ಯನಿಷ್ಠೆಯನ್ನು ಬಿಡಬಾರದೆಂಬ ಧರ್ಮವಿವೇಚನೆಯಿಂದ ಗಯನನ್ನು ಸುಭದ್ರತೆಯಿಂದ ಸ್ವಾಧೀನತೆ ಯಲ್ಲಿರಿಸಿಕೊಂಡಿರಲು ಅತ್ತ ನಾರದಾದಿ ವಾರ್ತಾಪ್ರಸಾರಕರಿಂದ ಈ ವೃತ್ತಾಂತವನ್ನು ಸಂಗ್ರಹಿಸಿಕೊಂಡ ಶ್ರೀಕೃಷ್ಣನು ಸ್ವಕಾರ್ಯಸಾಧನಾ ನುಕೂಲಾರ್ಥವಾಗಿ ಗಯನನ್ನು ಅರ್ಜುನಾಧೀನತೆಯಿಂದ ತಪ್ಪಿಸು ವುದಕ್ಕೆಂದು ಸುಭದ್ರಾದೇವಿಯನ್ನು ಸಂಧಾನಕ್ಕಾಗಿ ಪ್ರಯೋಗಿಸಿ ದರೂ ಅದು ಪ್ರಯೋಜನವಾಗದೆ ದಾರುಕನೆಂಬ ಸಂದೇಶವಾಹಕ ನಿಂದಲೂ ಶ್ರೀಕೃಷ್ಣನ ಇಷ್ಟಾರ್ಥ ಸಿಗದೆ ಕೊನೆಗೆ ಬಲರಾಮನಿಗೆ ಪಾಂಡವದ್ವೇಷಭಾವವನ್ನು ಪ್ರಚೋದಿಸಿ ಆತನ ಸಂಗಡ ಸೇನಾ ಸಮೇತವಾಗಿ ಪಾಂಡವರು ಇರುತ್ತಿದ್ದ ಕಾಮ್ಯಕಾವನವನ್ನು ಪ್ರವೇಶಿಸಿ ಪಾಂಡವ ವಿರುದ್ಧ ಯುದ್ಧ ಹೂಡಿ ಅದರಲ್ಲಿ ಭೀಮ ಬಲರಾಮರ ಪರಸ್ಪರ ವಿರುದ್ಧ ಘರ್ಷಣಾತ್ಮಕ ಭಯಂಕರ ಭವರವು ಸ್ವಾರಸ್ಯ ಪೂರ್ಣವಾಗಿ ಸಾಗಿದರೂ ಗಯಸಂಗ್ರಹದ ಇಷ್ಟಾರ್ಥವು ಆಗದಿರಲು ಶ್ರೀಕೃಷ್ಣನೇ ಸ್ವಯಂ ಯೋಧನಾಗಿ ಅರ್ಜುನನೊಡನೆ ಹೋರಾಡಿ

ದುದೂ ನಿರರ್ಥಕವಾದಾ ಮೇಲೆ ಧುರನೀತಿಯುನ್ನು ಮೀರಿ ಕುಟಿಲ ತಂತ್ರವನ್ನು ಬೀರಿ ಅರ್ಜುನನ ಬೆನ್ನ ಮರೆಯಲ್ಲಿ ಬತ್ತಳಿಕೆಯಲ್ಲಿ ಅವಿತುಕೊಂಡಿದ್ದ ಗಯುನನ್ನು ಮೋಸದಿಂದ ಗುಪ್ತ ಕೊಲೆ ಮಾಡಿ ಆತನ ವಧಾರ್ಥದ ತನ್ನ ಪ್ರತಿಜ್ಞೆಯ ಪಾಲನೆಯಾಯಿತೆಂಬ ತನ್ನ ಕೃತಕೃತ್ಯತೆಯ ಸಂತೋಷವನ್ನು ಸಮರರಂಗದಲ್ಲಿ ಸುಪ್ರಕಾಶನಗೈದು ಅರ್ಜುನನನ್ನುಪಚಾರಿಸಲು ಸಖೇದಾಶ್ಚರ್ಯ ಭಾವಬಾಧೆಯಿಂದ ಉದ್ವಿಗ್ನನಾದ ಅರ್ಜುನನು ಕೃಷ್ಣಕೃತ ವಂಚನಾವಿರೋಧಭಾವೋದ್ಭೂತ ಪ್ರಕೋಪ ಪ್ರಜ್ವಲನಾನ್ವಿತ ಪ್ರತಾಪವನ್ನು ಪ್ರಯೋಗಿಸಿ ಕಡು ಕಣೆಗಳ ಕ್ರೂರಪ್ರಹಾರದಿಂದ ಕೃಷ್ಣನ ಕಾಯದ ಕಸುವೆಲ್ಲವನ್ನು ಕೆಡಿಸಿ ಮತ್ತವನಿಗೆ ಮೂರ್ಛೆಯನ್ನು ಕೊಡಿಸಿ ತತ್ರಾಪಿ ಮೂರ್ಛಾವಿಷ್ಟನಾಗಿ ಮೈ ಮರೆತು ಮಲಗಿರುವ ಕೃಷ್ಣನನ್ನು ಕಂಡು ಅನುಕಂಪನ ತಾಳಿ ಕೃಷ್ಣಪರ ಸುಪ್ರೇಮಸದ್ಭಾವದಿಂದ ಕೃಷ್ಣಪತನ ಹೇತುಕವಾದ ತನ್ನ ಅಪಕೃತಿಗಾಗಿ ಪಶ್ಚಾತ್ತಾಪಗೊಂಡು ಆತ್ಮಘಾತದ ಸಂಕಲ್ಪದಿಂದ ಸಮಕ್ಷಮದಲ್ಲಿಯೇ ಪ್ರಜ್ವಲನಾಗ್ನಿ ಕುಂಡವೊಂದನ್ನು ಏರ್ಪಡಿಸಿ ಅಲ್ಲಿ ಪ್ರಾಣಾರ್ಪಣೆ ಮಾಡಲು ಸಿದ್ಧನಾದಾಗ ಶ್ರೀಕೃಷ್ಣನು ಮೂರ್ಛಾವಿಮುಕ್ತನಾಗಿ ಮಹೋಲ್ಲಾಸದಿಂದ ಮೇಲೆದ್ದು ಪ್ರತೀಕಾರಾರ್ಥವಾಗಿ ಪ್ರತಿಭಟನೆಗೆ ತೊಡಗಿ ಪುನರ್ಯುದ್ಧಾರಂಭವಾದಾಗ ಅಲ್ಲಿ ಪಾರ್ವತಿ ಪರಮೇಶ್ವರರು ಪ್ರತ್ಯಕ್ಷವಾಗಿ ಬಂದು ಆ ಯುದ್ಧಸನ್ನಾಹವನ್ನು ನಿಲ್ಲಿಸಿ ಶರಣಜನ ರಕ್ಷಣಾಸದ್ಗುಣ ಸಹಿತವಾದ ಸತ್ಯನಿಷ್ಠೆಯ ಅರ್ಜುನನನ್ನೂ ಧಾರ್ಮಿಕರ ಧರ್ಮಪರೀಕ್ಷಣಾರ್ಥದ ಕಪಟಲೀಲೆಯ ಕೃಷ್ಣನನ್ನೂ ಮೆಚ್ಚಿ ಹೊಗಳಿ ಮೃತ ಗಯನಿಗೂ ಪುನರ್ಜೀವನದ ಭಾಗ್ಯವಿತ್ತು ಕೃಷ್ಣಾರ್ಜುನರೊಳಗೆ ಯಥಾಪೂರ್ವದ ಪರಸ್ಪರ ಸ್ನೇಹಸಂಬಂಧ ಸಂಪ್ರಾಪ್ತಿಯಾಗುವಂಥ ಸಂಧಾನವನ್ನು ಮಾಡಿ ತತ್ಪರ್ಯಂತದ ಸಕಲಾರಿಷ್ಟಗಳ ಶಾಂತಿಯನ್ನು ಮಾಡಿ ಮಂಗಳ ಮುಕ್ತಾಯವನ್ನು ಮಾಡಿದರು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೪೨ ರುಗ್ಮಿಣೀಕಲ್ಯಾಣ ಪ್ರಸಂಗ

ಬುದ್ಧಿಜೀವಿಗಳಾದ ಮನುಷ್ಯರು ತಮ್ಮ ಸಾಮಾಜಿಕ ಜೀವನದ

ಸುವ್ಯವಸ್ಥಾ ಸಂಸ್ಥಾಪನಾರ್ಥವಾಗಿ ಸ್ವೈರರತಿಯ ಅಶ್ಲೀಲಾಚಾರಕ್ಕೆ ಅವಕಾಶವು ತಡೆಗಟ್ಟಲ್ಪಡುವಂತೆ ಸುವಿವೇಚನಾಪೂರ್ವಕವಾಗಿಯೇ ವಿವಾಹ ಎಂಬ ಸಂಸ್ಕಾರವೊಂದನ್ನು ಏರ್ಪಡಿಸಿಕೊಂಡಿದ್ದಾಗಿದೆ. ಸಾಂಸಾರಿಕ ಜೀವನದಲ್ಲಿ ಸಾಗಬೇಕಾಗಿರುವ ದಾಂಪತ್ಯ ಜೀವನದ ದೀಕ್ಷಾಗ್ರಹಣದ ಸುವಿಧಾನ ಪದ್ಧತಿಯೇ ವಿವಾಹವೆಂಬ ಸಂಸ್ಕಾರವು. ಹೆಣ್ಣು ಗಂಡುಗಳು ಪರಸ್ಪರ ಸ್ನೇಹ ಸೌಹಾರ್ದಗಳ ನಿಬದ್ಧತೆಯುಂಟಾಗಿ, ಸಾಂಸಾರಿಕ ಜೀವನದ ಲಾಭ-ನಷ್ಟ, ಸುಖ-ದುಃಖ, ಸೌಭಾಗ್ಯ-ದಾರಿದ್ರ್ಯಾದಿಗಳಲ್ಲಿ ಸಮಭಾಗಿಗಳಾಗಿ, ಅನ್ಯೋನ್ಯ ಸಹಭಾಗಿಗಳಾಗಿ, ಧರ್ಮ-ಅರ್ಥ ಕಾಮುಗಳಲ್ಲಿ ಪರಸ್ಪರಾನುಕೂಲ್ಯದಿಂದ ಸಾಹಚರ್ಯದಿಂದ ಸಾಗಬೇಕೆಂಬ ಸತ್ಸಂಕಲ್ಪದಿಂದ ಏರ್ಪಡಿಸಿಕೊಂಡಿರುವ ಪರಸ್ಪರ ಪ್ರೇಮುಪ್ರಬಂಧನ ವಿರಚನಾ ಸಂಸ್ಕಾರವೇ ವಿವಾಹವು. ದಾಂಪತ್ಯ ಜೀವನದ ಶುಭಸ್ವಾಸ್ಥ್ಯಾದಿಗಳ ಭವಿಷ್ಯದಾಗಮನವನ್ನನುಲಕ್ಷಿಸಿ, ವಿವಾಹದ ವಿಚಾರದಲ್ಲಿ ಹೆಣ್ಣು ಗಂಡುಗಳ ವಯಸ್ಸು, ಕುಲ, ಗೋತ್ರ ಇತ್ಯಾದಿಗಳನ್ನು ಸಂಬಂಧಿಸಿದ ಕೆಲವು ನಿಯಮ ನಿಯಂತ್ರಣಗಳನ್ನು ಶಾಸ್ತ್ರಜ್ಞರು ಏರ್ಪಡಿಸಿದ್ದಾರೆ. ಇಂಥ ನಿಯಮಗಳಲ್ಲಿ ಹೆಣ್ಣು ಗಂಡುಗಳ ಪರಸ್ಪರಾನುರಾಗ ಸ್ವಭಾವ (ಮನಃಕೂಟ) ಇರಬೇಕಾದುದು ಮುಖ್ಯವು. ಅರಿದರೆ, ಗಂಡು ಹೆಣ್ಣನ್ನೂ, ಹೆಣ್ಣು ಗಂಡನ್ನೂ ಸ್ವಯಂ ಸಂತೋಷದಿಂದ ಮೆಚ್ಚಿಕೊಳ್ಳುವಂತಿದ್ದರೆ, ಅವರೊಳಗೆ ನಡೆಯುವ ವಿವಾಹವು ನ್ಯಾಯವಿಹಿತವು. ಇದಕ್ಕೆ ವಿರುದ್ಧವಾಗಿ ಹೆಣ್ಣಿನ ಸ್ವಾಭಿಪ್ರಾಯ ಪ್ರಕಾಶನಕ್ಕೆ ಆಸ್ಪದ ಕೊಡದೆ, ಆಕೆಯ ಸ್ವವಿವೇಚನಾಪೂರ್ವಕವಾದ ಹಿತಾಹಿತ ಸೂಚನೆಗೆ ಸ್ವಾತಂತ್ರ್ಯ ಕೊಡದೆ, ಗಂಡು ತನ್ನ ಬಲವಂತಿಕೆಯಿಂದ ಆಕೆಯ ವಿವಾಹ ನಿರ್ಣಯ ಮಾಡಿದರೆ, ಅದರಿಂದ ವಿಷಮ ಪರಿಣಾಮವೇ ಪ್ರಾಪ್ತಿಸಬಹುದು. ಇದು, ಕುಂಡಿನಾ ನಗರದ ಭೀಷ್ಮಕ ಮಹಾರಾಜನ ಹಿರಿಯ ಮಗನಾದ ರುಗ್ಮನು, ತನ್ನ ತಂದೆಯಿಂದ ತಾನಾಗಿಯೇ ಸೆಳೆದಿಟ್ಟುಕೊಂಡ ಅಧಿಕಾರ ದರ್ಪದಿಂದ, ನಿಜ ಸಹೋದರಿಯಾದ ರುಗ್ಮಿಣಿಯನ್ನು, ಚೇದಿದೇಶಾಧಿಪತಿಯಾದ ಶಿಶುಪಾಲನಿಗೆ ವಿವಾಹ ಮಾಡಿಕೊಡುವುದೆಂದು ಸ್ವೇಚ್ಛೆಯಿಂದಲೇ ನಿರ್ಣಯ ಮಾಡಿ

ಆ ಕುರಿತು ಸಕಲ ಪೂರ್ವ ಸನ್ನಾಹಗಳನ್ನು ಮಾಡಿರಲು, ಶಿಶುಪಾಲನನ್ನು ವಲ್ಲದ ರುಗ್ಮಿಣಿಯು, ತನ್ನ ಬಾಲ್ಯದಿಂದಲೂ ಬೆಳೆದು ಬಂದ ತನ್ನ ಭಾವರಂಗಸಂಸ್ಥಿತವಿದ್ದ ಶ್ರೀಕೃಷ್ಣ ಪ್ರೇಮವನ್ನನುಸರಿಸಿ, ಆ ಕೃಷ್ಣನೇ ತನ್ನನ್ನು ವರಿಸುವಂತೆ ಗುಪಿತ ಪತ್ರ ವ್ಯವಹಾರತಃ ಕೃಷ್ಣನನ್ನು ಶರಣುಹೊಂದಿದ್ದರ ಮೇರೆಗೆ, ಕೃಷ್ಣನು ಬಲರಾಮ ಸಮೇತನಾಗಿ ಕುಂಡಿನಾ ನಗರಕ್ಕೆ ಬಂದು, ರುಗ್ಮಿಣೀ ಲಿಖಿತ ಪತ್ರ ಸೂಚನಾನುಸರಣೆಯಿಂದ ರಾಜಮಂದಿರದ ಬಾಹ್ಯಪ್ರದೇಶದ ಕಾಳಿಕಾ ಮಂದಿರದಲ್ಲಿ ಕಾದು ಕುಳಿತು, ಕಾಳಿಕಾದೇವಿ ಪೂಜಾ ನಿಮಿತ್ತವಾಗಿ ಅಲ್ಲಿಗೆ ಬಂದ ರುಗ್ಮಿಣೀ ವಧುವನ್ನು ತದಿಷ್ಟಾನುವರ್ತಿತ್ವದಿಂದ ವರಿಸಿ, ಸ್ವಾಧೀನದಲ್ಲಿರಿಸಿ, ಸಿದ್ಧವಿದ್ದ ಸ್ಯಂದನದಲ್ಲೇರಿಸಿ ಮುಂಬರಿಯ ತೊಡಗಿದಾಗ, ಇದನ್ನು ಲಗ್ನ ಮಂದಿರದಲ್ಲಿದ್ದ ರುಗ್ಮಿಯೂ, ಶಿಶುಪಾಲನೂ, ಜರಾಸಂಧನೂ, ತತ್ಪರಿವಾರ ಜನಗಳೂ ತಿಳಿದು, ಎಲ್ಲರೂ ಹೌಹಾರಿ ಕೃಷ್ಣ ಬಲರಾಮರಿದ್ದಲ್ಲಿಗೆ ಬಂದು, ಅವರನ್ನು ತಡೆದು ನಿಲ್ಲಿಸಿದುದರಿಂದ, ಅಲ್ಲೊಂದು ಕದನ ಕೋಲಾಹಲವೇ ನಡೆದು, ಅದರಲ್ಲಿ ಬಲರಾಮ ಪ್ರತಾಪ ಪ್ರಯೋಗದಿಂದ ಶಿಶುಪಾಲಾದ್ಯರು ಸಮರದಲ್ಲಿ ಸೋಲನ್ನನುಭವಿಸಿ ಹಿಂದೆ ಸರಿದಾಮೇಲೆ, ಕೃಷ್ಣ–ರುಗ್ಮಿಗಳಲ್ಲಿ ನಡೆದ ಯುದ್ಧದಲ್ಲಿ ಕೃಷ್ಣನ ಕೈಸೆರೆಗೆ ಸಿಕ್ಕಿದ ರುಗ್ಮಿಯನ್ನು, ರುಗ್ಮಿಣಿಯ ಪ್ರಾರ್ಥನಾನುಸಾರವಾಗಿ ಕೃಷ್ಣನು ಸೆರೆಬಿಟ್ಟು, ಅವನ ಮಾನಖಂಡನಾರ್ಥವಾಗಿ ಅವನ ಶಿರಮುಂಡನವನ್ನು ಮಾಡಿಬಿಡಲು, ಅವನು ಅಪಮಾನದ ಅನುಭವದ ಸ್ಥಿತಿಯಲ್ಲಿ ಮನೆಗೆ ಮರಳುವುದಕ್ಕೆ ಮನಸ್ಸಿಲ್ಲದೆ ಅಲ್ಲಿಂದ ಭೋಜಕಟಕ ಎಂಬಲ್ಲಿಗೆ ಓಡಿಹೋದಾಮೇಲೆ, ಭೀಷ್ಮಕನೂ ತತ್ಸತಿಯೂ, ದುಷ್ಪುತ್ರನು ದೂರವರ್ಜಿತನಾದುದರ ಜತೆಗೆ ಸತ್ಪುತ್ರಿಯ ಸುವಾಂಛಿತವು ಸಫಲವಾದ ಸಂತೋಷದಿಂದ ಸಂಭೃತರಾಗಿ, ಸಕಲ ಆಪ್ತೇಷ್ಟ ಬಂಧು-ಬಾಂಧವ ಪುರಜನ-ಪರಿಜನ ಸಮೇತರಾಗಿ, ಬಹು ವಿಜೃಂಭಣೆಯಿಂದ ವಿಧಿವತ್ತಾಗಿ ವಿವಾಹೋತ್ಸವವನ್ನು ನೆರವೇರಿಸಿ, ವಧೂವರರಾದ ರುಗ್ಮಿಣೀ–ಕೃಷ್ಣರಿಗೆ ಆರತಿ ಮಾಡಿದರು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೪೩ ಸುಭದ್ರಾ ಕಲ್ಯಾಣ ಪ್ರಸಂಗ

ಆಪ್ತರೊಡನೆ ಆಲೋಚನೆ ನಡೆಸಿಯೋ, ಗುರೂಪದೇಶವನ್ನು ಗಮನಿಸಿಯೋ, ಶಾಸ್ತ್ರ ಸೂಕ್ತಿಗಳನ್ನು ಸಂಗ್ರಹಿಸಿಯೋ, ಸಾಧು ಸಂತರ ಸದ್ಬೋಧನೆಗಳನ್ನು ಸಂಲಕ್ಷಿಸಿಯೋ, ಸದ್ಗ್ರಂಥಗಳನ್ನು ಪಠಿಸಿಯೋ, ಸದ್ವಿದ್ವಾಂಸರ ಸಲಹೆಗಳನ್ನು ಸಂಪಾದಿಸಿಯೋ—ಹೀಗೆ ವಿವಿಧ ವಿಧಾನಗಳಿಂದ ವಿಚಾರ ಶಕ್ತಿಯನ್ನು ವರ್ಧಿಸಿಕೊಂಡು, ಸ್ವಕೀಯವಾದ ಕಾರ್ಯಕ್ರಮದ ನ್ಯಾಯ ನಿರ್ಣಯವನ್ನು ಸಂಗ್ರಹಿಸಿಕೊಂಡು, ತದನುಸರಣೆಯಿಂದ ಮುಂಬರಿಯಬೇಕಾದುದು ಸತ್ಫಲಸಂಪ್ರಾಪ್ತಿಯ ಸದಭಿಲಾಷೆಯುಳ್ಳ ಸದುದ್ಯೋಗಿಗೆ ಮುಖ್ಯವು. ಇದನ್ನುಳಿದು, ತನ್ನ ಸಂಕುಚಿತ ವಿಚಾರಶಕ್ತಿಯ ಮಿತಿಯೊಳಗೆ ನ್ಯಾಯ ನಿರ್ಣಯ ಮಾಡಿಕೊಳ್ಳುವವನ ಕಾರ್ಯಕ್ರಮಕ್ಕೆ ಸತ್ಫಲ ಸಂಪ್ರಾಪ್ತಿಯು ಸಂದೇಹಾಸ್ಪದವಾದದ್ದು. ತನ್ನ ಅಪಕ್ವ ಬುದ್ಧಿ ಜನ್ಯ ಅಲ್ಪ ವಿಚಾರದಿಂದ ತೊಡಗಿದ ಕಾರ್ಯವು, ಕಾರ್ಯನಿರ್ವಾಹಕನನ್ನು ಬಾಧಿಸುವುದರಲ್ಲಿಯೇ ಪರಿಣಮಿಸುವುದು. ಪಥಿಕನು ತನ್ನ ಮಾರ್ಗಕ್ರಮಣದಲ್ಲಿ ನಡೆವಾಗ ತಾನು ಎಡವಲಾರೆನೆಂಬ ಸ್ವಸ್ಥಿತಿ ಧೈರ್ಯವುಳ್ಳವನಾದರೂ, ಮಾರ್ಗದ ಪರಿಚಯವುಳ್ಳವನಾದರೂ, 'ದೃಷ್ಟಿಪೂತಂನ್ಯಸೇಸ್ಪಾದಂ' ಎಂಬ ಎಚ್ಚರಿಕೆಯನ್ನಿಟ್ಟುಕೊಳ್ಳುವುದು ಅವನ ಗಮನ ಭದ್ರತೆಗೆ ಉಚಿತ ಉಪಾಯವು. ಇದು, ಪಾಂಡವರಲ್ಲಿ ಒಬ್ಬನಾದ ಅರ್ಜುನನು, ತಾನು ಕಾರಣಾಂತರದಿಂದ ತನ್ನಣ್ಣನ ರತಿಭೋಗ ಮಂದಿರ ಪ್ರವೇಶ ಮಾಡಿದ ದೋಷ ಪರಿಹಾರಕ್ಕಾಗಿ, ತೀರ್ಥಯಾತ್ರಾ ಪರ್ಯಟನಗೈಯುತಿದ್ದು, ಒಂದು ಸಂದರ್ಭದಲ್ಲಿ ರಾಮೇಶ್ವರದಲ್ಲಿ ಅವನಿಗೆ ಸಂಧಿಸಿದ ಹನುಮಂತನಿಗೂ ಅವನಿಗೂ ಪಂಥ ಪ್ರತಿಪಂಥದ ಪರಸ್ಪರ ಸ್ಪರ್ಧೆಯ ವ್ಯವಹಾರ ನಡೆದುದರಲ್ಲಿ ಅರ್ಜುನನು ಸೋತು, ಸ್ಪರ್ಧಾರಂಭದಲ್ಲಿ ನಿರ್ಣಯಿಸಲ್ಪಟ್ಟಿದ್ದ ಪಂಥದ ಶರ್ತಕ್ಕನುಸರಿಸಿ, ಅವನು ಅಗ್ನಿಗಾಹುತಿಯಾಗುವ ಆತ್ಮಬಲಿಗೆ ಸಿದ್ಧನಾಗಿ, ಆ ವೇಳೆಯಲ್ಲಿ ತನ್ನ ವಿಚಾರ ರಾಹಿತ್ಯದ ಅಪ್ರಬುದ್ಧತೆಗಾಗಿ ಪಶ್ಚಾತ್ತಾಪಪಡುತ್ತಾ ಗರ್ವವಿವರ್ಜಿತ

ಶುದ್ಧಾಂತಃಕರಣದಿಂದ ದೇವಪ್ರಾರ್ಥನೆಯನ್ನು ಮಾಡಲು, ಭಕ್ತ ಸಂರಕ್ಷಣಾ ಉದ್ದೇಶದಿಂದ ಶ್ರೀಕೃಷ್ಣನು ಕಾಪಟ್ಯವನ್ನು ಪ್ರಯೋಗಿಸುತ್ತಾ ವಿಪ್ರ ವೇಷಧಾರಕನಾಗಿ ಬಂದು, ಅರ್ಜುನ ಹನುಮಂತರ ಪಂಥವು ಮತ್ತೊಮ್ಮೆ ನಡೆಯುವಂತೆ ತಂತ್ರವನ್ನು ನಡೆಸಿ, ಅದರಲ್ಲಿ ಹನುಮಂತನೇ ಅರ್ಜುನನಿಗೆ ಸೋಲುವಂತೆ ಯುಕ್ತಿಗೈದು, ಹನುಮಂತನಿಗೆ ರಾಮರೂಪದಿಂದಲೂ, ಅರ್ಜುನನಿಗೆ ಕೃಷ್ಣರೂಪದಿಂದಲೂ ಸಾಕ್ಷಾದ್ದರ್ಶನ ನೀಡಿದುದರ ಮೂಲಕ ಅವರಿಬ್ಬರಿಗೂ ಸಾಂತ್ವನಗೈದು, ಅವರಿಬ್ಬರೊಳಗೆ ಪರಸ್ಪರ ಸ್ನೇಹಭಾವ ಸ್ಥಾಪನೆಯಾಗುವಂಥ ಸಂಧಾನವನ್ನು ರಚಿಸಿ, ತದ್ಘಟನಾನಂತರ ಅರ್ಜುನನು ಶ್ರೀಕೃಷ್ಣ ಸೂಚನಾನುಸಾರವಾಗಿ ಸನ್ಯಾಸಿ ವೇಷಧಾರಣೆಯಲ್ಲಿರುತ್ತಾ ದ್ವಾರಾವತಿಯ ರಾಜಗೃಹದ ಬಳಿಗೆ ಬಂದಿರಲು, ಇವನ ನಿಜಸ್ವರೂಪವನ್ನರಿಯದೆ ಬಲರಾಮನು, ಇವನನ್ನು ಯಾವನೋ ಒಬ್ಬ ಸನ್ಯಾಸಿಯಾದ ಮಹಾಪುರುಷನೆಂದು ಗ್ರಹಿಸಿ, ಇವನನ್ನು ಭಕ್ತಿಯಿಂದ ವಂದಿಸಿ, ನಯವಿನಯಗಳಿಂದ ಸ್ವಾಗತಿಸಿ, ಆದರದಿಂದ ಸತ್ಕರಿಸಿ, ಉಪಚರಿಸಿ, ಮನ್ನಿಸಿದ್ದಲ್ಲದೆ, ತತ್ಸಮಯಾದಾರಂಭವಾಗುವ ಚಾತುರ್ಮಾಸ್ಯ ನಿಯಮ ಪಾಲನೆಯ ಸೌಕರ್ಯಕ್ಕಾಗಿ ಸಮೀಪದ ಪ್ರಮದಾವನಸ್ಥ ದೇವಿ ಮಂದಿರವೊಂದರಲ್ಲಿ ಸುವ್ಯವಸ್ಥಾನ್ವಿತನಾಗಿ ಇರುವಂತೆ ಏರ್ಪಡಿಸಿದ್ದಲ್ಲದೆ, ಅವಿವಾಹಿತಳಾಗಿದ್ದ ತನ್ನ ಸಹೋದರಿ ಸುಭದ್ರಾ ದೇವಿಯನ್ನು ಇವನ ಉಪಚಾರದ ವ್ಯವಸ್ಥಾಪನೆಗೆಂದು ನಿಯುಕ್ತಗೊಳಿಸಲು, ಶ್ರೀಕೃಷ್ಣನು ಬಲರಾಮನ ಆ ಸನ್ಯಾಸಿ ಸಮ್ಮಾನದ ಕೃತಿಯನ್ನು ಖಂಡಿಸಿ, ಸ್ಪಷ್ಟ ವಿಚಾರ ಪರಾಮರ್ಶೆಯಿಲ್ಲದೆ ಆ ಯತಿಯನ್ನು ಆಶ್ರಯ ಕೊಟ್ಟು ಆದರಿಸಿದುದರಿಂದ ಅಯೋಚಿತ ಅನಿಷ್ಟಾಗಮನವನ್ನು ಊಹಿಸಲು ಆಸ್ಪದವಿದೆಯೆಂದು ತರ್ಕಮಾಡಿದರೂ, ಬಲರಾಮನು ಕೃಷ್ಣನ ಆ ಹಿತವಾದ ತರ್ಕವನ್ನು ನಿರ್ಲಕ್ಷಿಸಿ ತಿರಸ್ಕರಿಸಿ, ಪ್ರೌಢ ವಯಸ್ಕಳಾದ ಸುಭದ್ರೆಗೆ ವಿವಾಹಗೈಸುವ ತನ್ನ ಹೊಣೆಯನ್ನರಿತು, ತನ್ನ ಸ್ವತಂತ್ರೇಚ್ಛೆಯಿಂದ, ಹಸ್ತಿನಾವತಿಯ ದುರ್ಯೋಧನನಿಗೆಂದು ಆಕೆಯನ್ನು ನಿಶ್ಚಯಿಸಿ, ವಿವಾಹ ನಿಶ್ಚಯವನ್ನು ಮಾಡಿ, ತತ್ಸಂಬಂಧದ ಸಕಲ ಸನ್ನಾಹಗಳನ್ನು ಸಿದ್ಧಗೊಳಿಸಿದಾ

ಮೇಲೆ ನಿಶ್ಚಿತ ವೇಳೆಗೆ ಸರಿಯಾಗಿ ಬಂದು ತಲ್ಪಿದ ಹಸ್ತಿನಾವತಿಯ ಸಡಗರದ ದಿಬ್ಬಣವನ್ನು ಸ್ವಾಗತಿಸಿ, ಸತ್ಕರಿಸಿ ಉಪಚರಿಸುತ್ತಿರುವಾಗ, ಸುಭದ್ರಾ ವಧುವು ಸನ್ಯಾಸಿ ಆಶೀರ್ವಾದ ಯಾಚನಾವ್ಯಾಜದಿಂದ ಅವನಿದ್ದಲ್ಲಿಗೆ ಬಂದು, ಅವನ ನಿಜ ಸ್ವರೂಪ ಸಂದರ್ಶನಾತ್ ಅವನು ಅರ್ಜುನನೆಂಬ ಸತ್ಯ ವಿಷಯವನ್ನು ಸಂಗ್ರಹಿಸಿ, ಮೊದಲಿನಿಂದಲೂ ಸ್ವಾಂತರಂಗಸಂಸ್ಥಿತವಿದ್ದ ತತ್ಪರಪ್ರೇಮಾನುಸರಣೆಯಿಂದ, ಆ ಅರ್ಜುನನನ್ನು ಅಲ್ಲೇ ವರಿಸಿ, ಅಲ್ಲೇ ಸಿದ್ಧವಿದ್ದ ಅವನ ಸ್ಯಂದನವನ್ನೇರಿ, ಅವನು ರಥಿಕನಾದುದಕ್ಕೆ ತಾನೇ ತತ್ಸಾರಥ್ಯವನ್ನು ಸ್ವೀಕರಿಸಿ, ಅವನಾ ಸಾಂಗತ್ಯದಲ್ಲಿ ಸಂತೋಷಪಡುತ್ತಿರಲು, ಈ ಸಮಾಚಾರ ಸಂಗ್ರಹದಿಂದ ದಿಗಿಲು ಬಿದ್ದ ಬಲರಾಮನು ಅಲ್ಲಿದ್ದ ದುರ್ಯೋಧನಾದ್ಯರನ್ನು ಕೂಡಿಕೊಂಡು ಆ ಸುಭದ್ರಾರ್ಜುನರನ್ನು ತಡೆದುದರಿಂದ ಅನಿವಾರ್ಯವಾದ ಯುದ್ಧವು ಘಟಿಸಿ, ಆ ಯುದ್ಧದಲ್ಲಿ ದುರ್ಯೋಧನಾದಿಗಳು ಸೋತು ಅಲ್ಲಿಂದ ನಿವರ್ತಿತರಾದ ಮೇಲೆ ಸ್ವತಃ ಬಲರಾಮನೇ ಅರ್ಜುನನೊಡನೆ ಹೋರಾಡಿ ಗೆಲ್ಲಲಾರದೆ, ತನ್ನ ಆಯುಧವೂ ಅರ್ಜುನನಿಂದ ಸೂರೆಯಾದುದನ್ನನುಭವಿಸಿ, ತನ್ನೀ ಅಪಜಯದಿಂದ ಖಿನ್ನನಾಗಿರಲು, ಶ್ರೀಕೃಷ್ಣನು ಬಂದು ಬಲರಾಮನ ಆಯುಧವನ್ನು ಅರ್ಜುನನಿಂದ ಅವನಿಗೇ ಮರಳಿ ಕೊಡಿಸಿ, ಅವರೊಳಗೆ ಅನ್ಯೋನ್ಯ ಸ್ನೇಹ ಸಂಘಟನೆಯಾಗುವ ಸಂಧಾನ ಮಾಡಿ, ಸುಭದ್ರಾರ್ಜುನರ ಕಲ್ಯಾಣ ಮಹೋತ್ಸವದ ಮಂಗಲ ಕಾರ್ಯವನ್ನು ಮಾಡಿಸಿದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೪೪ ಗಿರಿಜಾ ಕಲ್ಯಾಣ ಪ್ರಸಂಗ

ಕಾಮ, ಕ್ರೋಧ, ಮದ, ಮತ್ಸರ, ಮೋಹ ಮತ್ತು ಲೋಭ-ಈ ಆರು ಗುಣಗಳನ್ನು "ಷಡ್ವೈರಿ"ಗಳೆನ್ನುತ್ತಾರೆ. ಯಾಕೆಂದರೆ, ಇವುಗಳಲ್ಲಿ ಯಾವುದಾದರೊಂದರ ಅನುಸರಣೆಯೂ ದುಃಖದಾಯಕ ದುರ್ದೆಶೆಯನ್ನು ದೊರಕಿಸುವಂಥಾದ್ದು. ನರಕದ್ವಾರಗಳೆಂದು ಗಣ್ಯವಾದ ಮೂರು ಮುಖ್ಯ ಮಹಾ ದುರ್ಗುಣಗಳೆಂದರೆ, ಕಾಮ, ಕ್ರೋಧ ಮತ್ತು ಲೋಭಗಳೆಂದು ಶ್ರೀ ಭಗವದ್ಗೀತಾ ಸೂಕ್ತಿಯೂ

ಇದೆ. "ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿ ವಿಭ್ರಮಃ। ಸ್ಮೃತಿಭ್ರಂಶಾತ್ ಬುದ್ಧಿನಾಶಃ ಬುದ್ಧಿನಾಶಾತ್ ಪ್ರಣಶ್ಯತಿ॥" ಎಂದು ಶ್ರೀಕೃಷ್ಣನು, ಕೋಪವೆಂಬ ದುರ್ಗುಣದಿಂದ ಸ್ವನಾಶ ಸಂಭವಕ್ಕೆ ಅನುಕ್ರಮಣಿಕೆಯನ್ನು ವಿವರಿಸಿದ್ದಾನೆ. 'ಕೋಪವೆಂಬುದು ತಾನು ಪಾಪದ ನೆಲೆಗಟ್ಟು' ಎಂಬ ಸರ್ವಜ್ಞ ಸುವಾಣಿಯು ಸತ್ಯ ನಿರೂಪಣೆಯು ಸಮಸ್ತ ಸದ್ವಿಚಾರಶೀಲರಿಗೆ ಸಂಗ್ರಾಹ್ಯವೇ ಸರಿ. ಆಧ್ಯಾತ್ಮ ತತ್ವವಾದಿಗಳ ಸಂಶೋಧನೆಯಂತೆ, ಗುಣಗಳಿಂದ ಕಲುಷಿತವಾಗಿ ಚಾಂಚಲ್ಯಗೊಳ್ಳುವ ಚಿತ್ತದಲ್ಲಿ ಜ್ಞಾನೋತ್ಪತ್ತಿಯಾಗಲಾರದು. ಈ ವಿಚಾರವು ಸತ್ಯಸಮ್ಮತವಾದುದರಿಂದ, ಗುಣಕಾಲುಷ್ಯದಿಂದಾಗುವ ಚಿತ್ತಚಾಂಚಲ್ಯ ಕೋಪವೇ ಕಾರಣವೆಂಬ ಸುತರ್ಕರೀತ್ಯಾ ಕೋಪಗ್ರಸ್ತನಿಗೆ ಜ್ಞಾನೋತ್ಪತ್ತಿ ಇಲ್ಲವೆಂದು ವಿವೇಚ್ಯವಾಗುತ್ತದೆ. ಆದುದರಿಂದ, ಜ್ಞಾನ ಸಂಗ್ರಹದ ಶ್ರೇಯಸ್ಸಾಧನಾ ವಿಧಾನ ದೃಷ್ಟಿಯಲ್ಲಿ ಕೋಪವೆಂಬುದು ಸರ್ವಥಾ ಸಂತ್ಯಾಜ್ಯವು. ಭಗವದನುಗ್ರಹಸಾಧನಾತ್ಮಕವಾದ ಭಕ್ತಿಗೆ ಭಾವಸ್ಥ ಭಗವತ್ಪ್ರೇಮವೇ ಮುಖ್ಯ ಭಂಡವಾಳವು. ಪ್ರೇಮಕ್ಕೆ ವಿರುದ್ಧವೇ ಕೋಪವು. ಆದುದರಿಂದ ಕೋಪಾವಿಷ್ಟನಾಗುವವನು ಪ್ರೇಮಸಂಪನ್ನನಾಗಲಾರನು. ಏತದ್ರೀತ್ಯಾ ಭಕ್ತಿ ತತ್ವವಿವೇಚನಾ ದೃಷ್ಟಿಯಿಂದಲೂ ಕೋಪವೆಂಬ ಗುಣವು ಸರ್ವಥಾ ತಿರಸ್ಕರಣೀಯವು. ದಯೆಯೇ ಧರ್ಮದ ಮೂಲವಾದರೆ, ಕೋಪವು ದಯೆಗೆ ವಿರುದ್ಧ ಗುಣವಾಗಿರುವುದರಿಂದ ಧರ್ಮ ವಿವೇಚನಾ ದೃಷ್ಟಿಯಿಂದಲೂ ಕೋಪವು ಸರ್ವಥಾ ನಿಷಿದ್ಧವು. "ಸನಿತ್ಯ ಶ್ರೇಯಸೀ ಕ್ಷಮಾ" ಎಂಬಿತ್ಯಾದಿ ಶುಕ್ರನೀತಿ ವಾಕ್ಯಾನುಸಾರವಾಗಿ, ಸಮಸ್ತ ಸಂದರ್ಭಗಳಲ್ಲಿಯೂ ಕೋಪಾಭಾವವು ವ್ಯವಹಾರ ಪ್ರಪಂಚಕ್ಕೆ ಸರಿಯಲ್ಲವೆಂದು ಒಪ್ಪಿದರೆ, ಆತ್ಮ ಸಂರಕ್ಷಣಾವಶ್ಯಕ ಸಂದರ್ಭದಲ್ಲಿಯೋ, ಶಿಕ್ಷಣ ದಾನಾದಿ ಪರಹಿತ ಕೃತಿಸಾಧನಾರ್ಥದ ಸಂದರ್ಭದಲ್ಲಿಯೋ, ಹಿತಮಿತವಾಗಿ ಪ್ರಯೋಗಿಸುವ ಕೋಪ ನಟನೆಗೆ ಸಮ್ಮತಿ ಎಂದು ತಾತ್ಪರ್ಯವೇ ಹೊರತು, ಪರಘಾತುಕ ಪ್ರವೃತ್ತಿಯುಳ್ಳ ಯಥಾರ್ಥ ಕೋಪಕ್ಕೆ ಸಮ್ಮತಿಯಲ್ಲವು. ದೈವ ಮತ್ತು ಆಸುರೀ ಎಂದು ದ್ವಿವಿಧವಾಗಿ ವಿಭಜಿಸ

ಲ್ಪಡುವ ಗುಣಸಂಪತ್ತುಗಳನ್ನು ವಿಮರ್ಶಿಸಿದರೆ, ಮನುಷ್ಯನ ನೈಚ್ಯ
ಸಿದ್ಧಿಗಾಗುವ ಆಸುರೀಗುಣಸಂಪತ್ತುಗಳಲ್ಲಿ ಕೋಪವು ಒಂದು.
ಆದುದರಿಂದ ನೈಚ್ಯ ನಿರಾಕರಣೆ ಮಾಡುವ ವಿವೇಕಿಗೆ ಕೋಪವು
ಸುತರಾಂ ಸುತ್ಯಾಜ್ಯ. ದೇಹಶಾಸ್ತ್ರರೀತ್ಯಾ ವಿಚಾರಿಸಿದರೆ, ಕೋಪ
ದಿಂದ ಉಷ್ಣವೂ (ಪಿತ್ಥ) ಉಷ್ಣದಿಂದ ಕೋಪವೂ, ಬೀಜವೃಕ್ಷ
ನ್ಯಾಯದಂತೆ ಪರಸ್ಪರೋಪಾದಕಗಳಾಗಿರುವುವು. ಆದರೆ ದೈಹಿಕ
ಉಷ್ಣಾತಿರೇಕದಿಂದ ಸಹಜವಾಗಿ ಕೋಪವುಂಟಾದರೂ, ಮಾನಸಿಕ
ವ್ಯವಸಾಯದಿಂದ ಕೋಪನಿರೋಧ ಶಕ್ತಿಯನ್ನು ಸಿದ್ಧಿಮಾಡಿ
ಕೊಳ್ಳಲು ಸಾಧ್ಯವಿದೆ. ಕೋಪರಾಹಿತ್ಯದ ಶಾಂತ ಸ್ಥಿತಿ ಸಂಜನಿಸಿದರೆ
ಅದು ಆರೋಗ್ಯ ಸಂವರ್ಧನೆಗೂ ಸುವ್ಯವಸ್ಥೆಯು. ಜಾತಿ ಚಾಂಡಾಲ
ನಿಗಿಂತ ಕರ್ಮ ಚಾಂಡಾಲನು ಕೀಳು ಎಂದು ಸಮಾಜ ಶಾಸ್ತ್ರವೂ
ಸಮ್ಮತಿಸುತ್ತದೆ. ಕೋಪವೆಂಬ ದುರ್ಗುಣದಿಂದ ಸಹಿತನಾದವ
ನೊಬ್ಬ ಕರ್ಮಚಾಂಡಾಲನೇ ಸರಿ. ಆದುದರಿಂದ ಸಮಾಜ ಶಾಸ್ತ್ರ
ದೃಷ್ಟಿಯಿಂದಲೂ ಕೋಪವು ದೂಷ್ಯವೇ ಹೌದು. ಹೀಗೆ ಯಾವ
ಶಾಸ್ತ್ರ ತರ್ಕ ದೃಷ್ಟಿಕೋನದಿಂದ ನೋಡಿದರೂ, ಕೋಪವೆಂಬುದು
ತಿರಸ್ಕರಣೀಯವಾದ ದುರ್ಗುಣವೇ ಸರಿ. ಇದು, ಒಂದಾನೊಂದು
ಪುಣ್ಯ ಪೂರ್ವಕಾಲದಲ್ಲಿ ಕೈಲಾಸಪತಿ ಶಂಕರನ ಅಧ್ಯಕ್ಷತೆಯಲ್ಲಿ
ನಡೆಯುತ್ತಿದ್ದ ದೇವತೆಗಳ ಮತ್ತು ಋಷಿಗಳ ಸಮ್ಮೇಳನದ ಒಂದು
ಮಹಾಸಭೆಗೆ, ಆ ಶಂಕರನ ಮಾವನಾದ ಪ್ರಾಚೀನ ಬರ್ಹಿಯ ದಕ್ಷ
ನೆಂಬವನು ಪ್ರವೇಶ ಮಾಡಿದಾಗ, ಅವನು ಅಲ್ಲಿಯವರೆಲ್ಲರಿಂದ
ಗೌರವಿಸಲ್ಪಟ್ಟರೂ ಶಂಕರನೊಬ್ಬನಿಂದ ಗೌರವಿಸಲ್ಪಡದಿದ್ದುದರಿಂದ
ತನಗೆ ಶಂಕರನಿಂದ ಅಪಮಾನವಾಯಿತೆಂಬ ಭ್ರಮಾಬುದ್ಧಿಜನ್ಯ
ವಿಕಲ್ಪ ವಿಚಾರವನ್ನು ತಳೆದು, ಶಂಕರನಲ್ಲಿ ಸಿಟ್ಟಾಗಿ, ಮನೆಗೆ ಮರಳಿ,
ತನ್ನ ತಂದೆಯಿಂದ ಪ್ರಜಾಧೀಶ್ವರತ್ವದ ಅಧಿಕಾರ ಪಡೆದು, ತಾನು
ಪಡೆದಿದ್ದ ಅಪಮಾನಕ್ಕೆ ಪ್ರತೀಕಾರ ಮಾಡುವ ಉದ್ದಿಶ್ಯ ಶಂಕರನನ್ನು
ಅವಮಾನಿಸಬೇಕೆಂದು ಬಗೆದು, ಆ ಶಂಕರನೊಬ್ಬನಿಗೆ ಆಮಂತ್ರಣ
ವನ್ನು ನಿರಾಕರಿಸಿ, ಮಿಕ್ಕುಳಿದ ದೇವಾನುದೇವತೆಗಳನ್ನು ಆಮಂತ್ರಿಸಿ,
ಅವರೆಲ್ಲರನ್ನು ಸೇರಿಸಿ, ಮಹಾಸಭೆಯನ್ನು ವಿರಚಿಸಿ, ಒಂದು ಮಹಾ

ಯಜ್ಞವನ್ನು ಆರಂಭಿಸಿರಲು, ಅತ್ತ ಕೈಲಾಸದ ಶಂಕರನ ಸತಿಯಾದ ಗೌರಿ ದೇವಿಯು, ದಕ್ಷ ಯಜ್ಞಾತಿಥ್ಯ ಸ್ವೀಕಾರಾರ್ಥ ನಿಮಂತ್ರಣೋತ್ಸುಕತೆಯಿಂದ ಸಾಗುತ್ತಿದ್ದ ವಿಪ್ರಸಮೂಹಾದಿಗಳಿಂದ ಈ ವೃತ್ತಾಂತವನ್ನು ಸಂಗ್ರಹಿಸಿ, ತಾನೂ ಪತಿಸಹಿತ ಅಲ್ಲಿಗೆ ಅಭಿಗಮಿಸಬೇಕೆಂಬ ಅತ್ಯಂತಾಕಾಂಕ್ಷೆಯಿಂದ ತನ್ನ ಪತಿಯನ್ನು ಎಷ್ಟು ಆ ಸಲುವಾಗಿ ಆಕಾಂಕ್ಷೆಪಡಿಸಿದರೂ, ದಕ್ಷನ ಯಜ್ಞ ಸಂಕಲ್ಪದ ಅಂತರಂಗವನ್ನು ಅರಿತಿದ್ದ ಶಂಕರನು ಅದಕ್ಕೊಪ್ಪದಿರಲು, ಗೌರಿಯು ತೌರು ಮನೆಯ ನಿವಾರ್ಯವಾಗದ ಅತಿಶಯದ ಮೋಹದಿಂದ ಮನಬದ್ಧಳಾದುದರಿಂದ ಶಂಕರನ ತನ್ನಿರೋಧ ಕೋಪದೇಶವನ್ನುಲ್ಲಂಘನೆ ಮಾಡಿ ತಾನೊಬ್ಬಳೇ ಹೊರಟು ಹೋಗಿ ದಕ್ಷನ ಯಜ್ಞ ಸಭೆಯನ್ನು ಪ್ರವೇಶ ಮಾಡಿದಾಗ, ಅಲ್ಲಿದ್ದ ಅವಳ ತಾಯಿಯೊ, ತಂದೆಯೋ (ದಕ್ಷ) ಮಿಕ್ಕುಳಿದ ಅವಳ ಬಂಧುಜನರೋ, ಸ್ನೇಹಿತರೋ, ಯಾರೂ ಅವಳನ್ನು ಸ್ವಾಗತಿಸದೆ, ಸತ್ಕರಿಸದೆ, ಮನ್ನಣೆಯ ಮಾತಿಂದಲೂ ಉಪಚರಿಸದೆ ಉಪೇಕ್ಷೆಗೈದರೂ, ಅದನ್ನು ಸಹಿಸಿಕೊಂಡು ಸಭೆಯಲ್ಲಿ ಸಂಚಾಲಿತವಿದ್ದ ಅಂದಿನ ಯಜ್ಞ ಕಾರ್ಯಕ್ರಮದಲ್ಲಿ ಸಂಲಕ್ಷ್ಯ ಬದ್ಧಮನಸ್ಕಳಾಗಿ ಸ್ವಸ್ಥವಾಗಿರುತ್ತಾ, ಕಡೆಗಲ್ಲಿ ತನ್ನ ತಂದೆಯು ಯಜ್ಞಕರ್ಮ ನಿಯಮದಂತೆ ಶಂಕರನಿಗೆ ಬಲಿ ಸಮರ್ಪಣೆ ಮಾಡುವುದನ್ನು ತಿರಸ್ಕರಿಸಿ ಆ ಶಂಕರನನ್ನು ದ್ವೇಷಿಸುತ್ತಿರುವುದನ್ನು ಕಂಡು, ಈ ರೀತಿಯಿಂದಾಗುತ್ತಿದ್ದ ತನ್ನ ಗಂಡನ ಅಪಮಾನದಿಂದ ತನ್ನ ಮನಸ್ಸಿನ ಮೇಲಾದ ಪರಿಣಾಮದಿಂದ ಬಹು ದುಃಖಿತಳಾಗಿ, ಪತಿಯ ಮಾನಭಂಗ - ಪಿತನ ಕರ್ಮನಿಯಮ ಭಂಗ — ಈ ಎರಡೂ ಯಜ್ಞ ದೋಷಗಳಿಗೆ ಅನುವ್ಯಥೆ ತಾಳಿ, ಮರುಗುತ್ತಿದ್ದದ್ದಕ್ಕೆ, ಅಲ್ಲಿಯ ದಕ್ಷಾದಿ ಸಮಸ್ತ ಸಭಿಕರೂ ಅವಳ ಮರುಗಾಟಕ್ಕೆ ಪರಿಹಾಸ್ಯ ಮಾಡಿದಾಗ, ತನ್ನ ದೈನ್ಯತೆಗಾಗಿ ದುಃಖವನ್ನೂ ತನ್ನ ತಂದೆಯ ಕೆಡು ನಡೆಗಾಗಿ ಕೋಪವನ್ನೂ ತಾಳಿದ ಅವಳು, ಕಳವಳಪಟ್ಟು ಕೊನೆಗೆ ತಾನೇ ಶಂಕರಾರ್ಪಣೆಯ ಬಲಿಯಾಗುವುದಕ್ಕೆ ಮನಸಾ ನಿಶ್ಚಯ ಮಾಡಿ, ಯಜ್ಞ ಕುಂಡದ ಬಳಿಯಲ್ಲಿ ಯೋಗಾಗ್ನಿಯನ್ನು ತನ್ನ ದೇಹದಲ್ಲಿ ಉತ್ಪಾದಿಸಿಕೊಂಡು, ಅದರಲ್ಲಿ ದಹ್ಯಳಾಗಿ ಪ್ರಾಣ

ತ್ಯಜಿಸಲು, ಈ ವೃತ್ತಾಂತವನ್ನು ಕೈಲಾಸದಲ್ಲಿ ನಾರದಮುಖೇನ ತಿಳಿದ ಶಂಕರನು, ಕೋಪೋದ್ದೀಪ್ತನಾಗಿ, ತತ್ಕೋಪ ಜ್ವಾಲೆಯಿಂದ ವೀರಾವೇಶಭರಿತನಾದ ವೀರಭದ್ರನೆಂಬ ಓರ್ವ ಉತ್ತುಂಗ ಪರಾಕ್ರಮಿ ಪುತ್ರನನ್ನು ಉತ್ಪಾದಿಸಿ, ಅವನನ್ನು ದಕ್ಷನ ಶಿಕ್ಷೆಗಾಗಿ ನಿಯೋಜಿಸಿದುದಕ್ಕೆ, ಆ ವೀರಭದ್ರನು ದಕ್ಷ ಯಜ್ಞ ಸಭಾ ಪ್ರವೇಶಮಾಡಿ, ತನ್ನ ಅಪ್ರತಿಹನ್ಯಮಾನ ಪ್ರತಾಪವನ್ನು ಪ್ರದರ್ಶಿಸಿ, ತತ್ಸಭಿಕರಾದ ಸಮಸ್ತ ಸುರರನ್ನೂ ಸಂತ್ರಸ್ತರನ್ನಾಗಿ ಮಾಡಿ, ಅವರಲ್ಲಿ ಪ್ರತ್ಯೇಕನೂ ಅಂಗ ವಿಕಲನಾಗುವಂತೆ ಮಾಡಿ, ಕಡೆಗಾ ದಕ್ಷನ ಶಿರಚ್ಛೇದನ ಮಾಡಿ, ಅದನ್ನು ಅಲ್ಲಿಯ ಅಗ್ನಿಗೆ ಆಹುತಿ ಕೊಟ್ಟು ಮರಳಿದ ಮೇಲೆ, ಆ ಸುರರು ತಮ್ಮ ಅಪರಾಧಗಳಿಗೆ ಪಶ್ಚಾತ್ತಾಪಪಟ್ಟು ಕೈಲಾಸಕ್ಕೆ ಬಂದು ಶಿವಪ್ರಾರ್ಥನೆಗೈದುದಕ್ಕೆ, ಭಕ್ತ ಜನ ಇಷ್ಟಾರ್ಥಪ್ರದಾತೃತ್ವದ ನಿಯಮಾನುಸರಣೆಯಿಂದ ಶಂಕರನು ದಕ್ಷನಲ್ಲಿಗೆ ಬಂದು, ದೇವತೆಗಳ ಸಂತೃಪ್ತಿಯಾಗುವ ಸಂರಕ್ಷಣೆಯನ್ನು ಮಾಡಿ, ಶಿರಶೂನ್ಯವಾಗಿರುತ್ತಿದ್ದ ದಕ್ಷನ ಮುಂಡಕ್ಕೆ, ಯಜ್ಞಕ್ಕೆ ಬಲಿಯರ್ಥವಾಗಿ ಅಲ್ಲೇ ಮೀಸಲು ಇದ್ದ ಒಂದು ಆಡಿನ ಶಿರಸ್ಸನ್ನೇ ಸಂಧಿಸಿಟ್ಟು ಆ ದಕ್ಷನ ಪಶ್ಚಾತ್ತಾಪಪೂರ್ವಕದ ಪ್ರಾರ್ಥನೆಗೆ ಒಲಿದು ಆವನನ್ನು ಪ್ರಾಪ್ತಾನಿಷ್ಠ ವಿಮುಕ್ತ ಹರ್ಷಚೇತನನನ್ನಾಗಿ ಮಾಡಲು, ಆ ವೇಳೆಗೆ ಸುಪ್ರಸನ್ನನಾಗಿ ಸಂದರ್ಶನವಿತ್ತ ಶ್ರೀಮನ್ನಾರಾಯಣನು, ಶಂಕರನೂ ಯಜ್ಞಯಾಗಾದಿ ಪುಣ್ಯಕರ್ಮಗಳಲ್ಲಿ ಪೂಜಾರ್ಹನೇ ಸರಿ ಎಂದು ದಕ್ಷಾದಿ ಸಮಸ್ತರಿಗೂ ಉಪದೇಶವಿತ್ತು ತತ್ಪರಿಯಂತದ ಕಷ್ಟ ನಷ್ಟಗಳನ್ನು ಪರಿಹರಿಸಿ, ಗರ್ವ ವಿಮುಕ್ತಿಯಿಂದ ಪರಿಶುದ್ಧಾವಸ್ಥೆಗೆ ಪರಿವರ್ತಿತನಾದ ಆ ದಕ್ಷನಿಂದ ತದ್ಯಜ್ಞಕ್ಕೆ ಶುಭಸಮಾಪ್ತಿಯನ್ನು ಮಾಡಿಸಿ, ಶ್ರೀ ಶಂಕರ ನಾರಾಯಣರು ಸಮಸ್ತಜನ ಸುಖದಾಯಕ ಸನ್ಮಂಗಲವನ್ನು ನೀಡಿದ ಮೇಲೆ, ಸುರಸಂದೋಹವು ಸ್ವಸ್ಥಾನಕ್ಕೆ ಅಭಿಗಮಿಸಿದಾಗ, ಸತೀ ವಿಯೋಗದಿಂದ ಸಂತ್ರಸ್ತಮನಸ್ಕನಾದಾ ಶಿವನು ಕೈಲಾಸಾಭಿಗಮನಕ್ಕೆ ವಿಮನಸ್ಕನಾಗಿ, ಹಿಮಾಲಯ ಪರ್ವತದ ಒಂದಾನೊಂದು ಪ್ರದೇಶದಲ್ಲಿ ಏಕಾಂಗಿಯಾಗಿ, ನಿವೃತ್ತಿ ಧರ್ಮಾನುಷ್ಠಾನ ರೀತ್ಯಾ ಯೋಗವನ್ನು ಕೈಗೊಂಡು ತಪಸ್ವಿಯಾಗಿ

ಕಾಲಾಹರಣವನ್ನು ಮಾಡುತ್ತಿರಲು, ಪರ್ವತರಾಜ–ಮೇನಕಾ ಎಂಬ ರಾಜದಂಪತಿಗಳಿಗೆ ಕೆಲವು ಕಾಲ ನಿಸ್ಸಂತತಿಯ ದೆಶೆಯಿಂದ ದುಃಖ ದಾಯಕ ದುಃಸಹ ದುರ್ದೆಶೆಯು ಇರುತ್ತಿದ್ದರೂ, ಆಚರಿತ ಪುಣ್ಯ ಕರ್ಮ ಫಲಪ್ರಾಪ್ತಿಯಿಂದ ಆ ದುರ್ದೆಶೆಯು ದೂರ ಸರಿದು, ಸುದೈವ ಸಂಪ್ರಾಪ್ತಿಯಿಂದ ಸ್ತ್ರೀ ಶಿಶುವೊಂದು ಸಂಜನಿಸಿದಾಗ, ಅಪತ್ಯಭಾವಾತ್ಸಂಜನಿತ ಸುಪ್ರೇಮನಿದರ್ಶಕವಾಗಿ, ಅದಕ್ಕೆ "ಪಾರ್ವತಿ" ಎಂದು ನಾಮಕರಣವಂ ಮಾಡಿ. ಕ್ರಮೇಣ ಆ ಪಾರ್ವತಿಯು ಪ್ರಾಯ-ವಿದ್ಯಾ-ಬುದ್ಧಿ-ಶರೀರ ಸೌಷ್ಟವಾದಿಗಳಲ್ಲಿ ಪ್ರೌಢಾವಸ್ಥೆಗೆ ತಲುಪಿ ವಿವಾಹ ವಯಸ್ಕಳಾಗಲು, ಅನುಪದೇಶ್ಯ ವಾಗಿಯೂ, ಅನನ್ಯ ಪ್ರೇರಿತವಾಗಿಯೂ, ಸ್ವಚಿತ್ತ ಸಹಜ ಸಂಸ್ಕಾರ ಸಂಜನಿತ ಸ್ವೋದ್ಭವ ಶಿವಭಕ್ತಿಯು ಅವಳ ಅಂತಃಕರಣದಲ್ಲಿ ಅಂಕು ರಿಸಿ, ಕ್ರಮೇಣ ಅವಳ ಮನ ಬುದ್ಧಿಗಳನ್ನು ಆವರಿಸಿ, ಆ ಭಕ್ತಿಭಾವ ಪ್ರಚೋದನೆಯಿಂದ, ತಾನು ಶಿವ ಸತಿಯಾಗಬೇಕೆಂಬ ಅತ್ಯಂತಾಸಕ್ತಿ ಯನ್ನು ತಾಳಿ, ಅದಕ್ಕಾಗಿ ತಾನು ಶಿವನ ಸಾಕ್ಷಾತ್ ಸಂದರ್ಶನ ಪಡೆಯಲು ತಪಸ್ಸನ್ನು ಮಾಡಬೇಕೆಂದು ಸಂಕಲ್ಪಿಸಿದ್ದಕ್ಕೆ ಅವಳ ತಂದೆ-ತಾಯಿಗಳು ಪಿತೃಸಹಜವಾದ ಪುತ್ರೀಮೋಹದಿಂದ ಆಕೆಯನ್ನು ಆ ಸಂಕಲ್ಪದಿಂದ ನಿರೋಧಿಸಿದರೂ, ತ್ರಿಕಾಲಜ್ಞಾನಿ ನಾರದ ಮುನಿಯ ತತ್ಸಂದರ್ಭದ ಸದ್ಬೋಧನೆಯನ್ನವಧರಿಸಿ, ಆಕೆಯ ಪೂರ್ವ ವೃತ್ತಾಂತ ರಹಸ್ಯವನ್ನು ತಿಳಿದು, ಆಕೆಯೇ ದಕ್ಷಯಜ್ಞ ಸಂದರ್ಭ ದಲ್ಲಿ ಪತಿಪ್ರೇಮಪಾರವಶ್ಯದಿಂದ ಪ್ರಾಣಾರ್ಪಣೆ ಮಾಡಿದ್ದ ಸತಿ ಯೆಂದು ಸಂಗ್ರಹಿಸಿ, ಆಕೆಯ ಭವಿಷ್ಯದ್ಭಾಗ್ಯಸಾಧಕವಾದ ಸತ್ಸಾಧ ನೆಗೆ ತಾನು ಆತಂಕಿಸಲಾಗದೆಂಬ ಸಮಾಧಾನವನ್ನು ವಿವೇಚಿಸಿ, ಆಕೆಯ ಸಾಧುಸಂಕಲ್ಪಕ್ಕೆ ಸಮ್ಮತಿಸಿ ಕಳುಹಿದುದರಿಂದ, ಆಕೆಯು ಶಿವಪರ ದೃಢ ಭಕ್ತಿಯಿಂದ ತಪಸ್ವಿನಿಯಾಗಿರುತ್ತಿರಲು, ದೇವಲೋಕ ದಲ್ಲಿ ತಾರಕಾದಿ ದುಷ್ಟ ದಾನವರ ದುರ್ಬಾಧೆಗೆ ಸಿಲುಕಿ, ಸ್ಥಾನ ಮಾನಾದಿಗಳಿಂದ ಅಪಹೃತರಾದ ದೇವತೆಗಳು, ತಮ್ಮ ಆ ದುಃಖ ನಿವೃತ್ಯರ್ಥವಾಗಿ ಮಹಾವಿಷ್ಣುವನ್ನು ಮರೆಹೊಕ್ಕು, ಅವನಿಂದ ಪಡೆದ ಹಿತ ಸಲಹೆಯಂತೆ, ಶಿವ ಪಾರ್ವತಿಯರ ಪರಸ್ಪರ ಸಂಭೋಗವಿಲ್ಲ

ನದ ಸಂದರ್ಭ ಉಂಟಾಗುವಂತೆ, ಶಿವತಪೋಭಂಗಕರಣಕ್ಕಾಗಿ ಕಾಮದೇವನನ್ನು ಪ್ರೇರಿಸಲು, ಕಾಮದೇವನು ಪರೋಪಕಾರರೂಪೀ ಧರ್ಮಶ್ರದ್ಧೆಯಿಂದ, ತನ್ನ ಭವಿಷ್ಯದ್ವಿಪತ್ ಶಂಕೆಯನ್ನೂ ನಿರ್ಲಕ್ಷಿಸಿ ತನ್ನ ಸತೀಪ್ರದವಾದ ಸಂಭೋಗಾದಿ ವಿಲಾಸ ಮಗ್ನತೆಯ ಸ್ವಾರ್ಥವನ್ನು ದುರ್ಲಕ್ಷಿಸಿ ಶಿವನ ತಪೋ ಭೂಮಿಯನ್ನು ಸಂಶೋಧಿಸಿ, ಕಾಮಭಾವೋತ್ಪಾದಕ ಶರವನ್ನು ಪ್ರಯೋಗಿಸಲು, ತತ್ಪರಿಣಾಮದಿಂದ ಶಿವನ ತಪಸ್ಸಿಗೆ ಭಂಗವೊದಗಿ, ಪ್ರೋತ್ಥಿತಪ್ರಕೋಪ ಪ್ರಭಾವದಿಂದ ಪ್ರಜ್ವಲಾಗ್ನಿಯು ಆ ಶಿವನ ಮೂರನೇ ಕಣ್ಣಿಂದ ಹುಟ್ಟಿ, ಹರಡಿ, ಹರಿದು, ಆ ಕಾಮ ದೇವನನ್ನು ಹತ್ತಿ, ಮುತ್ತಿ, ಆವನು ಸುಟ್ಟು ಸೀಗುರಿಗೊಳ್ಳಲು, ತತ್ಸತಿ ರತಿದೇವಿಯು ಪತಿವಿಯೋಗ ದುಃಖದಿಂದ ಪರಿತಪ್ತಳಾಗಿರು ವಾಗ, ಅವಳಿಗಾ ಶಿವನು ದುಃಖೋಪಶಮನದ ಅಭಯಪ್ರದಾನ ವನ್ನು ಮಾಡಿ, ತಾನು ತಪಸ್ವಿನಿಯಾಗಿರುತ್ತಿದ್ದ ಆ ಪಾರ್ವತಿಯಲ್ಲಿಗೆ ಅಭಿಗಮಿಸಿ, ವಿಪ್ರವೇಷಧಾರಣಾ ಕಾಪಟ್ಯದ ಚಮತ್ಕಾರದಿಂದ ಅವಳ ಶಿವಭಕ್ತಿದಾರ್ಢ್ಯವನ್ನು ಪರೀಕ್ಷಿಸಿ, ಅದರಲ್ಲಿ ಅವಳು ಅನನ್ಯ ಚಿಂತನದ ಸುನಿಶ್ಚಲ ಶಿವಭಕ್ತಳೆಂದು ಖಚಿತವಾದ ಮೇಲೆ, ಆಕೆಗೆ ಸುಪ್ರಸನ್ನ ನಾಗಿ ಸಹಜ ಸುಂದರ ಸ್ವರೂಪದಿಂದ ಪ್ರಕಟನಾಗಿ, ತತ್ಸಂಭ ವೃತ್ತಾಂತ ಸಂಗ್ರಹದಿಂದ ಸಂತೋಷಭರಿತರಾದ ಆ ಪರ್ವತರಾಜ ದಂಪತಿಗಳಿಂದಾದ ಸಮುಚಿತ ಸನ್ನಾಹಪೂರ್ವಕವಾಗಿ ಪಾರ್ವತೀ ಪರಮೇಶ್ವರರ ಪರಿಣಯೋತ್ಸವ ನಡೆದು, ತತ್ಫಲವಾಗಿ, ಸ್ವಲ್ಪಸಮಯ ದಲ್ಲಿಯೇ ಅವರಿಗೆ ಸಂಜನಿಸಿದ ಶ್ರೀ ಕುಮಾರ ಸ್ವಾಮಿಯು ಸುರರಿಂದ ಸಂಪ್ರಾರ್ಥಿತನಾಗಿ, ಪಿತೃ ಆಜ್ಞೆಯನ್ನು ಪಡೆದು, ಸುರಸೇನಾನಿಯಾಗಿ ತಾರಕಾದಿ ಘೋರ ದೈತ್ಯರೊಡನೆ ಕಾಳಗಗೈದು, ಆ ದುಷ್ಟ ದೈತ್ಯ ರನ್ನು ವಧಿಸಿ, ಸಮಸ್ತ ಸಾಧುಸಜ್ಜನರ ಸಂರಕ್ಷಣೆಯನ್ನು ಮಾಡಿ ಸ್ತುತ್ಯನಾದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೪೫ ದಮಯಂತೀ ಕಲ್ಯಾಣ—ನಳ ಚರಿತ್ರೆ ಪ್ರಸಂಗ

ಸತಿ-ಪತಿಯರಲ್ಲಿ ಮನೋವಾಕ್ಕಾಯಗಳೆಂಬ ತ್ರಿಕರಣಗಳ

ವ್ಯವಹಾರದಲ್ಲಿಯೂ, ಪರಸ್ಪರವಾದ ಅನಿರುದ್ಧ ಅವಿಚಲ ಪ್ರೇಮ
ಸಂಬದ್ಧತೆ ಇರಬೇಕಾದುದು ಧರ್ಮನಿಬದ್ಧ ದಾಂಪತ್ಯದ ಪ್ರಾಮುಖ್ಯ
ನಿಯಮವು. ವಾಕ್ಕಾಯಗಳೆಂಬ ಬಹಿಃಕರಣಗಳಲ್ಲಿ ಮಾತ್ರ ಸತಿ
ಪತಿಯರಲ್ಲಿ ಅನ್ಯೋನ್ಯತೆಯಿದ್ದು, ಮನಸ್ಸೆಂಬ ಅಂತಃಕರಣದಲ್ಲಿ
ತದ್ಭಿನ್ನತೆಯಿಂದ, ಅನ್ಯತ್ರ ಕಾಮನಾಲಕ್ಷ್ಯ ಇದ್ದರೆ, ಅದು ದಾಂಪತ್ಯ
ಧರ್ಮಕ್ಕೆ ಸಲ್ಲದ ಮಾನಸಿಕ ವ್ಯಭಿಚಾರದ ದುರ್ವಿಚಾರವೇ ಸರಿ.
ಆದುದರಿಂದ, ಅವ್ಯಭಿಚರಿತ ಮಾನಸಿಕ ಪರಿಶುದ್ಧ ಪ್ರೇಮಪಾಶಬದ್ಧ
ರಾಗಿರಬೇಕಾದುದೇ ಧರ್ಮಶುದ್ಧ ದಾಂಪತ್ಯದ ಆವಶ್ಯಕ ನಿಯಮವು.
ಇಂಥ ನ್ಯಾಯನಿಯಮದ ದಾಂಪತ್ಯ ಜೀವನಕ್ಕೆ ದೇವತೆಗಳೂ
ಒಲಿದು ಅನುಗ್ರಹ ಮಾಡುವರು ಇದು ನಿಷಧ ದೇಶದ ನಳನೆಂಬ
ಭೂಪನು, ತನ್ನ ಅನುವಂಶೀಯ ಗೌರವಕ್ಕೆ, ದಿಗ್ವಿಜಯ ಯಾತ್ರೆ
ಯಿಂದ ಸ್ವಾರ್ಜಿತ ಕೀರ್ತಿ ಗೌರವವನ್ನೂ ಸೇರಿಸಿಕೊಂಡು, ಚಕ್ರ
ವರ್ತಿಯಾಗಿ ಮೆರೆಯುತ್ತಿದ್ದು, ತನ್ನಿಂದ ಉಪಕೃತವಾಗಿದ್ದ ಹಂಸ
ನೆಂಬ ದೂತನ ಪ್ರತ್ಯುಪಕಾರ ಕೃತಿಯಿಂದ ಪ್ರಾಪ್ತಿಸಿದ್ದ ದಮಯಂತಿ
ಎಂಬಾಕೆಯ ಭಾವಚಿತ್ರ ಸಂದರ್ಶನದಿಂದ, ಆ ದಮಯಂತಿಯ
ಅತಿಶಯ ಸೌಂದರ್ಯದಲ್ಲಿ ಅನುರಕ್ತನಾಗಿ, ಆಕೆಯ ಸದ್ಗುಣಾದಿ
ಸುವೃತ್ತಾಂತ ಸಂಗ್ರಹದಿಂದಲೂ ಅವಳ ಪರವಾದ ಅತ್ಯಂತಾಕಾಂಕ್ಷಾ
ನಿಬದ್ಧನಾಗಿರಲು, ವಿದರ್ಭ ರಾಜನಾದ ಭೀಮ ನೃಪಾಲನ
ಕುಮಾರಿಯಾಗಿರುತಿದ್ದ ದಮಯಂತಿಯು ನಿಜದೂತಿಯಾದ ಶುಕ
ಎಂಬವಳಿಂದ ತನಗೆ ದೊರೆತ ನಳನ ಭಾವಚಿತ್ರವನ್ನು ಕಂಡು, ಆ
ನಳನ ಸೌಂದರ್ಯ, ಸದ್ಗುಣ, ಸುಗೌರವಾದಿಗಳನ್ನು ತಿಳಿದು,
ಅವನನ್ನೇ ತನ್ನ ಪತಿಯನ್ನಾಗಿ ಪ್ರಾಪ್ತಿಸಿಕೊಂಬ ಸೌಭಾಗ್ಯಾಕಾಂಕ್ಷೆ
ಯಲ್ಲಿರಲು, ಕ್ರಮೇಣ, ಸ್ವಯಂವರ ಪದ್ಧತಿಯ ಮೇರೆಗೆ ದಮ
ಯಂತಿಯ ವಿವಾಹೋತ್ಸವವನ್ನು ಏರ್ಪಡಿಸಿದ ಭೀಮರಾಯನ
ಆಮಂತ್ರಣವನ್ನನುಸರಿಸಿ ಅನೇಕಾನೇಕ ಅನ್ಯ ಅರಸುಗಳಂತೆ ಆ
ನಳನು ತಾನೂ ತನ್ನ ಗೌರವೋಚಿತವಾದ ಸಕಲ ಸಂಭ್ರಮಯುಕ್ತ
ನಾಗಿ ವಿದರ್ಭಕ್ಕೆ ಸಾಗುತ್ತಿರಲು, ಕಪಟ ವೇಷಧಾರಿಗಳಾಗಿ ಅಲ್ಲಿಗೆ
ಬಂದಿದ್ದ ದೇವತೆಗಳು ತಮ್ಮ ಯುಕ್ತಿ ತಂತ್ರ ಪ್ರಯೋಗದಿಂದ

ಪರೀಕ್ಷೆ ನಡೆಸಿ, ನಳನ ಔದಾರ್ಯ ಅಮತ್ಸರಾದಿ ಸದ್ಗುಣಗಳನ್ನು ತಿಳಿದದ್ದಲ್ಲದೆ, ಆ ಮೇಲೆ ಅವರು ಸ್ವಯಂವರ ಮಂಟಪದಲ್ಲಿ ನಳನ ವೇಷವನ್ನು ಧರಿಸಿ ಆ ಯುಕ್ತಿ ಪ್ರಯೋಗದಿಂದ ಮಾಡಿದ ದಮಯಂತಿಯ ಯೋಗ್ಯತಾ ಪರೀಕ್ಷೆಯಲ್ಲಿಯೂ, ದಮಯಂತಿಯ ವಿದ್ಯಾ, ಬುದ್ಧಿ, ವ್ಯವಹಾರ್ಯ ಚಾತುರ್ಯಾದಿಗಳನ್ನು ತಿಳಿದು, ನಳ-ದಮಯಂತಿಯರ ಸದ್ಗುಣಗಳಿಗೆ ಮೆಚ್ಚಿ, ಕೊನೆಗೆ ಅವರ ಪರಸ್ಪರ ಸ್ವಸಂತೋಷಪೂರ್ವಕ ಸಂವರಣದ ಪರಿಣಾಮವಾಗಿ ನಡೆದ ಅವರ ಪರಿಣಯದ ಸನ್ಮುಹೂರ್ತದಲ್ಲಿ ಅವರ ಭವಿಷ್ಯದ್ಭಾಗ್ಯದಾಯಕತೆಗಾಗುವ ವರಗಳನ್ನು ದಯಪಾಲಿಸಿ, ಆ ಮದುವೆಯು ಮಂಗಳದಾಯಕವಾಗುವಂತೆ ಮಾಡಿದರು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

ದೇಶ, ಕಾಲ, ಪಾತ್ರ, ಪರಿಸ್ಥಿತಿ ಇತ್ಯಾದಿಗಳ ಸಂದರ್ಭಭೇದಗಳಿಗನುಸರಿಸಿ, ಸದಾಚಾರ-ಶಿಷ್ಟಾಚಾರಗಳಲ್ಲಿ ಪ್ರಕಾರಾಂತರ ಇವೆಯಾದರೂ, ದೇಹ ಸ್ವಾಸ್ಥ್ಯ, ಮನೋನೈರ್ಮಲ್ಯ, ಬುದ್ಧಿಶುದ್ಧತೆ ಇತ್ಯಾದಿಗಳ ಉದ್ದಿಶ್ಯವಾಗಿ ನಿಯಮಿತವಾದ ಸರ್ವಸಾಧಾರಣವಾದ ಸಮಸ್ತರಿಂದ ಸಂಗ್ರಾಹ್ಯವಾಗಬಹುದಾದ ಸದಾಚಾರಗಳು ಶಿಷ್ಟಾಚಾರಗಳು ಕೆಲವು ಇವೆ. ಉದಾ: ಸ್ನಾನ, ಸಂಧ್ಯಾವಂದನ ಅಥವಾ ದೇವೋಪಾಸ್ತಿ ಇಂಥಿಂಥವುಗಳು. ಹಾಗೆಯೇ, ಮದ್ಯಪಾನ-ಕಳವು-ಜುಗಾರಿ-ವ್ಯಭಿಚಾರಾದಿಗಳಿಂದ ರಹಿತರಾಗಿರೋಣ ಮತ್ತು ಕೋಪಭಾವ-ಅಸ್ತೇಯ ಇತ್ಯಾದಿಗಳು ಸದಾಚಾರ ನಿಯಮಗಳು ಸಾರ್ವದೈಶಿಕ, ಸಾರ್ವಕಾಲಿಕ ಸಮಸ್ತ ಶಿಷ್ಟಜನ ಸಂಗ್ರಾಹ್ಯದ ಸುನಿಯಮಗಳೇ ಸರಿ. ಅವುಗಳು ಆತ್ಮ ಶುಭಕ್ಕಾಗಿಯೂ, ಸಾಮಾಜಿಕ ಸುಭದ್ರತೆಗಾಗಿಯೂ ಅನುಲ್ಲಂಘ್ಯವಾಗಿರತಕ್ಕ ಅವಶ್ಯಪಾಲನೀಯಗಳು. ಇಂಥ ಸದಾಚಾರ ನಿಯಮಗಳನ್ನು ನಿರಾಕರಿಸಿ ನಡೆಯುವ ಸ್ವೈರಾಚಾರ ಸಂಪನ್ನನು, ವಿತ್ತಬಲ, ವಿದ್ಯಾಬಲ, ಬುದ್ಧಿಬಲ, ಸಾಮ್ರಾಜ್ಯಬಲಗಳೇ ಮೊದಲಾದ ಯಾವ ಲೌಕಿಕ ಮಹಾ ಸಂಪದ್ಬಲಗಳಿಂದ ಕೂಡಿರುವವನಾದರೂ, ಅವನು, ತಾನು ಸ್ವಭದ್ರತೆಯನ್ನು ಕಳೆದು

ಕೊಳ್ಳುವುದಲ್ಲದೆ, ತನ್ನ ಪರಿವಾರಕ್ಕೂ ಭಂಗಭವಣೆಗಳನ್ನು ತರಿಸುವವನು, 'ಏಕೋ ಹಿ ಕುರುತೇ ಪಾಪಂ, ಫಲಂ ಭುಂಕ್ತೇ ಮಹಾಜನಾಃ' ಎಂಬ ಸೂಕ್ತಿಯಂತೆ, ಅನ್ಯರನ್ನೂ ಅವಾಂತರದಲ್ಲಿ ಕೆಡಹುವನು. ಇದು, ನಳನನ್ನು ದಾರಿದ್ರ್ಯದ ದುರ್ದೆಶೆಗೆ ದೂಡಿ, ಅವನಿಗೆ ದುಸ್ಸಹ ದುಃಖವನ್ನು ನೀಡಿ, ಆ ಮೂಲಕ ತನ್ನ ಪ್ರಭಾವವನ್ನು ಪ್ರಪಂಚ ಮುಖಕ್ಕೆ ಪ್ರದರ್ಶಿಸುವೆನೆಂದು ಪ್ರಸಿದ್ಧ ಪ್ರತಿಜ್ಞೆ ಮಾಡಿ ಪೃಥ್ವಿಗೆ ಬಂದಿಳಿದ ಶನಿಯು, ನಳನ ಅರಮನೆಯ ಬಾಹ್ಯ ಪ್ರದೇಶದ ಒಂದು ಬಿದಿರ ಹಿಂಡಲಿನಲ್ಲಿ ಅಡಗಿ ಕುಳಿತಿದ್ದು, ತನ್ನ ಕಾರ್ಯಸಾಧನೆಗೆ ಕಾಲವನ್ನು ಕಾಯುತ್ತಿರಲು, ಒಂದು ದಿನ ಮೃಗ ಬೇಟೆಯಿಂದ ಮನೆಗೆ ಮರಳಿ ಬರುತ್ತಿದ್ದ ನಳನನ್ನು ನೋಡಿ, ಅವನು ಪಾದಪ್ರಕ್ಷಾಳನೆಯನ್ನು ಪೂರ್ಣವಾಗಿ ಪೂರೈಸದಿದ್ದುದನ್ನೂ, ಬರೇ ಅಲ್ಪಾಚಮನದಿಂದಲೇ ದೇಹಶುದ್ಧಿ ಮಾಡಿಕೊಂಡದ್ದನ್ನೂ, ಸಂಧ್ಯಾ ವೇಳೆಯಲ್ಲಿಯೇ ನಿದ್ರಾತುರದಿಂದ ಶಯನಿಸಿದುದನ್ನೂ ಕಂಡು, ಅವನ ಆ ಆಚಾರ ಭ್ರಷ್ಟತೆಯನ್ನು ತನ್ನ ಅನುಕೂಲಕ್ಕೆಂದು ಗ್ರಹಿಸಿ, ಅವನನ್ನು ತನ್ನ ತಂತ್ರಚಲಾವಣೆಯ ಸ್ವಾಧೀನಕ್ಕೆ ಒಳಪಡಿಸಿಕೊಂಡದ್ದರಿಂದ, ಶನಿಪ್ರಭಾವಕ್ಕೆ ಸೆರೆಸಿಕ್ಕಿದ ನಳನು ಬುದ್ಧಿವಿಪರ್ಯಾಸದಿಂದ ತನ್ನ ದಾಯಾದಿಯಾದ ಪುಷ್ಕರನೆಂಬವನೊಡನೆ ದ್ಯೂತವನ್ನಾಡಿ ಅದರಲ್ಲಿ ಸೋತು, ತನ್ನ ಸಮಗ್ರ ಸಂಪತ್ಸಹಿತವಾದ ಸಾಮ್ರಾಜ್ಯವನ್ನು ಪುಷ್ಕರನಿಗೆ ಸೂರೆಬಿಟ್ಟು, ತನ್ನೆರಡು ಮಕ್ಕಳನ್ನು ದಮಯಂತಿ ಪಿತೃಗೃಹಕ್ಕೆ ಕಳುಹಿಕೊಟ್ಟು, ತಾನು ದಮಯಂತೀ ಸಹಿತ ವನಾಂತರಕ್ಕೆ ಬಂದು, ತದ್ವನದಲ್ಲಿ ಒಣಗಿಸಲ್ಪಡುತ್ತಿದ್ದ ತನ್ನ ಮೈಬಟ್ಟೆಯೂ ಪಕ್ಷಿಯೊಂದರಿಂದ ಅಪಹರಿಸಲ್ಪಟ್ಟ ಮೇಲೆ ತಾನು ತನ್ನ ಹೆಂಡತಿಯ ಸೀರೆಯ ಕಿಂಚಿದಂಶದಿಂದಲೆ ಮಾನಾಚ್ಛಾದನೆ ಮಾಡಿಕೊಂಡು, ರಾತ್ರಿ ವೇಳೆಯಲ್ಲಿ ಬತ್ತಲೆ ಬಂಡೆಯೊಂದರ ಮೇಲೆ ಬಳಲಿ ಬಿದ್ದು ನಿದ್ರಿಸುತ್ತಿದ್ದ ತನ್ನ ದಮಯಂತಿಯನ್ನು ಆಕೆಗೆ ಗೊತ್ತಾಗದಂತೆ ತ್ಯಜಿಸಿ ಹೊರಟು, ನಟ್ಟಡವಿಯಲ್ಲಿ ಗುರಿಯಿಲ್ಲದೆ ಅಲೆದಾಡುತ್ತಿರುವಾಗ, ಇತ್ತ ಆ ದಮಯಂತಿಯು ನಿದ್ರೆತಿಳಿದೆದ್ದು ತನ್ನ ಪತಿತ್ಯಕ್ತ ದುರ್ದೆಶೆಯನುಭವವಾಗಿ, ದುಸ್ಸಹ ದುಃಖಮಾನಸಳಾಗಿ ಮರುಗಿ,

ಸೊರಗಿ, ಕೊರಗಿ, ಪತಿಶೋಧಾರ್ಥವಾಗಿ ಆ ಅರಣ್ಯದಲ್ಲಿ ಅಲೆದಾಡಿ, ಬಹಳವಾಗಿ ಅಳುತ್ತಾ, ಬಳಲಿ ಅಲ್ಲಲ್ಲಿ ಬೀಳುತ್ತಾ, ಬಿದ್ದಲ್ಲಿಂದ ಏಳುತ್ತಾ, ಇಂಥ ಸಂತ್ರಸ್ತ ಸ್ಥಿತಿಯಿಂದ ಸಂಚರಿಸುತ್ತಾ, ತದಧಿಕತರ ದುರ್ದೈವದಿಂದ ಒಂದಾನೊಂದು ಬಾಯ್ಕಳೆದ ಬಲಿಷ್ಠ ಹೆಬ್ಬಾವಿನ ಬಾಯೊಳಗೆ ಬಲಿಬಿದ್ದು, ಮೃತ್ಯುಗ್ರಾಸಸ್ಥಿತ್ಯನುಭವದಿಂದ ಚೀರಿಡುವಾಗ, ಅಕಸ್ಮಾತ್ ಅಲ್ಲಿಗೆ ಬಂದ ಒಬ್ಬ ಬೇಡನ ಬಿಲ್ಬಾಣ ಪ್ರಯೋಗದಿಂದ ಆ ಹಾವು ಕೊಲ್ಲಲ್ಪಟ್ಟು, ಆಕೆಯು ಮೃತ್ಯು ಸಂದಷ್ಟತಾ ವಿಮುಕ್ತಿಯನ್ನು ಪಡೆಯುವಂತಾದರೂ, ಆಕೆಯ ಅತಿಶಯವಾದಾ ಸೌಂದರ್ಯವನ್ನವಲೋಕಿಸಿ, ತತ್ಕಾರಣಾತ್ ಕಾಮ ವಿಕಾರಪ್ರಪೀಡಿತನಾದ ಬೇಡನ ಭೋಗದಾಹಕ್ಕೆ ಬಲಾತ್ಕಾರದಿಂದ ಬಲಿಯಾಗಬೇಕಾದ ದುಸ್ಥಿತಿಯುಂಟಾಗಲು, ಆಕೆಯು ತನ್ನ ಮಾನ ಸಂರಕ್ಷಣೆಗಾಗಿ, ತನ್ನ ಭಾವರಂಗದಲ್ಲಿ ಸುಪ್ರತಿಷ್ಠಿತವಿದ್ದ ಭಗವದ್ಭಕ್ತಿಯ ಸಮಾಶ್ರಯ ಪಡೆದು, ಭಗವದ್ಪ್ರಾರ್ಥನೆ ಮಾಡುತ್ತಾ, ತನ್ನನ್ನು ಸೆಳೆಯಬಂದ ಆ ಬೇಡನನ್ನು ತೀವ್ರದೃಷ್ಟಿಯಿಂದ ಕಂಡೊಡನೆಯೇ, ದೈವಚಮತ್ಕಾರವಾಗಿ ಆಕೆಯ ಕಣ್ಗಳಿಂದ ತನ್ನಷ್ಟಕ್ಕೆ ಸ್ಫುರಿಸಿ ಪ್ರಸಾರವಾದ ಕ್ರೂರಾಗ್ನಿಯ ಉಜ್ವಲನಕ್ಕೆ ಆ ಬೇಡನು ಬಲಿಯಾಗಿ ಬಾಧಿಸಲ್ಪಟ್ಟು, ಆಕೆಯು ಆತನ ನಿರ್ಬಂಧದಿಂದ ವಿಮುಕ್ತಳಾಗಿ ಅಲ್ಲಿಂದ ನಿರಾತಂಕವಾಗಿ ಮುಂದುವರಿಸಿ, ಸುದೈವ ಸಂಯೋಗಾತ್ ಪ್ರಯಾಣಿಕರಾಗಿದ್ದ ಕೆಲವು ವರ್ತಕರ ಸ್ನೇಹವು ಸಂಘಟಿಸಿ, ಸ್ವಲ್ಪ ಕಾಲಕ್ರಮೇಣ ತನ್ನ ತವರು ಮನೆಯನ್ನು ಸೇರಿಕೊಳ್ಳುವಂತಾಗಲು, ಅಲ್ಲಿ ಆ ಭೀಮಕ ರಾಯನು ಅವಳ ಹಿತಾರ್ಥವಾಗಿ ನಳನ ಪತ್ತೆಗಾಗಿ ಪ್ರಯತ್ನನಿರತನಾಗಿರುತ್ತಿರಲು, ಅತ್ತ ನಳನು ನಟ್ಟಡವಿಯಲ್ಲಿ ಅಲೆದಾಡುತ್ತಿದ್ದಾಗ, ಅಲ್ಲಿ ಅಕಸ್ಮಾತ್ ಉದ್ಭವಿಸಿದ ಅದ್ಭುತವಾದುದೊಂದು ಕಾಳ್ಗಿಚ್ಚಿನಿಂದ ಆವರಿಸಲ್ಪಟ್ಟವನಾದರೂ, ಆ ವೇಳೆಯಲ್ಲಿ ಅಲ್ಲೆಲ್ಲೋ ಮಾನುಷಿಕ ಭಾಷಾ ರೀತಿಯಿಂದ ತನ್ನನ್ನು ಕರೆಯುತ್ತಾ ಸಂರಕ್ಷಿಸಬೇಕೆಂದು ಆರ್ತಧ್ವನಿಯಿಂದ ಪ್ರಾರ್ಥಿಸುತ್ತಿದ್ದ ಒಂದು ಕಾರ್ಕೋಟಕ ಸರ್ಪನಲ್ಲಿ ದಯೆ ತಾಳಿ ಉಪಕರಿಸಲು, ಆ ಸರ್ಪನಿಂದ ಸಂದಷ್ಟನಾಗಿ, ಅದರಿಂದ ತಾನು ರೂಪವಿಕಾರವನ್ನು

ಪಡೆದು, ಆ ಸರ್ಪನ ಸಲಹೆಯಂತೆ, ಮುಂದೆ ಸಾಗಿ, ನಿಜ ರಹಸ್ಯ ವನ್ನು ಪ್ರಕಟಿಸದೆ, ಬಾಹುಕನೆಂದು ತನ್ನನ್ನು ಹೆಸರಿಸಿಕೊಂಡು, ಅಯೋಧ್ಯೆಗೆ ಹೋಗಿ, ಅಲ್ಲಿಯ ಋತುಪರ್ಣ ಭೂಪತಿಯಲ್ಲಿ ರಥ ಕಾರ ವೃತ್ತಿಯ ನೌಕರನಾಗಿರುತ್ತಾ, ತನ್ನ ನಿಜ ನಾಮರೂಪಾವಸ್ಥೆ ಗಳನ್ನು ಪ್ರಚ್ಛನ್ನವಾಗಿಯೇ ಇರಿಸಿ, ಕಾಲಹರಣ ಮಾಡಿಕೊಂಡಿ ರಲು, ಅತ್ತ ಭೀಮಕನು ದಮಯಂತಿಗೆ ದ್ವಿತೀಯ ಸ್ವಯಂವರವೆಂದು ಕಪಟವನ್ನು ವಿರಚಿಸಿ, ಅದಕ್ಕೆ ಆಮಂತ್ರಿತನಾದ ಋತುಪರ್ಣನು ಬಾಹುಕ ಸಾರಥ್ಯದಿಂದ ರಥಾರೂಢನಾಗಿ ವಿದರ್ಭಕ್ಕಭಿಮುಖವಾಗಿ ಸಾಗುತ್ತಿರುವಲ್ಲಿ, ಅವನ ಅನುಭವಕ್ಕಾದ ಬಾಹುಕನ ಅಸಾಮಾನ್ಯ ಚಾಮತ್ಕಾರಿಕ ಸಾರಥ್ಯದಿಂದ ಆತನ ನಿಜಸ್ಥಿತಿ ವಿಷಯಕ ಅನುಮಾನ ಉಂಟಾಗಿ, ತತ್ಸಂಶೋಧನಾರ್ಥದ ವಿಚಾರವಿನಿಮಯ ಮಾಡಿ, ಆ ಬಾಹುಕನೇ ನಿಜಸ್ಥಿತಿಯಲ್ಲಿ ನಳನು ಎಂಬುದನ್ನು ಗೊತ್ತು ಹಚ್ಚಿ, ಶನಿಬಾಧಾಗ್ರಸ್ತತೆಯಿಂದ ಅವನು ವಿಮುಕ್ತನಾಗುವಂತೆ ಅವನಿಗೆ ತದುಚಿತ ಮಂತ್ರೋಪದೇಶ ರೀತ್ಯಾ ಉಪಕಾರ ಮಾಡಿ, ತದನುಸರಣೆ ಯಿಂದ ನಳನು ಶನಿವಿಮುಕ್ತನಾಗಲು, ಅಲ್ಲಿಂದ ಮುಂದೆ ಸಾಗಿದ ನಳ ಋತುಪರ್ಣರು ಭೀಮಕನ ಅರಮನೆಗೆ ಬಂದಾಗ, ಅಲ್ಲಿ ದಮ ಯಂತಿಯು ತನ್ನ ಯುಕ್ತಿ ಚಲಾವಣೆಯಿಂದ ನಳನ ನೈಜತೆಯನ್ನು ಸಂಶೋಧಿಸಿಕೊಂಡು, ನಳದಮಯಂತಿಯರ ಪುನರ್ಮಿಲನವು ಸಂಘಟಿಸಲು, ಭೀಮಕ ಋತುಪರ್ಣರು ಪುರಜನ ಪರಿಜನ ಸಂದೋಹ ಸಹಿತವಾಗಿ ನಳದಮಯಂತಿಯರನ್ನು ಕೂಡಿ, ನಿಷಧ ಪಟ್ಟಣಕ್ಕೆ ಹೋಗಿ, ಪುರುದ್ಯೂತದಿಂದ ನಳನು ತನ್ನ ರಾಜ್ಯವನ್ನು ತನಗೇ ಮರಳಿ ಪಡೆದುಕೊಳ್ಳುವಂತಾದುದರಿಂದ, ನಳದಮಯಂತಿ ಯರ ತತ್ಪರಿಯಂತದ ಸಮಸ್ತ ದುರಿತ ದುರ್ಯೋಗಗಳ ಪೂರ್ಣ ನಿವೃತ್ತಿಯಾಗಿ, ಸಕಲ ಪ್ರಜಾಪ್ರೇಮಪಾತ್ರರಾಗಿ ರಾಜ್ಯಪಾಲನೆ ಮಾಡುತ್ತಾ, ಸಂಪ್ರಾಪ್ತಸುಯಶೋವಂತರಾಗಿ ಸುಖ ಸಂತೋಷ ದಲ್ಲಿದ್ದರು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೪೬ ಹರಿಶ್ಚಂದ್ರ ಚರಿತ್ರೆ ಪ್ರಸಂಗ

ಅಭ್ಯುದಯ ನಿಶ್ರೇಯಸ್ಸುಗಳ ಸಾಧನಾತ್ಮಕವಾಗಿರುವ

ಧರ್ಮಕ್ಕೆ ಸತ್ಯವೇ ಮುಖ್ಯ ಸ್ವರೂಪವು. ಅನೇಕವಾಗಿರುವ ಆಚಾರ ರೂಪದ ಧರ್ಮಗಳಲ್ಲಿ, ಎಲ್ಲದರಲ್ಲಿಯೂ ಸತ್ವಾಂಶವಾಗಿ ಸೇರಿಕೊಂಡಿದೆ ಈ ಸತ್ಯ. 'ಅಶ್ವಮೇಧ ಸಹಸ್ರಾದಪಿ ಸತ್ಯಮೇವಾವಶಿಷ್ಯತೆ' ಎಂದು ಸತ್ಯದ ಮಹತ್ವ ನಿರ್ದೇಶಕ ಸೂಕ್ತಿ ಇದೆ. 'ನ ಸತ್ಯಾತ್ಪರೋಧರ್ಮಃ' ಎಂದು, ಧರ್ಮದಲ್ಲಿ ಸಮಾವಿಷ್ಟವಾಗಿರುವ ಅದರ ಸತ್ವಾಂಶವಾಗಿರುವ ಸತ್ಯದ ಸ್ಥಿತಿನಿರೂಪಣೆ ಇದೆ. ನಿರ್ವಂಚನೆ, ಪ್ರಾಮಾಣಿಕತೆ, ಯಥಾರ್ಥತೆ—ಇಂಥವುಗಳು ಸತ್ಯದ ಅಭಿವ್ಯಕ್ತ ಗುಣಗಳೇ ಹೌದು. ಆದರೆ, ಅವುಗಳಲ್ಲಿ ಮಿತಿಗೊಂಡುದು ಸತ್ಯ ಎಂಬುದರ ವಾಸ್ತವ ಸ್ವರೂಪವಲ್ಲ. ಮನಸ್ಸಿನಲ್ಲಿರುವುದನ್ನೇ ಮಾತಿನಿಂದ ಆಡಿ, ಮತ್ತದನ್ನನುಸರಿಸಿಯೇ ಕೃತಿ ಮಾಡುವ ಈ ಮನವಚನ ಕೃತಿಗಳ ಏಕರೂಪತಾ ಲಕ್ಷಣದ ಪ್ರಾಮಾಣಿಕತೆಯೂ ಸತ್ಯದ್ದೇ ಸರಿ. ಆದರೆ ಸತ್ಯ ಎಂಬುದಕ್ಕೆ ಅದಕ್ಕಿಂತ ಅಧಿಕತರ ವಿಶಾಲ ಸ್ವರೂಪವಿದೆ. 'ಯದ್ಭೂತಹಿತಮತ್ಯಂತಂ ಏತತ್ಸತ್ಯಂ' ಎಂಬ ಆಪ್ತ ವಾಕ್ಯದಂತೆ, ಸಮಸ್ತ ಜೀವಜಾಲಹಿತ ಸಾಧನಾರ್ಥದ ಸುವ್ಯವಸ್ಥಾ ರೀತಿಯೇ ಸತ್ಯವು. ಆದುದರಿಂದ, ಸತ್ಯವೇ ದೇವರು, ಸತ್ಯಾಚರಣೆಯೇ ದೇವರ ಅನುಗ್ರಹದಿಂದ ಆತ್ಮೋದ್ಧಾರವಾಗುವ ಮುಖ್ಯ ಧರ್ಮಾಚರಣೆಯು. ಇಂಥ ಸತ್ಯಾಚರಣೆಗೆ ವಿಘ್ನವಿಡ್ಡೂರಾದಿಗಳು ಹಲವು ಸಂಭವಿಸಬಹುದು. ಈ ಪ್ರಪಂಚಾವಸ್ಥೆಯಲ್ಲಿ ಶ್ರೇಯಸ್ಸಾಧನಾತ್ಮಕ ಸನ್ಮಾರ್ಗಕ್ರಮಣದಲ್ಲಿ ಪ್ರತಿಪಾದ ವಿಕ್ಷೇಪದಲ್ಲಿಯೂ ಪ್ರತಿಕೂಲ ಪ್ರಾಪ್ತಿಯಾಗುವುದೂ ಸಂಭವನೀಯ. ಆದರೂ ಪದವಿಚಾಲ್ಯವನ್ನು ಪಡೆಯದೆ, ಮುನ್ಸಾಗುವ ಸುಧೀರನಾಗಿರಬೇಕು ಸತ್ಯಮಾರ್ಗನಿಷ್ಠನು. ಭೌತಿಕ-ದೈವಿಕ-ಆತ್ಮಿಕಗಳಾಗಿರುವ ತಾಪತ್ರಯವು ಬಲಿಷ್ಠ ಬಾಧೆಯಿತ್ತರೂ ಬೆದರದೆ, ಬಗ್ಗದೆ, ಸಂಪ್ರಾಪ್ತ ಸಂಕಷ್ಟಗಳನ್ನು ಲಕ್ಷಿಸದೆ, ಭಗವದನುಗ್ರಹದ ಭವಿಷ್ಯದ್ಪ್ರಾಪ್ತಿಯಲ್ಲಿ ಬಲಿಷ್ಠ ಭರವಸೆಯನ್ನಿಟ್ಟುಕೊಂಡು ಮುನ್ಸಾಗಬೇಕು-ಸತ್ಯನಿಷ್ಠನು. ಅಂಥವನ ಅಚಲ ಪ್ರಯತ್ನದ ಫಲವಾಗಿ ಪರಮಾತ್ಮನ ಪೂರ್ಣಾನುಗ್ರಹ ಪ್ರಾಪ್ತಿಯಾಗಿ, ದುರ್ದೈವದಿಂದ ದೊರೆತಿದ್ದ ದುರ್ದೆಶೆಯು ದೂರಸರಿದು, ಅವನು ಕೃತಾರ್ಥನಾಗಿ ವಿಜಯಿಯಾಗುವನು.

ಇದು, ದೇವಲೋಕದ ಮಹಾಸಭೆಯಲ್ಲಿ ದೇವೇಂದ್ರನು ಸತ್ಯವಂತನಾರೆಂದು ಪ್ರಶ್ನಿಸಿದಾಗ, ತತ್ಸಭೆಯಲ್ಲಿದ್ದ ವಸಿಷ್ಠ ಮಹರ್ಷಿಗಳು ಭೂಲೋಕದ ಅಯೋಧ್ಯೆಯ ಹರಿಶ್ಚಂದ್ರನು ಸತ್ಯವಂತನೆಂದು ಉತ್ತರ ಹೇಳಿದ್ದಕ್ಕೆ, ಆ ಋಷಿಯಲ್ಲಿ ದ್ವೇಷವನ್ನು ತಳೆದಿದ್ದ ವಿಶ್ವಾಮಿತ್ರ ಮಹರ್ಷಿಯು ತದ್ವೇಷಭಾವಪ್ರಚೋದಿತನಾಗಿ ಕೋಪಗೊಂಡು, ವಸಿಷ್ಠಾಭಿಪ್ರಾಯಖಂಡನಾತ್ಮಕವಾಗಿ ಹರಿಶ್ಚಂದ್ರನನ್ನು ಸತ್ಯವಂತನಲ್ಲವೆಂದು ವಾದಿಸಲು, ವಸಿಷ್ಠ ವಿಶ್ವಾಮಿತ್ರರೊಳಗೆ ತದ್ವಿಷಯಕ ವಾದಪ್ರತಿವಾದ ರೀತ್ಯಾ ಪರಸ್ಪರ ವಿರುದ್ಧ ಸಂಘರ್ಷಣೆಯು ಸಂಘಟಿಸಿ, ಕಡೆಗೆ ಹರಿಶ್ಚಂದ್ರನ ಸತ್ಯವನ್ನು ತಾನು ಒಂದು ವರ್ಷದೊಳಗೆ ಭಂಗಿಸುವೆನೆಂದು ವಿಶ್ವಾಮಿತ್ರನು ಘೋರ ಪ್ರತಿಜ್ಞೆಯನ್ನು ಮಾಡಿ, ತದನುಸರಣೆಯಿಂದ ಅವನು ಭೂಲೋಕಕ್ಕೆ ಬಂದು, ಹರಿಶ್ಚಂದ್ರನು ಒಂದು ಸುವರ್ಣ ಯಜ್ಞವನ್ನು ಮಾಡುವಂತೆ ತಂತ್ರವನ್ನು ವಿರಚಿಸಿ, ತದ್ಯಜ್ಞಕರ್ಮನಿರತನಾಗಿದ್ದ ಹರಿಶ್ಚಂದ್ರನಿಂದ ಒಂದು ಆನೆಯ ಮೇಲೆ ಕುಳಿತವನಿಂದ ಮೇಲೆಸೆಯಲ್ಪಟ್ಟ ಕವಡೆಯು ಹಾರಾಟದಷ್ಟೆತ್ತರದ ರಾಶಿಯಾಗುವಷ್ಟರ ಪ್ರಮಾಣದ ಸುವರ್ಣ ನಾಣ್ಯಗಳನ್ನು ದಾನ ಬೇಡಿ, ಅದರಿಂದ ಹರಿಶ್ಚಂದ್ರನ ವಚನಪಾಲನಾ ಮತ್ತು ಪರೋಪಕಾರಾರ್ಥ ಸ್ವಸಂಪತ್ ತ್ಯಾಗರೂಪದ ಸತ್ಯಾಚರಣೆಯ ಕಿಂಚಿತ್ಪರೀಕ್ಷೆ ಮಾಡಿ, ತನಗೆ ಅವನಿಂದ ದಾನವಾಗಿ ಬಂದ ಆ ಧನರಾಶಿಯನ್ನು ಅವನ ಸಂರಕ್ಷಣೆಗೇ ಇರಿಸಿ, ಅಲ್ಲಿಂದ ಹೊರಟು ಹೋಗಿ, ತನ್ನ ಕಪಟ ತಂತ್ರಪ್ರಯೋಗದಿಂದ ಕೆಲವು ವನ್ಯ ಮೃಗಗಳನ್ನು ಸೃಜಿಸಿ, ಹರಿಶ್ಚಂದ್ರನು ಆ ಮೃಗಗಳಿಂದ ಬಾಧಿತನಾಗುವಂತೆ ಮಾಡಿದ್ದಕ್ಕೆ, ಹರಿಶ್ಚಂದ್ರನು ಮೃಗಬೇಟೆಯ ಉದ್ದೇಶದಿಂದ ಅರಣ್ಯಕ್ಕೆ ಬಂದಿರಲು, ಅಲ್ಲಿ ಪರಾಶರರಿಂದ ಸಂಭವನೀಯ ಕಷ್ಟಗಳ ಮುಂಸೂಚನೆ ಪಡೆದರೂ, ಅದರಿಂದ ಭೀತಿಗೊಳ್ಳದೆ ಮತ್ತೂ ಮುಂಬರಿದು, ವಿಶ್ವಾಮಿತ್ರಾಧಿಕಾರವುಳ್ಳ ವನಪ್ರದೇಶದಲ್ಲಿ ವಿಶ್ರಾಂತಿ ಪಡೆಯುತ್ತಿರಲು, ವಿಶ್ವಾಮಿತ್ರನಿಂದ ಸೃಜಿತವಾಗಿ ಕಳಿಸಲ್ಪಟ್ಟಿದ್ದ ಇಬ್ಬರು ಚಾಂಡಾಲ ಕನ್ಯೆಯರು ಬಂದು ನಾಟ್ಯ ಸಂಗೀತಗಳಿಂದ ಹರಿಶ್ಚಂದ್ರನನ್ನು ಉಪಚರಿಸಲು, ಅದಕ್ಕೆ ಸಂತುಷ್ಟಿಗೊಂಡ ಹರಿ

ಶ್ಚಂದ್ರನು ಅವರು ಬೇಡಿದುದನ್ನು ನೀಡುವೆನೆಂಬ ವಾಗ್ದಾನ ಮಾಡಿದ್ದಕ್ಕೆ ಆ ಕನ್ಯೆಯರು ಅವನ ಶ್ವೇತಛತ್ರವನ್ನು ಬೇಡಿ, ಅದರಲ್ಲಿ ಕೃತಾರ್ಥರಾಗುವುದು ಶಕ್ಯವಿಲ್ಲದೆ, ಹರಿಶ್ಚಂದ್ರನು ತಮ್ಮನ್ನು ವರಿಸಬೇಕೆಂದು ಆಗ್ರಹಪಡಿಸಲು, ಅದಕ್ಕವನು ಅವರನ್ನು ತಿರಸ್ಕರಿಸಿ ಹೊಡೆದಾಗ, ಅವರು ತಮ್ಮ ಈ ದುರವಸ್ಥೆಯನ್ನು ದೂರಿದ್ದರ ಮೇರೆಗೆ ವಿಶ್ವಾಮಿತ್ರನು ಕಡು ಕುಪಿತನಾಗಿ, ಹರಿಶ್ಚಂದ್ರನಿಗೆ ಕಾಣಿಸಿಕೊಂಡು ಅವನನ್ನು ಶಪಿಸುವುದಾಗಿ ಬೆದರಿಸಲು, ಹರಿಶ್ಚಂದ್ರನು ತನ್ನ ತಪ್ಪಿಗಾಗಿ ಒಪ್ಪಿಕೊಂಡರೂ, ಆ ತಪ್ಪು ತನ್ನ ಸತ್ಯಭಂಗರೂಪದ್ದಲ್ಲವೆಂಬ ವಾದಬಿನ್ನಹವನ್ನು ಮುಂಡಿಸಿ, ತನ್ನ ತಪ್ಪಿನ ಪ್ರಾಯಶ್ಚಿತ್ತಾರ್ಥವಾಗಿ ತನ್ನ ಸಮಗ್ರ ಸಾಮ್ರಾಜ್ಯವನ್ನಾದರೂ ಸಂತ್ಯಜಿಸಲು ಸಿದ್ಧನೆಂದು ಒಪ್ಪಿಕೊಂಡದ್ದಕ್ಕೆ, ವಿಶ್ವಾಮಿತ್ರನು ಅವನ ರಾಜ್ಯ ಸಮಗ್ರವನ್ನು ತನಗಾಗಿ ಬೇಡಲು, ಅದನ್ನು ಸಮ್ಮತಿಸಿದ ಹರಿಶ್ಚಂದ್ರನು ಅರಮನೆಗೆ ಬಂದು, ತನ್ನ ಸತಿಸುತರ ಸಮ್ಮತಿಯನ್ನು ಪಡೆದು, ಸಮಸ್ತ ಸಭಿಕರ ಸಾಕ್ಷಿತ್ವದ ಸಮ್ಮುಖದಲ್ಲಿ ತನ್ನ ಸಕಲ ಸಂಪದ್ಯುಕ್ತವಾದ ಸಮುದ್ರ ಮೇಖಲಾಪರಿಯಂತದ ಸಮಗ್ರ ಸಾಮ್ರಾಜ್ಯವನ್ನು ವಿಶ್ವಾಮಿತ್ರರಿಗೆ ಧಾರೆ ಎರೆದು ಕೊಟ್ಟ ಮೇಲೆ, ವಿಶ್ವಾಮಿತ್ರನು ತತ್ಪೂರ್ವಸಂಪಾದ್ಯವಾಗಿ ರಕ್ಷಣೆಗಾಗಿ ಇಡಲ್ಪಟ್ಟಿದ್ದ ತನ್ನ ದ್ರವ್ಯವನ್ನು ಕೊಡಬೇಕೆಂದು ಆಗ್ರಹಪಡಿಸುವಾಗ, ಹರಿಶ್ಚಂದ್ರನು ವಿಗತ ಧನಸಂಪತ್ತಿನ ಸ್ಥಿತಿಯವನಾದುದರಿಂದ ತನ್ನನ್ನು ಸಾಲಗಾರನಾಗಿ ಮಾಡಬೇಕೆಂದೂ, ತಾನು ದುಡಿದು ತಂದು ಆ ಸಾಲ ತೀರ್ಮಾನಿಸುವಂತೆ ಕಾಲಾವಕಾಶ ಕೊಡಬೇಕೆಂದೂ ಬೇಡಿಕೊಳ್ಳಲು, ಅದಕ್ಕೊಪ್ಪಿದ ವಿಶ್ವಾಮಿತ್ರನು ಅವನಿಗೆ ನಾಲ್ವತ್ತೆಂಟು ದಿನಗಳ ಅವಧಿಯನ್ನಿತ್ತು, ತನ್ನ ಸ್ವಾಧಿಕಾರದಿಂದ ಬಾಹಿರವಾದ ಕಾಶೀನಗರಕ್ಕೆ ಹೋಗಿ ಅಲ್ಲಿ ಧನ ಸಂಪಾದಿಸುವುದಕ್ಕೆ ಸಮ್ಮತಿಸಿ, ಆ ಹಣವನ್ನು ವಸೂಲು ಮಾಡುವುದಕ್ಕೆ ನಕ್ಷತ್ರಕನೆಂಬವನನ್ನು ಸಂಗಡವೇ ಇರುವಂತೆ ನಿಯೋಜಿಸಲು, ಹರಿಶ್ಚಂದ್ರನು ತನ್ನೊಡನೆ ಬರುವಂತೆ ಅತ್ಯಂತಾಗ್ರಹದಿಂದ ಕೂಡಿಕೊಂಡ ತನ್ನ ಸತಿಸುತರನ್ನು ಸಂಗಡಿಗರನ್ನಾಗಿರಿಸಿಕೊಂಡು, ತನ್ನ ರಾಜ್ಯ ವಿಯೋಗದಿಂದ ವ್ಯಥಿತರಾದ ಪುರಜನ ಪರಿಜನಾದಿ ಸಮಸ್ತ ಜನ ಸಂದೋಹಕ್ಕೆ

ಸಮಾಧಾನವನ್ನುಪದೇಶಿಸಿ, ಅಲ್ಲಿಂದ ಹೊರಟು ಕಾಶಿಗಭಿಮುಖ ವಾಗಿ ಪ್ರಯಾಣಿಸುತ್ತಾ, ಮಾರ್ಗಕ್ರಮಣದಲ್ಲಿ ಹಸಿವೆ, ಬಾಯಾರಿಕೆ, ದೇಹಾಯಾಸ ಮೊದಲಾದ ಸಮಸ್ತ ಸಂಕಷ್ಟಗಳನ್ನು ಸಹಿಸಿ ಕೊಳ್ಳುತ್ತಾ, ಅವನ ಸತ್ಯನಿಷ್ಠಾತ್ಯಜನಾರ್ಥಕ್ಕಾಗುವ ವಿಶ್ವಾಮಿತ್ರ ತಂತ್ರಜನ್ಯವಾದ ಅನೇಕ ಆತಂಕ ಯುಕ್ತಿಗಳಿಗೆ ಬಲಿಬೀಳದಂಥ ಜಾಗ್ರತೆಯನ್ನಿಟ್ಟುಕೊಳ್ಳುತ್ತಾ, ಮಾರ್ಗಮಧ್ಯೆ ಕಾಣಿಸಿಕೊಂಡ ಕಾಳ್ಗಿಚ್ಚಿನ ಕಡುನಿರೋಧಕ ಕಷ್ಟವನ್ನು ಉತ್ತೀರ್ಣ ಮಾಡಿ ಕೊಳ್ಳುತ್ತಾ, ನಕ್ಷತ್ರಕನಿಂದ ಆಗಾಗ್ಗೆ ಕೊರಡೆ ಪೆಟ್ಟಿನ ಕ್ರೂರ ಹಿಂಸೆಯನ್ನು ಸಹಿಸಿಕೊಳ್ಳುತ್ತಾ, ಅಂತು ಮುಂಬರಿದು, ಕಾಶೀನಗರ ವನ್ನು ತಲ್ಪಿದಾಗ, ಅಷ್ಟಕ್ಕೆ ಅವಧಿಯೊಳಗಣ ನಾಲ್ವತ್ತಾರು ದಿನಗಳು ಮುಗಿದುಹೋಗಿದ್ದುದರಿಂದ, ಮತ್ತುಳಿದ ಎರಡೇ ದಿನಗಳೊಳಗೆ ಋಣಪರಿಹಾರಾರ್ಥದ ವಿಪುಲ ಧನಾರ್ಜನೆಗೆ ಅನ್ಯತ್ರ ಸಾಧನಾ ಸಂಭವತೆಯಿಂದ, ಹರಿಶ್ಚಂದ್ರನು ತನ್ನ ಸತಿ ಸುತರನ್ನು ಕೌತುಕ ನೆಂಬೊಬ್ಬ ಧನಾಢ್ಯ ವಿಪ್ರನಿಗೆ ವಿಕ್ರಯಿಸಿ ಧನಸಂಗ್ರಹಿಸಿದಾಗ, ಆ ಧನವನ್ನು ನಕ್ಷತ್ರಕನು ತನ್ನ ಸಂಬಳಕ್ಕೆಂದು ಸೆಳೆದುಕೊಂಡು ಹರಿ ಶ್ಚಂದ್ರನನ್ನು ಪುನಃ ನಿರ್ಧನತ್ವದ ನೈರಾಶ್ಯಣಿಕಾವಸ್ಥೆಗೇ ನೂಕಿಬಿಡಲು, ಹರಿಶ್ಚಂದ್ರನು ಕೊನೆಗೆ ಅಲ್ಲಿಯ ಸ್ಮಶಾನದಧಿಕಾರಿಯಾದ ವೀರ ಬಾಹುಕನೆಂಬ ಒಬ್ಬ ಚಾಂಡಾಲನಿಗೆ ತನ್ನನ್ನು ಮಾರಿಕೊಂಡು, ಅದರಿಂದ ತನ್ನ ಸಾಲತೀರ್ಮಾನಕ್ಕೆ ಸಾಕಾಗುವಷ್ಟು ಸಂಗ್ರಹವಾದ ಧನವನ್ನು ನಕ್ಷತ್ರಕನ ಮೂಲಕ ವಿಶ್ವಾಮಿತ್ರನಿಗೆ ಕಳುಹಿಸಿ, ಋಣ ವಿಮುಕ್ತನಾಗಿ, ತಾನು ಚಾಂಡಾಲ ದೂತನಾಗಿ ಪರಿವರ್ತಿತನಾ ದರೂ ಸತ್ಯವಂತನಾಗಿಯೇ ಉಳಿದುಕೊಂಡದ್ದಕ್ಕೆ ಆತ್ಮ ಹರ್ಷ ದಿಂದಿರಲು, ಇತ್ತ ಕೌಹುಕನ ಮನೆಯಲ್ಲಿ ಸೇವಾವೃತ್ತಿ ನಿಯುಕ್ತರಾ ಗಿರುತ್ತಿದ್ದ ಚಂದ್ರಮತಿ ಮತ್ತು ಲೋಹಿತಾಕ್ಷರು ಕೌಹುಕ ಸತಿಯಾ ಗಿದ್ದ ಕಲಹಕಂಠಿ ಎಂಬಾಕೆಯಿಂದ ಬಹುಪರಿಯ ಭಂಗಭರ್ತ್ಸನೆಗಳಿಗೆ ಬಲಿಯಾಗಿ, ಕೊನೆಗೊಂದು ದಿನ ಕಟ್ಟಿಗೆ ತರುವುದಕ್ಕೆಂದು ಕಳುಹ ಲ್ಪಟ್ಟ ಲೋಹಿತಾಕ್ಷನು ಕುರುಚುಲು ಕಾಡೊಂದರಲ್ಲಿ ಕಾಳಸರ್ಪ ಸಂದಷ್ಟನಾಗಿ ಕೊಲ್ಲಲ್ಪಡಲು, ತತ್ವೃತ್ತಾಂತ ಸಿಕ್ಕಿದಾಗ, ಚಂದ್ರ

ಮತಿಯು ತನ್ನೊಡೆಯರನ್ನು ದೀನ ಪ್ರಾರ್ಥನೆಯಿಂದ ಒಲಿಸಿ, ಅವರ ಪರವಾನಗಿಯನ್ನು ಪಡೆದು, ಪುತ್ರನ ಶವವಿದ್ದಲ್ಲಿಗೆ ಬಂದು, ಕಂಡು, ದುಸ್ಸಹ ದುಃಖವನ್ನನುಭವಿಸಿ, ಕೊನೆಗೆ ಆ ಶವವನ್ನು ಸ್ಮಶಾನಕ್ಕೆ ಹೊತ್ತುತಂದು, ತದ್ದಹನ ವ್ಯವಸ್ಥೆಯನ್ನು ಮಾಡುತ್ತಿರಲು, ತತ್ಪ್ರದೇಶಾಧಿಕಾರಿಯ ಸೇವಾವೃತ್ತಿಯಲ್ಲಿರುತ್ತಿದ್ದ ಹರಿಶ್ಚಂದ್ರನೇ ಸ್ವಾಧಿಕಾರದಿಂದ ಅವಳಾ ಕಾರ್ಯವನ್ನು ನಿರೋಧಿಸಿ, ಅಲ್ಲಿಯ ನಿಯಮಾನುಸಾರವಾಗಿ ತೆರಿಗೆಯನ್ನು ಕಡ್ಡಾಯವಾಗಿ ಕೇಳಿದ್ದಕ್ಕೆ, ಅವಳು ತನ್ನ ನಿರ್ಧನತ್ವವನ್ನು ಬಿನ್ನವಿಸಿದಾಗ, ಹರಿಶ್ಚಂದ್ರನು ತೆರಿಗೆಯ ಹಣದ ಬದಲಿಗೆ ಅವಳ ಮಂಗಲಸೂತ್ರವನ್ನು ಯಾಚಿಸಲು, ಅದರಿಂದ ಅವನು ತನ್ನ ಪತಿಯೆಂದು ಗುರುತಿಸಿಕೊಂಡ ಚಂದ್ರಮತಿಯು ತನ್ನ ವಿನಯ-ಭಕ್ತಿಯನ್ನು ತೋರಿ ತೆರಿಗೆಯ ರಿಯಾಯಿತಿಯನ್ನು ಪ್ರಾರ್ಥಿಸಿಕೊಂಡದ್ದಕ್ಕೆ, ಆ ಸಲುವಾಗಿ ಹರಿಶ್ಚಂದ್ರನು ತನ್ನೊಡೆಯನಾದ ವೀರ ಬಾಹುಕನಲ್ಲಿಗೆ ಬರುತ್ತಿರಲು, ಅತ್ತ ವಿಶ್ವಾಮಿತ್ರ ತಂತ್ರಪ್ರಯೋಗಾತ್ ಸಂಘಟಿತವಾದ ವೈಚಿತ್ರ್ಯದಿಂದ ಕಾಶೀರಾಜನ ಶಿಶುವೊಂದು ಕಳವಾಗಿ, ಆ ಕಳ್ಳತನದ ಶೋಧಾಕಾರ್ಯದಲ್ಲಿ ವಿಶ್ವಾಮಿತ್ರ ಕಾಪಟ್ಯ ಚಮತ್ಕಾರದಿಂದ ಆ ಚಂದ್ರಮತಿಯೇ ಕಳವುಗಾರಳೆಂದು ತಿಳಿಯಲ್ಪಟ್ಟು, ಅದರಿಂದ ಆಕೆಗೆ ವಧೆಯೇ ಶಿಕ್ಷೆಯೆಂದು ನಿಶ್ಚಯಿಸಲ್ಪಟ್ಟು, ಅವಳನ್ನು ವಧಿಸುವುದಕ್ಕೆ ಹರಿಶ್ಚಂದ್ರನೇ ವಧಾಕಾರನೆಂದು ನಿಯಮಿಸಲ್ಪಟ್ಟವನಾದುದರಿಂದ, ಅವನು ಸ್ವಾಮಿ ಆಜ್ಞಾಪಾಲನಾನಿಷ್ಠೆಯಿಂದ, ತನ್ನ ಅಂತಃಕರಣದ ಸತಿಪರ ವ್ಯಾಮೋಹ ವಿಕಾರವನ್ನು ನಿವಾರಿಸಿಕೊಂಡು, ಅವಳ ಶಿರಚ್ಛೇದನಕ್ಕೆಂದು ಕೃತನಿಶ್ಚಿತನಾಗಿ ಕೈಯ ಖಡ್ಗವನ್ನು ಮೇಲೆತ್ತಿದಾಗ, ಅಷ್ಟಕ್ಕಲ್ಲಿಗೆ ತ್ರಿಮೂರ್ತಿಗಳೂ ಪ್ರತ್ಯಕ್ಷರಾಗಿ, ವಸಿಷ್ಠ ವಿಶ್ವಾಮಿತ್ರಾದ್ಯರೂ ಸಾರಿ ಬಂದು, ಹರಿಶ್ಚಂದ್ರನ ಸತ್ಯನಿಷ್ಠೆಗೆ ಸುಪ್ರಸನ್ನರಾಗಿ, ಲೋಹಿತನೂ ವಿಷಪ್ರಭಾವ ವಿಮುಕ್ತಿಯನ್ನು ಪಡೆದು ಪುನಶ್ಚೇತನಗೊಳ್ಳುವಂತೆ ಮಾಡಿ, ಅವರೆಲ್ಲರಿಗೂ ತತ್ಪರಿಯಂತದ ಸಮಸ್ತ ಸಂತ್ರಾಸ ಸ್ಥಿತಿಯಿಂದ ಬಿಡುಗಡೆಮಾಡಿ, ಅವರನ್ನು ಪುನಃ ಅವರ ಅಯೋಧ್ಯೆಗೆ ಬರುವಂತೆಮಾಡಿ. ಅವರ ರಾಜ್ಯವೈಭವಗಳನ್ನು ಅವರಿಗೇ ಮರಳಿಸಿ,

ಅವರ ಸ್ಥಿರಸತ್ಕೀರ್ತಿಯನ್ನು ಸಂಸ್ಥಾಪಿಸಿ, ಮಂಗಲಾಶೀರ್ವಾದ ಗಳಿಂದ ಅವರ ಶುಭವನ್ನು ಕೋರಿದರು ಎಂಬೀ ಕಥೆಯು ಬೋಧಾಂಶವು.

೪೭ ಭಸ್ಮಾಸುರ—ಮೋಹಿನೀ ಪ್ರಸಂಗವು

ದಯಾ, ಕಾರುಣ್ಯ ಇತ್ಯಾದಿಗಳು ಧಾರ್ಮಿಕ ಭಾವ ಪ್ರಚೋದಕಗಳಾದ ಸದ್ಗುಣಗಳೇ ಸರಿ. ಆದರೆ, ಸಂದರ್ಭೌಚಿತ್ಯ ವನ್ನು ಪರಿಗ್ರಹಿಸುವ ಪ್ರಬಲ ವಿಚಾರಶಕ್ತಿಯು ಇಂಥ ಗುಣಗಳಿಗೆ ಪೂರ್ವಭಾವಿಯಾಗಿರುವುದು ಅತ್ಯಾವಶ್ಯಕ. ಬುದ್ಧಿಪೂರ್ವಕ ಭಾವದಲ್ಲಿ ಇಂಥ ಸದ್ಗುಣಗಳ ಅನುಸರಣೆಯು ಕೃತಿಕರ್ಮಗಳು ಉಂಟಾದರೆ, ಅವು ಧರ್ಮಸಾಮಂಜಸ್ಯದ ಪುಣ್ಯಕರ್ಮಗಳೆಂದಾಗಿ ತತ್ಪರಿಣಾಮದಿಂದ ಶುಭವುಂಟಾಗುವುದು. ಸಾಂದರ್ಭಿಕ ಸಮುಚಿ ತತ್ವವನ್ನು ಸಮಾಲೋಚಿಸುವ ಸಾಮರ್ಥ್ಯ ಸಾಲದ, ವಿಚಾರ ಶೈಥಿಲ್ಯ ದವರ ಔದಾರ್ಯಾದಿ ಪರೋಪಕಾರ ಗುಣವು, ತದ್ಗುಣ ಸಂಪನ್ನರಿಗೆ ಲೇಸಿಗೆ ಬದಲಾಗಿ ಹಾನಿಯನ್ನೇ ಉಂಟುಮಾಡುವ ಸಂಭವವಿದೆ. ದಾನ ಧರ್ಮಾದಿ ಲೋಕೋಪಕಾರದ ಪುಣ್ಯ ಕರ್ಮವನ್ನು ಮಾಡುವಾಗ, ತದ್ಧೇತುಕವಾಗ ಔದಾರ್ಯವನ್ನು ವಿಚಾರಶೂನ್ಯತೆ ಯಿಂದ ಪ್ರಯೋಗಿಸಬಾರದು. 'ಸುಕ್ಷೇತ್ರೇ ವ್ಯಾಪಯೇದ್ಬೀಜಂ, ಸುಪಾತ್ರೇದೀಯತೇದಾನಂ' ಎಂಬಂತೆ, ಕ್ಷೇತ್ರಪರಿಸ್ಥಿತಿಯನ್ನು ವಿಚಾ ರಿಸಿ ಬೀಜವ್ಯಾಪನೆ ಮಾಡುವಂತೆ, ಪಾತ್ರಪರಿಸ್ಥಿತಿಯನ್ನು ವಿಚಾರಿಸಿ ದಾನಮಾಡುವುದು ವಿಹಿತವು. ಹಾಗಲ್ಲದೆ ಹೋದರೆ, 'ಅಪಾತ್ರದಾ ನೇನ ಭವೇತ್ ದರಿದ್ರೀ' ಎಂಬಂತೆ ಪಾತ್ರ ವಿಚಾರವಿಹೀನನ ಔದಾರ್ಯಪೂರ್ವಕ ದಾನವು ಹಾನಿಕಾರಕವಾಗಿಯೇ ಪರಿಣಮಿಸ ಬಹುದು. ಇದು, ಒಂದು ದಿನ ಕೈಲಾಸದ ಶಿವನಿಂದ ಸ್ವಾಂಗ ಲೇಪನಾನಂತರದಲ್ಲಿ ಹೊರಗೆಸೆಯಲ್ಪಟ್ಟ ಭಸ್ಮದಿಂದ ಉತ್ಪತ್ತಿಯಾದ ಉದ್ಧಟ ಘೋರ ರಾಕ್ಷಸನೊಬ್ಬನು ಆ ಶಿವನಿಂದ ಭಸ್ಮಾಸುರನೆಂದೆನಿಸಿ ಕೊಂಡು ಶಿವನಿಂದಲೇ ಶಿಕ್ಷಣಪಡೆದು ವ್ಯವಹಾರ ಕುಶಲಿಗನಾಗಿ, ಆ ಶಿವನಿಗೆ ಭಸ್ಮಸಂಗ್ರಹ ಮಾಡಿಕೊಡುವ ಸೇವೆಗೆ ನಿಯೋಜಿತನಾಗಿ,

ಕಾಲಕ್ರಮೇಣದಲ್ಲಿ ಒಂದು ದಿನ ಶಿವಸತಿಯಾದ ಪಾರ್ವತಿಯ ಸೌಂದರ್ಯವನ್ನು ಸಮೀಕ್ಷಿಸಿ, ಕಾಮವಿಕಾರಗ್ರಸ್ತನಾಗಿ ಆಕೆಯನ್ನು ಸ್ವವಶಕ್ಕೆ ಸಾಧಿಸಿಕೊಂಬ ದುರುದ್ದೇಶದಿಂದ ಧೂರ್ತಯುಕ್ತಿಯನ್ನು ಯೋಚಿಸಿ, ತದನುಸಾರವಾಗಿ ಒಂದು ದಿನ ಕಪಟದೈನ್ಯತೆಯನ್ನು ನಟಿಸಿ, ವಿನಯಪ್ರಾರ್ಥನೆಯ ಕಾಪಟ್ಯವನ್ನು ಪ್ರಯೋಗಿಸಿ, ತಾನು ಯಾವನ ತಲೆಯ ಮೇಲೆ ಕೈಯಿಡುವನೋ, ಅಂಥವನು ಒಡನೆ ಸುಟ್ಟುರಿದು ಹೋಗುವಂಥ ಒಂದು ವರವನ್ನು ಶಿವನಿಂದ ಪಡೆದು, ಆ ವರ ಪ್ರಯೋಗದಿಂದ ಆ ಶಿವನನ್ನೇ ಸುಟ್ಟುರುಹುವ ದುಸ್ಸಂಕಲ್ಪದಿಂದ ಅವನ ತಲೆಗೇ ತನ್ನ ಕೈಯನ್ನಿಡಬೇಕೆಂದು ಮುಂಬರಿಯಲು ಸ್ವಯಂನಾಶನದ ಭೀತಿಗೆ ಬಲಿಯಾದ ಶಿವನು ಅವನಿಂದ ತಪ್ಪಿಸಿಕೊಳ್ಳುತ್ತಾ ಪಾರ್ವತೀ ಸಮೇತನಾಗಿ ಬಹು ಪ್ರದೇಶಗಳಿಗೆ ಓಡಿದರೂ, ಭಸ್ಮಾಸುರನು ಬೆನ್ನಟ್ಟಿ ಬರುತ್ತಿರಲು, ಕೊನೆಗೆ ವೈಕುಂಠದ ಮಹಾವಿಷ್ಣುವಿನೊಡನೆ ಶಿವನು ತನ್ನ ದುಸ್ಥಿತಿಯನ್ನು ದೂರಿಕೊಂಡುದಕ್ಕೆ, ಆ ವಿಷ್ಣುವು ತನ್ನ ಮಾಯಾತಂತ್ರವನ್ನು ಪ್ರಯೋಗಿಸಿ, ಮೋಹಿನೀ ರೂಪವನ್ನು ತಾಳಿ, ಭಸ್ಮಾಸುರನಿಗೆ ಕಾಣಿಸಿಕೊಂಡು ತನ್ನ ವಿಪುಲ ವಿಸ್ಮಯಕಾರೀ ಸ್ಫುರದ್ರೂಪ ಲಾವಣ್ಯಾದಿಗಳಿಂದ ಅವನನ್ನು ತನ್ನತ್ತ ಆಕರ್ಷಿಸಿಕೊಂಡು, ಅವನಿಗೆ ತನ್ನ ಪರವಾದ ಕಾಮವಿಕಾರೋತ್ಪತ್ತಿಯಾಗುವಂತೆ ಮಾಡಿದಾಗ, ಅವನು ಈ ಮೋಹಿನಿಯನ್ನು ತನ್ನನ್ನು ಕೂಡಿಕೊಳ್ಳಬೇಕೆಂದು ಕೋರಲು, ಆ ಸಲುವಾಗಿ ತನ್ನನ್ನು ಅನುಕರಿಸಿ ನಾಟ್ಯವಾಡಬೇಕೆಂದು ಶರ್ತಮಾಡಲಾಗಿ, ಅದಕ್ಕವನು ಸಮ್ಮತಿಸಿ ಸಿದ್ಧನಾಗಲು, ಮೋಹಿನಿಯು ನಾಟ್ಯವಾಡುತ್ತಾಡುತ್ತಾ ಆಂಗೀಕಾಭಿನಯ ಕ್ರಮದಲ್ಲಿ ತನ್ನ ಕೈಯನ್ನು ತನ್ನ ತಲೆಯಮೇಲಿಟ್ಟುಕೊಂಡಾಗ, ತದನುಕರಣೆಯಿಂದ ಆ ದೈತ್ಯನೂ ತನ್ನ ಕೈಯನ್ನು ತನ್ನ ತಲೆಯಮೇಲಿಟ್ಟುಕೊಂಡಲ್ಲಿ, ತತ್ಪೂರ್ವದಲ್ಲಿ ಶಿವದತ್ತವಾಗಿದ್ದ ವರದಂತೆ ಅವನು ಒಡನೆಯೇ ಸುಟ್ಟುಹೋಗಿ, ಶಿವಪಾರ್ವತಿಯರ ಕ್ಲೇಶವು ಕಳೆಯಿತು ಎಂಬೀ ಕಥೆಯ ಬೋಧಾಂಶವು.

೪೮ ಶ್ರೀಕೃಷ್ಣಲೀಲಾ—ಕಂಸವಧಾ ಪ್ರಸಂಗ

ದೈವಾಯತ್ತವಾದ ಸಂಪತ್ತೋ ಅಧಿಕಾರವೋ ಆಢ್ಯತೆಯೋ ಇದೆಯಾದರೆ, ಅದನ್ನು ಪರಪೀಡನಾರ್ಥವಾಗಿ ಪ್ರಯೋಗಿಸುವ ಪೌರುಷವು ವಿಚಾರಶೀಲರಾದ ನ್ಯಾಯವಾದಿಗಳಿಗೆ ಸರ್ವಥಾ ಸಲ್ಲದು. ಯಾಕೆಂದರೆ ಅಂಥ ಪೌರುಷವು ಮೊದಲು ಇಷ್ಟಫಲ ದಾಯಕವಾಗಿ ಕ ಂ ಡು ಬ ರ ಬ ಹು ದಾ ದ ರೂ, ಕೊನೆಗೆ ಅ ನಿ ಷ್ಟ ಫ ಲ ದಾ ಯ ಕ ವಾ ಗಿ ಯೇ ತೀರುವುದು. ಜೀವಾತ್ಮನು ಕೆಲವು ವಿಚಾರಗಳಲ್ಲಿ ತನ್ನ ಸಹಜ ಯೋಗ್ಯತಾನುಸಾರವಾಗಿ ನಿಯಮಿತವಾದ ಕಿಂಚಿತ್ ಸ್ವಾತಂತ್ರ್ಯವನ್ನು ಪಡೆದಿರುವವನಾದರೂ, ತನ್ನ ಮಹದಭಿಲಾಷಾಪೂರ್ತಿಗಾಗುವ ಪೂರ್ಣ ಸ್ವಾತಂತ್ರ್ಯ ಪಡೆದವನಲ್ಲವೇ ಅಲ್ಲ. ಯಾವ ಮಾನುಷಿಕ ಬಲಿಷ್ಠ ಬುದ್ಧಿಬಲಕ್ಕೂ ತರ್ಕ್ಯವಾಗಿ ಸಿಕ್ಕದ ವಿಸ್ಮಯದ ಮಹಾಶಕ್ತಿಯೊಂದು, ತನ್ನ ವಿಚಿತ್ರ ತಂತ್ರದಿಂದ, ಈ ಜಗತ್ತಿನ ಸ್ವಾಸ್ಥ್ಯ ಸಂಘಾತಕವಾದ ದುರ್ಜನ ದರ್ಪಕೃತಿಯನ್ನು ದಮನಮಾಡಿ, ಪ್ರಪಂಚವನ್ನು ಅಧೋಗತಿಗೊಯ್ಯುವ ಅಪಕರ್ಷಕ ಕಾಲವನ್ನು ಅಡ್ಡಿಮಾಡಿ, ಪ್ರಪಂಚದ ಪ್ರಗತಿಗಾಗುವ ಉತ್ಕರ್ಷಕ ಕಾಲವನ್ನು ಉತ್ಪತ್ತಿಮಾಡಿ, ಸ್ವಯಂ ಪ್ರಭಾವದಿಂದ ಸಮಗ್ರ ಪ್ರಪಂಚವನ್ನು ಸಂರಕ್ಷಿಸುತ್ತದೆ. ಆದುದರಿಂದ, ಸಕಲ ಸಂದರ್ಭಗಳಲ್ಲೂ ತಾನೇ ಸಂಪೂರ್ಣ ಸಮರ್ಥನು—ತಾನೇ ಸಂಪೂರ್ಣ ಸ್ವತಂತ್ರನು ಎಂಬುದು ದರ್ಪಿಷ್ಟ ಮನೋವೃತ್ತಿಯ ದುರ್ವಿಕಲ್ಪಾತ್ಮಕವಾದ ವ್ಯರ್ಥ ವಿಚಾರವೇ ಸರಿ. ಇದು, ತನ್ನ ತಂದೆಯನ್ನು ರಾಷ್ಟ್ರಾಧಿಕಾರದಿಂದ ತಳ್ಳಿ ಸೆರೆಯಲ್ಲಿರಿಸಿ ತಾನೇ ಸ್ವಯಂ ಅಧಿಕಾರದಿಂದ ಮಧುರಾಪುರ ಪಾಲಕನಾಗಿ ಉನ್ಮತ್ತತನದಿಂದ ಮೆರೆಯುತ್ತಿದ್ದ ಕಂಸನೆಂಬವನು, ಸಹೋದರಿ ದೇವಕಿಯನ್ನು ವಸುದೇವನಿಗೆ ಲಗ್ನಮಾಡಿಸಿ, ಆ ವಿವಾಹೋತ್ಸವದ ವಿಜೃಂಭಣಾ ಕಾರ್ಯಕ್ರಮದ ಅಂಗವಾಗಿ ವಧೂವರರನ್ನು ರಥದಲ್ಲಿ ಕುಳ್ಳಿರಿಸಿ ತಾನೇ ಸಾರಥಿಯಾಗಿ, ಮೆರವಣಿಗೆ ಮಾಡುತ್ತಿರಲು, ತಾನಾಗಿ ಕೇಳಿಸಿದ ಅಶರೀರವಾಣಿಯ ಪ್ರಕಾರ, ತನ್ನ ತಂಗಿಯ ಭಾವೀ ಅಷ್ಟಮ ಶಿಶುವಿನಿಂದ ತನಗೆ ಮರಣ ಸಂಭವ

ವೆಂದು ಗ್ರಹಿಸಿ, ತನ್ಮರಣಪ್ರಾಪ್ತಿ ಯೋಗಪ್ರತಿಬಂಧನಾರ್ಥವಾಗಿ ತಂಗಿಯನ್ನು ಕೊಲೆಗೈಯಲುಪಕ್ರಮಿಸಲು, ವಸುದೇವನು ತನ್ನ ಭವಿಷ್ಯದ್ಸಂತಾನವನ್ನು ಕಂಸನಿಗೆ ತಂದೊಪ್ಪಿಸುವುದಾಗಿ ವಾಗ್ದಾನ ಮಾಡಿದ್ದಕ್ಕೆ, ಕಂಸನು ಸಹೋದರಿಯ ಕೊಲೆಯ ವಿಚಾರವನ್ನು ಹಿಂದೆಗೆದು, ವಸುದೇವಕಿಯರನ್ನು ಸೆರೆಯಲ್ಲಿಸಿ, ವಸುದೇವನಿಂದ ಒಪ್ಪಿಸಲ್ಪಟ್ಟ ಅಷ್ಟಮಾತ್ಪೂರ್ವದ ಶಿಶುಗಳನ್ನು ಕಂಸನು ಕೊಲ್ಲದೆ ಬಿಟ್ಟರೂ, ನಾರದೋಪದೇಶತಂತ್ರ ಪರಿಣಾಮವಾಗಿ ಆ ಎಲ್ಲಾ ಮಕ್ಕಳನ್ನು ಕಡೆಗೆ ಕೊಂದು ಕಳೆದು, ಕೊನೆಯ ಅಷ್ಟಮ ಶಿಶು ಜನನವನ್ನು ಕಾಯುತ್ತಿರಲು, ಅತ್ತ ಕಾರಾಗೃಹದಲ್ಲಿ ದೇವಕಿಯ ಅಷ್ಟಮ ಗರ್ಭದಿಂದ ಶ್ರಾವಣ ಬಹುಳ ಅಷ್ಟಮಿ ಮಧ್ಯರಾತ್ರಿಯಲ್ಲಿ ಜನನವಾದ ಮಹವಿಷ್ಣುವಿನ ಅವತಾರರೂಪದ ಗಂಡು ಮಗುವು ಅನ್ಯರಿಗೆ ಅವೇದ್ಯವಾದರೂ, ವಸುದೇವಕಿಯರಿಂದ ಸ್ತುತಿಸಲ್ಪಟ್ಟು, ಮತ್ತಾ ಮಗುವು ಕೊಟ್ಟ ನಿರ್ದೇಶನದ ಮೇರೆಗೆ, ವಸುದೇವನು ಆ ಮಗುವನ್ನು ಚಾಮತ್ಕಾರಿಕವಾದ ದೈವ ಸಹಾಯವನ್ನಾಶ್ರಯಿಸಿ, ಅನ್ಯರಿಗೆ ಅಗೋಚರಿತವಾಗಿ, ಗೋಕುಲಕ್ಕೆ ಒಯ್ದು, ಅಲ್ಲಿ ನಂದಗೋಪನಲ್ಲಿ ಇಟ್ಟುಬಿಟ್ಟು, ಅಲ್ಲಿದ್ದ ಸ್ತ್ರೀ ಶಿಶುವೊಂದನ್ನು ಮರಳಿ ತನ್ನ ಕಾರಾಗೃಹಕ್ಕೆ ತಂದಿರಿಸಿಕೊಂಡಿರಲು, ಅದನ್ನೇ ದೇವಕಿಯ ಅಷ್ಟಮ ಶಿಶುವೆಂದು ಬಗೆದ ಕಂಸನು ಅದನ್ನು ಕೊಲ್ಲಲೆಳಸಿದಾಗ, ಅದು ಅದ್ಭುತಾಕಾರವಾಗಿ ಪರಿವರ್ತಿಸಿ, ದೇವಕಿಯ ನಿಜ ಶಿಶುವು ಕೃಷ್ಣ ನಾಮಕನಾಗಿ ನಂದಗೋಕುಲದಲ್ಲಿರುವ ನಿಜವೃತ್ತಾಂತವನ್ನು ತಿಳಿಸಿ, ತಾನು ಕಂಸನ ಕೈಯಿಂದ ತಪ್ಪಿ ದೂರಸಾಗಿದ ಮೇಲೆ ಕಂಸನು ಸಂಭವನೀಯವಾದ ತನ್ನ ಭವಿಷ್ಯನ್ಮರಣದ ಪ್ರತಿಬಂಧನಾರ್ಥವಾಗಿ, ಉಭ್ರಮೆಯಿಂದ ಊರಲ್ಲಿಯ ಹಲವು ಮಕ್ಕಳನ್ನು ಕೊಲಿಸಿದ್ದಲ್ಲದೆ, ಕೃಷ್ಣನನ್ನು ಕೊಲ್ಲುವುದಕ್ಕಾಗಿ ತನ್ನತ್ತಣದಿಂದ, ಪೂತನಿ, ಶಕಟ, ಧೇನುಕ, ವತ್ಸ, ವಾತ, ತೃಣ, ಬಕ ಮುಂತಾದ ಅನೇಕ ರಾಕ್ಷಸರನ್ನು ಕಳುಹಿಸಿದರೂ ಆ ರಾಕ್ಷಸರೇ ಶ್ರೀಕೃಷ್ಣನಿಂದ ಯುಕ್ತಿಪ್ರಯುಕ್ತಿಗಳಿಂದ ಕೊಲ್ಲಲ್ಪಟ್ಟರಲ್ಲದೆ, ಅತ್ತ ಶ್ರೀಕೃಷ್ಣನು ಬಲರಾಮನೆಂಬೋರ್ವ ಅಣ್ಣನ ಸಂಗಡಿಗನಾಗಿ, ಬಾಲಕೇಳಿ ವಿಲಾಸ

ಮಗ್ನನಾಗಿ ಜನಮನ ಮೆಚ್ಚುಗೆಗೆ ಪಾತ್ರನಾಗುತ್ತಾ, ಗೋಪೀವಸ್ತ್ರಾಪಹರಣ, ರಾಸಕ್ರೀಡಾ, ಕಾಳೀಯ ಸರ್ಪದರ್ಪಹರಣ, ಗೋವರ್ಧನೋದ್ಧರಣ, ಗೋಪಾಲ ವೃತ್ತಿ ಮೊದಲಾದ ಲೀಲಾತ್ಮಕ ಕುತಲ ಕೃತಿ ಚಾಮತ್ಕಾರಿಕ ಜನೋಪಕಾರಗಳನ್ನು ಮಾಡುತ್ತಾ ಸಜ್ಜನ ಪ್ರಶಂಸೆಗೆ ಪಾತ್ರನಾಗುತ್ತಾ 'ದೇವ'ನೆಂದು ಮಾನ್ಯನಾಗುವ ಉನ್ನತ ಮಟ್ಟಕ್ಕೇರಿ ಮೆರೆಯುತ್ತಿರಲು, ಇತ್ತ ನಾರದ ಮುನ್ಯುಪದೇಶದಿಂದ ಪ್ರೇರಿತನಾದ ಕಂಸನು, ಕೃಷ್ಣನನ್ನು ತನ್ನಲ್ಲಿಗೆ ತರಿಸಿ ಕೊಲ್ಲಬೇಕೆಂದು ಬಗೆದು, ಅದಕ್ಕಾಗುವ ಯುಕ್ತಿ ಎಂದು ತನ್ನರಮನೆಯಲ್ಲಿ 'ಬಿಲ್ಲ ಹಬ್ಬ'ವೆಂಬ ಒಂದು ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಿ, ಆ ಹಬ್ಬಕ್ಕೆ ನಿಮಂತ್ರಣಗೈಯುವುದಕ್ಕಾಗಿ ಕೃಷ್ಣಬಲರಾಮರಲ್ಲಿಗೆ ಅಕ್ರೂರನೆಂಬ ಅಮಾತ್ಯನನ್ನು ನಿಯೋಜಿಸಲು, ಶ್ರೀಕೃಷ್ಣಪರ ಸದ್ಭಾವಾಪನ್ನನೂ, ಸದ್ವಿಚಾರಸಂಪನ್ನನಾದ ಹರಿಭಕ್ತನೂ ಆಗಿದ್ದಾ ಅಕ್ರೂರನು ನಂದಗೋಕುಲಕ್ಕೆ ಹೋಗಿ, ಶ್ರೀಕೃಷ್ಣ ಸಂದರ್ಶನ ಪಡೆದು, ಭಕ್ತಿಪೂರ್ವಕವಾದ ನಮಸ್ಕಾರಾದಿಗಳಿಂದ ಶ್ರೀಕೃಷ್ಣ ಬಲರಾಮರನ್ನು ನಯುಗೊಂಡು ಕಂಸನ ಆಮಂತ್ರಣವನ್ನು ತಿಳಿಸಿದ್ದಕ್ಕೆ, ಶ್ರೀಕೃಷ್ಣನು ನಂದಯಶೋದಾದ್ಯರ ಸಮ್ಮತಿಯನ್ನು ಪಡೆದು, ತನ್ನ ಸಹವಾಸವಿಯೋಗಕ್ಕಾಗಿ ದುಃಖಪಡುವ ಗೋಕುಲದ ತನ್ನ ಸಂಗಾತಿ ಸಂಗಾತಿನಿಯರಿಗೆ ಸಮುಚಿತ ಸಮಾಧಾನವನ್ನಿತ್ತು, ಬಲರಾಮನ ಸಮೇತ ಅಕ್ರೂರನ ಸಂಗಡ ರಥಾರೋಹಿಯಾಗಿ ಮಥುರೆ ಪ್ರಯಾಣ ಬೆಳೆಸಿ, ಮಾರ್ಗಮಧ್ಯೆ ಅಕ್ರೂರನಿಗೆ ಅವನು ಕಾಳಿಂದಿ ನದಿಯಲ್ಲಿ ಸ್ನಾನಮಾಡುತ್ತಿರುವಲ್ಲಿ ತನ್ನ ಸಾರ್ವಪ್ರಾದೇಶಿಕ ಸುವ್ಯಾಪ್ತವಾದ ಸುಂದರ ಸ್ವರೂಪದ ಸಂದರ್ಶನದ ಚಮತ್ಕಾರವನ್ನು ಮಾಡಿ, ಮಥುರೆಗೆ ತಲ್ಪಿದಾಗ ಅಕ್ರೂರನ ಸಂಗಡವನ್ನು ಬಿಟ್ಟು, ಆ ರಾತ್ರಿಯಲ್ಲಿ ಆ ನಗರದಲ್ಲಿ, ದರ್ಪವುಳ್ಳ ದುಷ್ಟ ರಜಕನೊಬ್ಬನ ಕೊಲೆ—ಕುಬ್ಜೆಯಾಗಿದ್ದ ಸಾಧ್ವೀ ಸೈರಂಧ್ರಿಯೊಬ್ಬಳಿಗೆ ಶರೀರ ಸ್ವಾಸ್ಥ್ಯಪ್ರದಾನ—ಇಂಥಿಂಥ ಚಮತ್ಕಾರಗಳಿಂದ ಪುರಜನೋಪಕಾರ ಮಾಡುತ್ತಿರಲು, ಆ ರಾತ್ರಿಯಲ್ಲಿ ದುಃಸ್ವಪ್ನದರ್ಶನಾತ್ ತನ್ನ ಮರಣದ ಸೂಚನೆಯನ್ನು ಸಂಗ್ರಹಿಸಿದ ಕಂಸನು ಭೀತನಾದರೂ, ಧೀರ

ನಾಗಿಯೇ ಉಳಿದು, ಬೆಳಗಾಗುತ್ತಲೇ ಎದ್ದು, ಅಸ್ತ್ರ ಶಾಲೆಯಲ್ಲಿ ಅವಾಂತರಗೈದ ಕೃಷ್ಣ ವಾರ್ತೆಯಿಂದ ದಿಗಿಲುಬಿದ್ದು, ರಭಸದಿಂದ ಸಭೆಗೈದು, ಕುವಲಯಪೀಡಾ ಎಂಬ ಆನೆಯಿಂದ ಕೃಷ್ಣನ ಕೊಲೆ ಗಾಗಿ ಸಾಧನೆ ಮಾಡಿದರೂ. ಆ ಆನೆಯೇ ಕೃಷ್ಣನ ಪ್ರತಿಘಾತದಿಂದ ಸತ್ತುಬಿದ್ದುದನ್ನು ಸಮಕ್ಷಮದಲ್ಲಿ ಕಂಡಾ ಮೇಲೆ, ಚಾಣೂರ ಮುಷ್ಟಿಕರೆಂಬ ಮಲ್ಲಜಟ್ಟಿಗಳಿಂದ ಕೃಷ್ಣಬಲರಾಮರ ಕೊಲೆಗಾಗಿ ಸಾಧನೆ ಮಾಡಿದರೂ, ಆ ಮಲ್ಲಜಟ್ಟಿಗಳೇ ಕೃಷ್ಣ ಬಲರಾಮರಿಂದ ಪೆಟ್ಟು ತಿಂದು ಸತ್ತದ್ದನ್ನು ಸಮಕ್ಷಮದಲ್ಲಿ ಕಂಡ ಮೇಲೆ, ಸ್ವನಾಶ ಸಂಭವ ವಿಚಾರವು ಸ್ವಾಂತಃಕರಣದಲ್ಲಿ ಸುನಿಶ್ಚಯವಿದ್ದರೂ, ಕೃಷ್ಣ ದ್ವೇಷ ತ್ಯಜನಕ್ಕೆ ಸಮ್ಮತಿಸದೆ, ಹುಮ್ಮಸದಿಂದ ತಾನೇ ತನ್ನ ಸಮಗ್ರ ಕಾಯುಕಸುವನ್ನು ಪ್ರಯೋಗಿಸಿ ಕೃಷ್ಣನೊಡನೆ ಕಾಳಗವಿತ್ತದ್ದರಿಂದ, ಶ್ರೀಕೃಷ್ಣನು ತನ್ನ ದಿವ್ಯ ಶಕ್ತಿ ಪ್ರಯೋಗದಿಂದ ಅವನನ್ನು ಬೀಳ್ಗೆಡಹಿ, ಪ್ರತ್ಯಕ್ಷದಲ್ಲಿ ಅವನನ್ನು ನಿಗ್ರಹಿಸಿದರೂ, ಅಪ್ರತ್ಯಕ್ಷವಾಗಿ ಅವನ ಪಾಪಪೂರಿತ ಪ್ರಪಂಚ ಬಂಧನ ವಿಮುಕ್ತರೀತ್ಯಾ ಅನುಗ್ರಹಿಸಿ, ಉಗ್ರ ಸೇನಾದಿಗಳ ಬಂಧನ ವಿಮೋಚನೆ ಮಾಡಿ, ಲೋಕಶಾಂತಿ ಸ್ಥಾಪನೆ ಮಾಡಿ ಸ್ತುತ್ಯಾರ್ಹನಾದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೪೯ ಪ್ರಹ್ಲಾದ ಚರಿತ್ರೆ ಪ್ರಸಂಗ

ಜೀವಾತ್ಮನಿಗೆ ಪರಮಾತ್ಮನಲ್ಲಿರುವ ಅನವರತದ ಅನುರಾಗ ವಿಶೇಷವೇ ಹರಿಭಕ್ತಿಯು. 'ಭಕ್ತಿಸಾ ಪರಮಪ್ರೇಮಾ' ಎಂಬಿತ್ಯಾದಿ ನಾರದ ಸೂತ್ರಗಳಿಂದಲೂ, ಪರಮಾತ್ಮನಲ್ಲಿ ಇಡುವ ಪರಮಪ್ರೇಮ ವೇ ಹರಿಭಕ್ತಿಯ ಸ್ವರೂಪವೆಂದು ಹೇಳಲ್ಪಡುತ್ತದೆ. ಆ ಭಗವ ದ್ಭಕ್ತಿಯು ಶುಭಪ್ರಭಾವದಿಂದಲೇ ಪ್ರಾಪಂಚಿಕ ಕರ್ಮಗಳಲ್ಲಿ ಧಾರ್ಮಿಕತೆ ಉಂಟಾಗುತ್ತದೆ. ಧಾರ್ಮಿಕತೆಯೇ ಪ್ರಾಪಂಚಿಕ ಕರ್ಮಗಳ ಅರ್ಥಾತ್ ಪ್ರಪಂಚ ಜೀವನದ ಸುವ್ಯವಸ್ಥೆ. ಆದುದ ರಿಂದ ಹರಿಭಕ್ತಿಯು, ಪ್ರಾಪಂಚಿಕ ಜೀವನದ ಸುವ್ಯವಸ್ಥಾವಶ್ಯಕತೆ ಯುಳ್ಳ ಪ್ರವೃತ್ತಿಪರನಿಗೂ, ಅಂತೆಯೇ, ಪಾರತ್ರಿಕ ಸುಖಾಪೇಕ್ಷೈ

ಕಲಕ್ಷ್ಯವುಳ್ಳ ನಿವೃತ್ತಿಪರನಿಗೂ ಸಮಾನ ಅಗತ್ಯ. ಜೀವಾತ್ಮನಿಗೆ ಪರಮಾತ್ಮಾನುಗ್ರಹವೇ ಶುಭಸಂಸಿದ್ಧಿಗೆ ಮುಖ್ಯವು; ಆ ಪರಮಾತ್ಮಾನುಗ್ರಹ ಸಂಪಾದನೆಗೆ ಭಕ್ತಿಯೇ ಮುಖ್ಯವು. ಆದುದರಿಂದ, ಲೋಕ ಜೀವನರಂಗದಲ್ಲಿ, ಜೀವಾತ್ಮರುಗಳಿಗೆ ಸ್ಥೂಲಶರೀರ ಸ್ಥಿತಿಯ ಮೇರೆಗೆ, ವಯ-ಲಿಂಗ-ರೂಪ-ಗುಣ-ಕ್ರಿಯಾ-ಜಾತೀತ್ಯಾದಿಗಳಲ್ಲಿ ವೈವಿಧ್ಯವೆಷ್ಟಿದ್ದರೂ, ಲೋಕಾತೀತನಾದ ಪರಮಾತ್ಮನ ಅನುಗ್ರಹ ಸಾಧನೆಯ ಈ ಭಕ್ತಿಯ ವಿಚಾರದಲ್ಲಿ ಎಲ್ಲರಿಗೂ ಸಮಾನಾಧಿಕಾರವೇ ಸರಿ. ಆರ್ತನಾಗಿ, ಜಿಜ್ಞಾಸುವಾಗಿ, ಅರ್ಥಾರ್ಥಿಯಾಗಿ ಭಕ್ತಿಯನ್ನು ಸಾಧಿಸಿ, ತತ್ಸಾಧನಾರಂಗದಿಂದ ಮುಂದೆ ಸಾಗಿ ಜ್ಞಾನಿಯಾಗಿ ಭಕ್ತಿಯನ್ನು ಸಿದ್ಧಿಮಾಡಿಕೊಳ್ಳಬೇಕು. ಅರ್ಥಾತ್ ಫಲಾಪೇಕ್ಷೆಯಿಂದೊಡಗೂಡಿದ ಪರಮಾತ್ಮ ಪ್ರೇಮವು ಭಕ್ತಿಯೇ ಆದರೂ ಅದು ಸಾಧನಾವ್ಯವಸ್ಥೆಯ ಗೌಣಭಕ್ತಿಯು; ಅದರಿಂದ ಮುಂಬರಿದು, ಫಲಾಪೇಕ್ಷಾರಹಿತವಾದ ಕೇವಲ ರಾಗಾತ್ಮಿಕವಾದ ಪರಮಾತ್ಮ ಪ್ರೇಮವೇ ಜ್ಞಾನಿ ಸಿದ್ಧವಾಗಿರುವ ಮುಖ್ಯ ಭಕ್ತಿಯು. ಆ ಭಕ್ತಿಯ ಸಿದ್ಧಿಗಾಗಿ ಯಾವ ತೆರನಾದ ಪ್ರಾಪಂಚಿಕ ಆಘಾತವ್ಯಾಘಾತಗಳಿಂದ ಕದಲಿಹೋಗದಂಥ ಅವಿಚಲದ ಬಲಿಷ್ಠ ಭಗವತ್ಪ್ರೇಮವು ಭಾವಸ್ಥವಿರಬೇಕು. ಅಂಥ ಸುದೃಢ ಭಕ್ತನಿಗೆ ಪರಮಾತ್ಮಾನುಗ್ರಹವು ದೊರೆತು ಪೂರ್ಣ ಶುಭಪ್ರಾಪ್ತಿಯಾಗುವುದು. ತತ್ತ್ವೋಪದೇಶ ಗ್ರಹಣದಿಂದ-ಸದ್ಗ್ರಂಥ ವಾಚನದಿಂದ-ಸದ್ಬೋಧಾಶ್ರವಣದಿಂದ-ಹೀಗೆ ಹಲವು ಕಾರಣಗಳಿಂದ ಹರಿಭಕ್ತಿಯು ಸುವಿಚಾರ ಸಂಗ್ರಹಪೂರ್ವಿಯಾಗಿ ಸಂಜನಿಸಬಹುದು. ಆದರೆ ಕೆಲವು ಅಪೂರ್ವ ಪುಣ್ಯ ಪುರುಷರಿಗೆ, ಯಾವ ಬಾಹ್ಯಗೋಚರ ಕಾರಣವೂ ಇಲ್ಲದೆ, ಪುರಾಕೃತ ಪುಣ್ಯಫಲದಿಂದ ಜನ್ಮತಃ ಸಿದ್ಧವಾದ ಕೇವಲ ತಮ್ಮ ಅಂತಃಕರಣ ಸಂಸ್ಕೃತಿಯಿಂದಲೇ ಅರ್ಥಾತ್, ತಮ್ಮ ಚಿತ್ತದಿಂದಲೇ ಹರಿಭಕ್ತಿ ಭಾವವು ಇರುವುದುಂಟು. ಅಂಥವರು ತಮ್ಮ ಪಾವಿತ್ರ್ಯ ಪ್ರಭಾವದಿಂದ ಲೋಕವನ್ನೇ ಪಾವನಮಾಡಿ, ಸ್ತೋತ್ರಾರ್ಹರೂ ಪೂಜ್ಯರೂ ಆಗುವರು. ಇದು, ವೈಕುಂಠದ ದ್ವಾರಪಾಲರಾಗಿದ್ದ ಜಯವಿಜಯರೆಂಬಿಬ್ಬರು ಸನಕಸನಂದಾದಿ ಋಷಿಗಳಿಂದ ಶಾಪಗ್ರಸ್ತರಾದುದರ

ಮೇರೆಗೆ, ಭೂಲೋಕದಲ್ಲಿ ದಿತಿಕುಮಾರರಾಗಿ ಜನಿಸಿ, ಹಿರಣ್ಯ ಕಶ್ಯಪು ಮತ್ತು ಹಿರಣ್ಯಾಕ್ಷರೆಂಬ ನಾಮದಿಂದ ಶೋಣಿತಾನಗರದ ಅರಸುಗಳಾಗಿ ಮೆರೆಯುತ್ತ, ತಮ್ಮ ಆಸುರೀಗುಣಜನ್ಯವಾದ ಸುಪ್ರ ತಾಪ ಅದ್ಭುತಕೃತಿ ಪರಿಣಾಮದಿಂದ ಭೂಮಿ ಸಮಗ್ರಕ್ಕೆ ಬಾಧಾ ಕಾರಕರಾಗಿ ಅದರಲ್ಲಿ ಹಿರಣ್ಯಾಕ್ಷನು ಭೂದೇವಿಯ ಪ್ರಾರ್ಥನಾನು ಸಾರವಾಗಿ ವರಾಹಾವತಾರಿಯಾಗಿ ಬಂದ ಶ್ರೀಹರಿಯಿಂದ ಹನನ ವಾದ ಮೇಲೆ, ಆ ಹರಿಗೆ ಪ್ರತೀಕಾರ ಮಾಡುವ ಸಲುವಾಗಿ ತನ್ನ ತಪಃ ಫಲಸಿದ್ಧಿಯಿಂದ ಪ್ರಾಪ್ತವಾದ ಪ್ರಾಬಲ್ಯ ಸಮಗ್ರವನ್ನು ಪ್ರಯೋಗಿಸಿ ದರೂ ಕೃತಾರ್ಥನಾಗದ ಹಿರಣ್ಯಕಶಿಪುವು ಹರಿದ್ವೇಷವನ್ನೇ ಭಾವದಲ್ಲಿ ಬೆಳೆಸಿಕೊಳ್ಳುತ್ತಾ, ದುರುಳನಾಗಿ, ದರ್ಪದಿಂದ ಧರೆಭಾರವಾಗಿ ಮೆರೆಯುತ್ತಿರಲು, ನಾರದನ ಗುಪ್ತೋಪದೇಶದಿಂದ ಹರಿಭಕ್ತಿ ವಿಚಾ ರವನ್ನು ಗುಟ್ಟಾಗಿ ಸಂಗ್ರಹಿಸಿಟ್ಟುಕೊಂಡಿದ್ದ ಅವನ ರಾಣಿಯಾದ ಕಯಾದು ದೇವಿಯು ಕ್ರಮೇಣ ಗರ್ಭಿಣಿಯಾಗಿ ಸುಕುಮಾರ ನೊಬ್ಬನನ್ನು ಪಡೆದು, ಅವನಿಗೆ ಪ್ರಹ್ಲಾದನೆಂದು ನಾಮಕರಣವನ್ನು ಕಾಲಕ್ರಮೇಣ ಚೌಲಾದಿ ಸಂಸ್ಕಾರಗಳನ್ನೂ ಪೂರೈಸಿ, ಅವನ ಐದನೇ ವರ್ಷದಲ್ಲಿ ಅಕ್ಷರಾಭ್ಯಾಸಾದಿ ವಿದ್ಯೆಗಾಗಿ ಚಂಡ ಮತ್ತು ಅಮಾರ್ಕರೆಂಬ ಗುರುಗಳನ್ನು ನೇಮಿಸಲು, ಆ ಗುರುಮಠದಲ್ಲಿ ಅವನು ಅನುಪದಿಷ್ಟನಾಗಿಯೇ ಹರಿನಾಮಸ್ಮರಣೆ ಮಾಡುತ್ತಿರುವುದು ತಿಳಿದುಬಂದಾಗ, ಹರಿದ್ವೇಷ ಸುಬದ್ಧನಾದ ಅವನ ತಂದೆಗೆ ಅದು ತೀರಾವಿರುದ್ಧವೆಂದು ಅವನ ಆ ಹರಿಭಕ್ತಿಯನ್ನು ಬಿಡಿಸುವುದಕ್ಕಾಗಿ ಆ ಗುರುಗಳು ಶತಪ್ರಯತ್ನಮಾಡಿಯೂ ನಿಷ್ಫಲವಾಗಲು, ಅವ ನನ್ನು ಮರಳಿ ಹಿರಣ್ಯಕಶಿಪುವಿಗೇ ಒಪ್ಪಿಸಿದ ಮೇಲೆ, ಹಿರಣ್ಯಕಶಿ ಪುವು ಅವನ ಹರಿಭಕ್ತಿಯನ್ನು ಬಿಡಿಸುವುದಕ್ಕೆ ಬಲ್ಬಗೆಯ ಯತ್ನ ಗಳನ್ನು ಮಾಡಿದರೂ ಪ್ರಯೋಜನವಾಗದೆ, ಕೊನೆಗೆ ಕೋಪ ತಾಳಿ, ಪುತ್ರಮೋಹವನ್ನು ಸಂತ್ಯಜಿಸಿ, ಕ್ರೂರನಾಗಿ, ಅವನಿಗೆ ಅಗ್ನಿತಪನ, ಹಸ್ತಿಪಾದಾತ್ ಮರ್ದನ, ಸರ್ಪಶಿಕ್ಷಾಪ್ರಯೋಗ, ಪರ್ವತ ಶಿಖ ರಾನ್ನಿಪಾತ, ಕಡೆಯಲ್ಲಿ ಅವನ ಸ್ವಮಾತೃ ಹಸ್ತಮೂಲಕ ವಿಷಪ್ರ ದಾನ— ಇಂಥಿಂಥ ಕ್ರೂರಶಿಕ್ಷೆಯನ್ನು ಒಂದೊಂದನ್ನಾಗಿ ವಿಧಿಸಿದರೂ

ಆ ಬಾಲಕನ ಹರಿಭಕ್ತಿಯು ಕಿಂಚಿನ್ಮಾತ್ರದಲ್ಲಿಯೂ ತ್ಯಕ್ತವಾಗದು ದನ್ನು ತಿಳಿದು, ಕೊನೆಗೆ ತಾನೇ ಖಡ್ಗಪಾಣಿಯಾಗಿ, ಹುಡುಗನ ಹೆಡದಲೆಯನ್ನು ಹಿಡಿದು, ಹರಿಯು ಸರ್ವತ್ರ ವ್ಯಾಪಿ ಎಂಬ ಅವನ ಹರಿಸ್ತುತಿವಾದದ ಸತ್ಯ ಸಾಕ್ಷಾತ್ಕಾರಕ್ಕಾಗಿ ಅಲ್ಲಿದ್ದ ಒಂದು ಕಂಬದಲ್ಲಿ ಹರಿಯನ್ನು ತನಗೆ ಕಾಣಿಸಬೇಕೆಂದು ಕಡ್ಡಾಯ ಮಾಡುತ್ತಾ, ಅದಾಗದಿದ್ದರೆ, ಅವನನ್ನು ಅಲ್ಲೇ ಕಡಿದುರುಳಿಸುವೆನೆಂದು ಬೆದರಿಸುತ್ತಾ, ಆ ಕಂಬವನ್ನು ತನ್ನ ಕಾಲಿಂದೊದೆಯುವಷ್ಟಕ್ಕೆ ಶ್ರೀಹರಿಯು ಅದ್ಭುತ ಕ್ರಮದಿಂದ ನರಸಿಂಹರೂಪನಾಗಿ ಕಂಬದಿಂದ ಹೊರಗೆ ಉದಯಿಸಿ, ಹಿರಣ್ಯಕಶಿಪುವನ್ನು ಹಿಡಿದು, ಕೆಡೆದು, ತನ್ನ ತೊಡೆಯ ಮೇಲಿಟ್ಟು ಬಡಿದು, ಅವನ ಹೊಟ್ಟೆಯನ್ನು ಸೀಳಿ, ಕರಳ್ಗಳನ್ನು ತೆಗೆದು ಕೊಂದು, ಆ ಮೇಲೆ ಪ್ರಹ್ಲಾದನ ಪ್ರಾರ್ಥನಾನುಸಾರವಾಗಿ ಶಾಂತಾಕಾರನಾಗಿ, ಭಕ್ತವಾತ್ಸಲ್ಯಕ್ಕೆ ದೃಷ್ಟಾಂತ ಸ್ವರೂಪನಾಗಿ ಸ್ತೋತ್ರಾರ್ಹ ಮಂಗಲರೂಪನಾದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

೫೦ ಬ್ರಹ್ಮಕಪಾಲ ಪ್ರಸಂಗ

ಕರ್ಮವು ಪರಿಣಾಮಕಾರಕವು. ದುಷ್ಪರಿಣಾಮವು ಯಾರಿಗೂ ಅಭಿಲಷಣೀಯವಲ್ಲವು. ಆದುದರಿಂದ ದುಷ್ಪರಿಣಾಮ ಹೇತುಕವಾದ ಕರ್ಮವು ಸರ್ವಥಾ ಸಂತ್ಯಾಜ್ಯವು. ಈ ಎಚ್ಚರಿಕೆಯು ಕರ್ಮಪ್ರಪಂಚದ ಪ್ರತಿಯೊಬ್ಬನಿಗೂ ಇರಬೇಕಾದುದು ಅತ್ಯಾವಶ್ಯಕವು. ಗುಣಾಶ್ರಯವಾಗಿ ಅಥವಾ ಗುಣಾನುಸರಣೆಯಿಂದ ಕರ್ಮೋತ್ಪತ್ತಿಯಾಗುತ್ತದೆ ಎಂಬ ತರ್ಕಪ್ರಕಾರ, ದುಷ್ಪರಿಣಾಮ ಕಾರಕವಾದ ಕರ್ಮಕ್ಕೆ ದುರ್ಗುಣಾಶ್ರಯವೇ ಕಾರಣವು. ಆದುದರಿಂದ ದುರ್ಗುಣವಿರಹಿತನಾಗಿರಬೇಕಾದುದೇ ದುಷ್ಪರಿಣಾಮಕಾರೀ ದೂಷ್ಯ ಕರ್ಮಪ್ರಸಕ್ತತೆಗೆ ಮುಖ್ಯ ಉಪಾಯ. ಕಾಮಕ್ರೋಧಾದಿ ಅಂತಃಕರಣ ವಿಕಾರಗಳೇ ದುರ್ಗುಣಗಳೆಂದು ಗಣ್ಯವು. ಅಂಥ ವಿಕಾರವೃತ್ಪತ್ತಿಗೆ ಹೇತುವಾಗುವಷ್ಟು ಅಂತಃಕರಣ ದೌರ್ಬಲ್ಯಕ್ಕಾಸ್ಪದಕೊಡದೆ, ಸೌಬಲ್ಯ ಸಂಸಿದ್ಧಿಯನ್ನು ಪಡೆದು, ಭದ್ರನಾಗಿ

ಉಳಿಯುವಂತೆ ಸುಜ್ಞಾನ ಸಂಗ್ರಹದಿಂದ ಚಿತ್ತಸಂಸ್ಕಾರವನ್ನು ಮಾಡಿಟ್ಟುಕೊಳ್ಳಬೇಕಾದುದೇ ಮುಖ್ಯವು. ಇದನ್ನೊಲ್ಲದೆ, ಗುಣ ಕಾಲುಷ್ಯದಿಂದ ಚಿತ್ತಚಾಂಚಲ್ಯವನ್ನು ಪಡೆದು, ದುರ್ಗುಣ ಪ್ರಭಾವಕ್ಕೆ ಅಂತಃಕರಣದಲ್ಲಿ ಆಸ್ಪದವಿಟ್ಟು, ಅದರಿಂದ ದುಷ್ಕರ್ಮಾಚರಣೆಗೆ ಸಿಲುಕಿಬಿಟ್ಟರೆ, ಅದರಿಂದ ಬರುವ ದುರ್ದೆಶೆಯ ವೇಳೆಯಲ್ಲಿ ಪಶ್ಚಾತ್ತಾಪದಿಂದ ಪರಿತಪಿಸಬೇಕಾಗುವುದು. ‘ಅವಶ್ಯಂ ಅನುಭೋಕ್ತವ್ಯಂ ಶುಭಾಶುಭ ಕರ್ಮಫಲಂ’ ಎಂಬ ಕರ್ಮಜಾಗ್ರತೆಯನ್ನುಪದೇಶಿಸುವ ಸತ್ಯಸೂಕ್ತಿಯು ಸರ್ವದಾ ಸುಲಕ್ಷ್ಯ ಸಂಸ್ಥಿತವಾಗಿರಬೇಕು. ಇದು, ಸತ್ಯಲೋಕಾಧೀಶನಾದ ಬ್ರಹ್ಮನು, ನಿರ್ದೋಷ ಸೌಂದರ್ಯವನ್ನು ನಿರ್ಮಾಣಮಾಡಬೇಕೆಂಬ ತನ್ನ ಸಂಕಲ್ಪಾನುಸಾರವಾಗಿ, ಒಂದು ಮಹದ್ಯಜ್ಞ ಮೂಲಕವಾಗಿ ಶಾರದಾದೇವಿಯನ್ನು ಉತ್ಪತ್ತಿಮಾಡಿ, ಆಕೆಯ ವಯೋಬುದ್ಧಿಗಳ ಪ್ರೌಢಿಮಾವಸ್ಥೆಯಲ್ಲಿ, ಆಕೆಯ ಅಭಿಲಾಷೆಯನ್ನನುಮತಿಸಿ, ಆಕೆಗೆ “ವಿದ್ಯಾಧೀಶ್ವರೀ” ಪಟ್ಟವನ್ನು ಕಟ್ಟುವುದೆಂದು ನಿಶ್ಚಯಿಸಿ, ತತ್ಸಂಬಂಧದ ಮಹೋತ್ಸವವೊಂದನ್ನು ಏರ್ಪಡಿಸಿ, ಸಕಲ ದೇವತೆಗಳನ್ನು ಆಮಂತ್ರಿಸಿದರೂ, ಮನ್ಮಥ ಮತ್ತು ಶಿವ—ಇವರಿಬ್ಬರಿಗೆ ಆಮಂತ್ರಣ ನೀಡದಿದ್ದುದರಿಂದ, ಮನೋವೈಷಮ್ಯ ತಾಳಿದ ಮನ್ಮಥದೇವನು ಮರೆಯಿಂದಲೇ ಆ ಬ್ರಹ್ಮನಿಗೆ ತನ್ನ ಬಾಣಪ್ರಯೋಗ ಮಾಡಲು, ಅದರಿಂದ ಬ್ರಹ್ಮನು ಮೋಹಾವೇಶಪೂರಿತನಾಗಿ ಅಲ್ಲಿದ್ದ ಆ ಶಾರದೆಯನ್ನೇ ವರಿಸಲು, ತದ್ವೃತ್ತಾಂತ ಸಂಗ್ರಹದಿಂದ ಕೋಪಗ್ರಸ್ತನಾದ ಕೈಲಾಸಪತಿ ಶಂಕರನು ಬ್ರಹ್ಮನಲ್ಲಿಗೆ ಬಂದು, ಅಲ್ಲಿ ಬ್ರಹ್ಮಶಾರದೆಯರ ಪರಸ್ಪರ ಪ್ರೇಮ ಮಿಳನ ವಿಷಯಕವಾದ ನ್ಯಾಯಶೋಧನಾತ್ಮಕವಾದ ವಿವಾದವು ಬಲು ತುರುಸಿನಿಂದ ಸಾಗುತ್ತಾ, ಕೊನೆಗೆ ಶಿವನು ಬ್ರಹ್ಮನ ಒಂದು ಶಿರಸ್ಸನ್ನೇ ಕೈಯಿಂದ ಕಿತ್ತಾಗ, ಆ ಬ್ರಹ್ಮಕಪಾಲವು ಶಿವಹಸ್ತವನ್ನು ಬಿಡದೆ ಕಚ್ಚಿಹಿಡಿದು, ತನ್ನ ರಕ್ತದಾಹಕ್ಕಾಗಿ ಕಾಡುತ್ತಿರಲು, ಅದರ ತೃಪ್ತ್ಯರ್ಥವಾಗಿ ಶಿವನು ಭಿಕ್ಷಾಟನವನ್ನು ಕೈಗೊಂಡು, ದಿಗಂಬರನಾಗಿ ಪರ್ಯಟನ ಮಾಡುತ್ತಾ ದೇವಲೋಕಕ್ಕೆ ಬಂದು, ಅಲ್ಲಿಯ ದೇವತೆಗಳಿಂದ

ಸತ್ಕಾರ ಉಪಚಾರಾದಿಗಳನ್ನು ಸ್ವೀಕರಿಸಿ, ಗಂಧರ್ವ ಲೋಕಕ್ಕೆ ಬಂದು, ಅಲ್ಲಿಯ ಅಧಿಕಾರಿಣಿಯು ತನ್ನನ್ನು ಪರಿಹಾಸ್ಯಮಾಡಿ ತಿರಸ್ಕಾರ ಮಾಡಿದಾಗ ಅವಳ ದುರಹಂಕಾರಕ್ಕುಚಿತವಾದ ಶಾಪ ವನ್ನಿತ್ತು, ಪಾತಾಳಲೋಕಕ್ಕೆ ಬಂದು, ಅಲ್ಲಿಯ ಋಷಿಪತ್ನಿಯರ ಆದರಪೂರ್ವಕ ಸತ್ಕಾರಕ್ಕೊಳಪಟ್ಟದ್ದರಿಂದ, ತತ್‌ಸ್ತ್ರೀಯರ ಪತಿ ಗಳಲ್ಲಿ ಮುಖಂಡನಾದ ಮಹೋಗ್ರನೆಂಬೋರ್ವ ಮುನಿಯು ಆ ಶಿವ ನಲ್ಲಿ ಪ್ರಕೋಪಯುಕ್ತನಾಗಿ, ಪ್ರದ್ವೇಷ ಪ್ರತಾಪದಿಂದ ತನ್ನ ಮಂತ್ರ-ತಂತ್ರ ವಿದ್ವತ್ಪ್ರಯೋಗದಿಂದ, ಶೂಲ, ಸರ್ಪ, ಡಮರು ಇತ್ಯಾದ್ಯಾ ಯುಧಗಳನ್ನು ನಿರ್ಮಿಸಿ, ಅವುಗಳಿಂದ ಶಿವನನ್ನು ತುಡುಕಲು, ಶಿವನು ಸ್ವಯಂ ಪ್ರಭಾವದಿಂದ ಅವುಗಳನ್ನು ಸ್ವಾಧೀನಕ್ಕೆ ಸೆಳೆದಿಟ್ಟು ಕೊಂಡು ಅವುಗಳನ್ನು ತನ್ನ ಹಸ್ತಭೂಷಣ—ಅಂಗ ಭೂಷಣಗಳ ನ್ನಾಗಿ ಬಳಸಿಕೊಂಡಾಗ, ಪ್ರಾಪ್ತಾಪಜಯದಿಂದ ಖಿನ್ನನಾದ ಆ ಮುನಿಯು ಅಧಿಕತರ ದ್ವೇಷ ಸಂಯುಕ್ತನಾಗಿ, ವ್ಯಾಘ್ರಾಸುರ ಗಜಾಸುರರೆಂಬವರನ್ನು ಶಿವನ ಮೇಲೆ ಛೂಬಿಡಲು, ಶಿವನು ಅವ ರನ್ನು ಸಂಹರಿಸಿ, ಅವರ ಚರ್ಮವನ್ನು ತನ್ನ ಅಚ್ಛಾದನಾರ್ಥದ ವಸ್ತ್ರ ವನ್ನಾಗಿ ಬಳಸಿಕೊಂಡಾಗ, ಅದರಿಂದ ಗರ್ವಭಂಗಿತನಾದ ಆ ಮಹೋಗ್ರ ಮುನಿಯು ತನ್ನ ಸಂಪೂರ್ಣ ಸೋಲನ್ನು ಸ್ವೀಕರಿಸಿ, ಶಿವನಿಗೆ ಶರಣುಬಂದು ಕ್ಷಮಾಯಾಚನೆ ಮಾಡಿಕೊಂಡದ್ದಕ್ಕೆ, ಅವ ನಿಗೆ ಅಭಯಾನುಗ್ರಹಗಳನ್ನು ಮಾಡಿದ ಶಿವನು, ಅನಂತರ ವೈಕುಂಠ ಕ್ಕೈದು, ಅಲ್ಲಿ ಶ್ರೀ ಲಕ್ಷ್ಮೀನಾರಾಯಣರಿಂದ ಸತ್ಕೃತನಾಗಿ, ಕೊನೆಗೆ ನಾರಾಯಣನ ಕೃಪಾತಂತ್ರದಿಂದ ಬ್ರಹ್ಮಕಪಾಲ ವಿಮುಕ್ತಹಸ್ತ ನಾಗಿ, ಭೂಮಿ ಲೋಕದ ಕುರುಕ್ಷೇತ್ರ ಎಂಬಲ್ಲಿಗೆ ಎಸೆಯಲ್ಪಟ್ಟ ಆ ಕಪಾಲಕ್ಕೆ ಶ್ರೀಮನ್ನಾರಾಯಣನಿತ್ತ ಸಮಾಧಾನಕ್ಕೆ ತಾನೂ ಅನು ಮೋದಿಸಿ, ಶಿವನು ಕೈಲಾಸಕ್ಕೆ ಮರಳಿದನು ಎಂಬೀ ಕಥೆಯಿಂದ ಸಿಗುವ ಬೋಧಾಂಶವು.

ಶ್ರೀ

ಪ್ರತಿಷ್ಠಾನದ ಪ್ರಕಾಶನಗಳು

೧. ಮಹಾಮಾತೆ ಶ್ರೀ ಸಾರದಾದೇವಿ

ಬೆಲೆ: ರೂ. 10/-

ಮಹಾಮಾತೆಯ ದಿವ್ಯಜೀವನದ ಪುಣ್ಯಸ್ಮರಣೆ

— ಸ್ವಾಮಿ ಪ್ರಣವೇಶಾನಂದರಿಂದ

೨. ಅಧ್ಯಾತ್ಮ ಪ್ರೇರಣೆಯಿಂದ ಕರ್ತವ್ಯದೆಡೆಗೆ

ಬೆಲೆ: ರೂ. 2-50

ಕರ್ಮಯೋಗಿ ಡಾ. ಉಪೇಂದ್ರ ಪೈಯವರ ಜೀವನದರ್ಶನ

— ಉ. ಲ. ಕಿಣಿಯವರಿಂದ ಸಂಪಾದಿತ

೩. ಬದುಕಲು ಕಲಿಯಿರಿ

ಬೆಲೆ: ರೂ. 1-50

ಕನ್ನಡದಲ್ಲಿ ಹೊಸಮಾದರಿಯ ವೈಚಾರಿಕ ಪ್ರಬಂಧಗಳು

— ಶ್ರೀತನಯ

೪. ಯಕ್ಷಗಾನ ಸೌರಭ

ಯಕ್ಷಗಾನದ ಕಥಾಭಾಗಗಳ ರಸಮಯ ನಿರೂಪಣೆ

— ಶಂಕರನಾರಾಯಣ ಸಾಮಗರಿಂದ

ಪ್ರತಿಗಳಿಗೆ ಬರೆಯಿರಿ:

ಗ್ರಾಮಸೇವಾ ಪ್ರತಿಷ್ಠಾನ

ಮಣಿಪಾಲ, ದಕ್ಷಿಣ ಕನ್ನಡ

ಮಣಿಪಾಲ ಪವರ್ ಪ್ರೆಸ್, ಮಣಿಪಾಲ